*ಅಧ್ಯಕ್ಷರು.—ವಿಧೇಯಕವನ್ನು ಮಂಡಿಸಲಾಯಿತು.

1985-86ರ ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆ.

*ಶ್ರೀ ಎಸ್. ಬಂಗಾರಪ್ಪ (ಮಾನ್ಯ ವಿರೋಧಪಕ್ಷದ ನಾಯಕರು).—ಸನ್ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು 1985-86ನೇ ಸಾಲಿನ ಆಯವ್ಯಯ ಪತ್ರವನ್ನು ಏನು ಮಂಡಿಸಿದ್ದಾರೆ, ಅದನ್ನು ಕೆಲವು ಕಾರಣಗಳ ಆಧಾರದ ಮೇಲೆ ವಿರೋಧಿಸಿ ಮಾತನಾಡುವುದಕ್ಕೆ ಎದ್ದು ನಿಂತಿದ್ದೇನೆ. ವಿರೋಧ ಮಾಡುವುದಕ್ಕೆ ಕೆಲವು ಪ್ರಮುಖವಾಗಿರತಕ್ಕಂಥ ಅಂಶಗಳು ಕಾರಣವಾಗಿರುತ್ತವೆ ಎನ್ನುವ ಅಭಿಪ್ರಾಯವನ್ನು ಅಂಶವನ್ನು ಮಾನ್ಯ ಸಭಾಧ್ಯಕ್ಷರ ಗಮನಕ್ಕೆ ತರುವುದಕ್ಕೆ ಇಚ್ಛೆ ಪಡುತ್ತೇನೆ. ಈ ಆಯವ್ಯಯ ಪತ್ರವನ್ನು ಮಂಡಿಸುವಾಗ, ಯಾವುದೇ ಪಕ್ಷದ ಸರಕಾರ ಇರಲಿ, ಕೆಲವು ಪ್ರಮುಖವಾದಂಥ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಈ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳದೆ ಆಯವ್ಯಯ ಪತ್ರವನ್ನು ಸಿದ್ಧಮಾಡಿ ಈ ಸದನದ ಒಪ್ಪಿಗೆಗಾಗಿ ಇಟ್ಟಾಗ, ಜನ ವಿರೋಧವಾದ ದೃಷ್ಟಿಯಿಂದ ಹೋದಾಗ, ನಾವು ಅದನ್ನು ವಿರೋಧ ಮಾಡಬೇಕಾಗುತ್ತದೆ. ಈ ಒಂದು ಆಯವ್ಯಯ ಪತ್ರ ಕೆಲವು ಪ್ರಾಮುಖ್ಯವಾದ, ವಿಶೇಷವಾದ ಗುಣಗಳನ್ನು ಹೊಂದಿರಬೇಕಾಗುತ್ತದೆ. ಒಂದು ಆಯವ್ಯಯ ಪತ್ರ ಹಣದುಬ್ಬರಕ್ಕೆ ಎಡೆ ಮಾಡಿಕೊಡಬಾರದು. ಹಣದ ಕೊರತೆ ಇರುವ ಆಯವ್ಯಯ ಪತ್ರವನ್ನು ಒಪ್ಪಿಗೆಗಾಗಿ ಇಟ್ಟಾಗ ಅಥವಾ ಜನತೆಯ ಮುಂದೆ ಇಟ್ಟಾಗ, ಅದು ಹಣದುಬ್ಬರಕ್ಕೆ ಎಡಿಮಾಡಿಕೊಡಬಾರದು. ಎರಡನೆಯದು, ಹಣದುಬ್ಬರಕ್ಕೆ ಎಡೆ ಮಾಡಿಕೊಡುವಂಥ ಆಯವ್ಯಯ ಪತ್ರ ನಮ್ಮ ಮುಂದಿದ್ದಾಗ, ಆ ಹಣದುಬ್ಬರದ ಮೇಲೆ ಉದ್ಭವವಾಗತಕ್ಕಂಥ ಪರಿಣಾಮಗಳು ಇಡೀ ಸಮಾಜದ ಮೇಲೆ, ಸಮಾಜದಲ್ಲಿರತಕ್ಕಂಥ ಎಲ್ಲ ವರ್ಗಗಳ ಮೇಲೆ ತೀವ್ರತರವಾದ ಕೆಟ್ಟ ರೀತಿಯ ಪರಿಣಾಮವನ್ನು ಉಂಟು ಮಾಡುತ್ತದೆ ಎಂಬ ಅಂಶವನ್ನು ನಮ್ಮ ಗಮನದಲ್ಲಿಟ್ಟಿರಬೇಕಾಗುತ್ತದೆ. ಒಂದು ಆಯವ್ಯಯ ಪತ್ರವನ್ನು ಸಿದ್ಧಮಾಡಿದಾಗ, ನಮ್ಮ ರಾಜ್ಯದಲ್ಲಿರತಕ್ಕಂಥ ಡೆವಲಪ್‌ಮೆಂಟಲ್ ಆಕ್ಟಿವಿಟೀಸ್, ಪ್ರಗತಿಪರವಾದ ವಿಚಾರಧಾರಣೆಗಳು, ಯೋಜನೆಗಳ ಚೌಕಟ್ಟಿನಲ್ಲಿ ಇಳಿದುಬರಬೇಕು. ಈ ಯೋಜನೆಗಳು ಕಾರ್ಯಗತವಾಗಿ ಅದರಿಂದ ಸಿಗತಕ್ಕ ಫಲಗಳು, ಪರಿಣಾಮಗಳು ಜನಹಿತದ ಪರವಾಗಿ ಇರುತ್ತವೆ, ಇರಬೇಕು ಎಂಬ ಅಂಶವನ್ನೂ ನಾವು ಗಮನದಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ. ಇದರ ಜೊತೆಯಲ್ಲಿ ಅಗತ್ಯ ವಸ್ತುಗಳ ಬೆಲೆಗಳ ವಿಚಾರ ಇದೆ. ಹಣದುಬ್ಬರಕ್ಕೆ ಎಡೆಮಾಡಿಕೊಡತಕ್ಕಂಥ ಆಯವ್ಯವ ಪತ್ರ ನಮ್ಮ ಮುಂದಿದ್ದಾಗ, ಇಡೀ ಒಂದು ವರ್ಷದವರೆಗಿನ ಪರಿಸ್ಥಿತಿಯ ಅವಲೋಕನೆಯನ್ನು ಈ ಒಂದು ಬಡ್ಜೆಟ್‌ನಲ್ಲಿ ನಾವು ನೋಡಿದಾಗ, ಆಗತ್ಯವಸ್ತುಗಳ ಬೆಲೆ ಏರಿಕೆ, ಹಣದುಬ್ಬರದಿಂದ ಉದ್ಭವವಾಗತಕ್ಕ ಬೆಲೆ ಏರಿಕೆ ಬಂದಾಗ, ಅದು ಜನರ ಇತಿಮಿತಿಯನ್ನು ಜನ ಕೊಳ್ಳತಕ್ಕಂಥ ಶಕ್ತಿಯನ್ನು ಮೀರಿ ಹೋಗುತ್ತದೆ ಎಂಬುದನ್ನು ಗಮನದಲ್ಲಿಡಬೇಕು. ಇದು ಅದನ್ನು ಮೀರಿ ಹೋಗಬಾರದು ಎಂಬ ವಿಚಾರವನ್ನು ನಾವು ಗಮನದಲ್ಲಿ ಇಡಬೇಕು. ಎರಡು ವರ್ಗದ ಜನರನ್ನು ನಾವು ಸಮಾಜದಲ್ಲಿ ಕಾಣುತ್ತೇವೆ. ನೌಕರಿಯಲ್ಲಿದ್ದು ಸೇವೆ ಸಲ್ಲಿಸತಕ್ಕವರು ಒಂದು ವರ್ಗ. ಈ ಸೇವೆಯ ವ್ಯಾಪ್ತಿಯನ್ನು ಬಿಟ್ಟಿರತಕ್ಕಂಥವರು ಮತ್ತೊಂದು ವರ್ಗ. ಗ್ರಾಮಾಂತರ ಪ್ರದೇಶದಲ್ಲೇ ಇರಬಹುದು, ಅರ್ಬನ್ ಏರಿಯಾಸ್‌ನಲ್ಲಿ ಇರಬಹುದು. ಕೂಲಿ ಮಾಡತಕ್ಕಂಥವರು, ಸಣ್ಣಪುಟ್ಟ ಅಂಗಡಿ ಇಟ್ಟು ಜೀವನ ಮಾಡುವರು, ತರಕಾರಿ ಮಾರುವವರು, ಖಾಸಗಿ ಕ್ಷೇತ್ರದಲ್ಲಿ ಬೇರೆ ಉದ್ಯೋಗದಲ್ಲಿರುವವರು, ಈ ವರ್ಗಕ್ಕೆ ಸೇರಿದವರು. ನಗರ ಪ್ರದೇಶದಲ್ಲಿ ಪಟ್ಟಣ ಪ್ರದೇಶದಲ್ಲಿ ನಾವು ಹೆಚ್ಚಾಗಿ ನೌಕರಿ ಮಾಡತಕ್ಕಂಥ ಜನರನ್ನು ಕಾಣುತ್ತೇವೆ. ಬಿಸಿನೆಸ್, ಕೆಲಸ ಇದನ್ನು ಬಿಟ್ಟು ಗ್ರಾಮಾಂತರ ಪ್ರದೇಶದಲ್ಲಿ ನಾವು ನೋಡತಕ್ಕಂಥ ವರ್ಗ, ಕೂಲಿ ಮಾಡತಕ್ಕಂಥ ವರ್ಗ, ಇನ್ನೊಬ್ಬರ ಭೂಮಿಗೆ ಹೋಗಿ ಕೂಲಿಮಾಡಿ ಜೀವನ ಮಾಡಬೇಕು, ಸಾಯಂಕಾಲ ಆದಮೇಲೆ ಆ ದಿನದ ಕೂಲಿಯನ್ನು ಪಡೆದು ಅಂದಿನ ಊಟಕ್ಕಾಗಿ ಅಕ್ಕಿ, ರಾಗಿ, ಜೋಳ, ಮುಂತಾದ ದವಸಧಾನ್ಯಗಳನ್ನು ಕೊಂಡು ಊಟ ಮಾಡತಕ್ಕಂಥ ವರ್ಗವನ್ನು ನಾವು ಕಾಣುತ್ತೇವೆ. ನಾವು ಚಿಕ್ಕವಯಸ್ಸಿನವರಾಗಿದ್ದಾಗ ಇದು ಇರಲಿಲ್ಲ. ಕೂಲಿ ಮಾಡಿಕೊಂಡು ಬಂದಮೇಲೆ ವರ್ಷಕ್ಕೊಂದು ಸಲ ಕೂಲಿ ತೆಗೆದುಕೊಳ್ಳತಕ್ಕ ಪರಿಸ್ಥಿತಿಯನ್ನು ನಾವು ಕಂಡಿದ್ದೇವೆ.

ಜನಸಂಖ್ಯೆಯು ದೊಡ್ಡ ಪ್ರಮಾಣದಲ್ಲಿ ಆಗಿರುವುದೂ ಕಾರಣ ಇರಬಹುದು, ಅಥವಾ ಬೇರೆ ಕಾರಣ ಇರಬಹುದು. ಇವತ್ತು ದಿನಗೂಲಿ ಮಾಡಿ ಜೀವನ ಮಾಡತಕ್ಕ ಜನ ಲಕ್ಷಾಂತರ ಮಂದಿ ಇದ್ದಾರೆ. ಸಮಾಜಕ್ಕೆ ಲಾಭವಾಗುವಂಥ ಒಂದು ವರ್ಗ ಇದೆ. ಆ ವರ್ಗಕ್ಕೆ ತೀವ್ರವಾದ ಪರಿಣಾಮ ಉಂಟಾಗುತ್ತದೆ. ಹಣದುಬ್ಬರದಿಂದ ಬೆಲೆಗಳು ಗಗನಕ್ಕೇರುತ್ತಿರುತ್ತದೆ. ಕೊರತೆಯ ಆಯವ್ಯಯ ಉದ್ಭವವಾದಾಗ ಅದನ್ನು ತೀವ್ರತರವಾಗಿ ಪರಿಗಣಿಸಬೇಕಾಗಿದೆ. ಈ ಒಂದು ಬಡ್ಜೆಟ್ ಹಣದುಬ್ಬರಕ್ಕೆ ಎಡೆ ಮಾಡಿಕೊಡತಕ್ಕ ಭಾರೀ ಕೊರತೆಯನ್ನು ಎದುರಿಸತಕ್ಕ ಆಡಳಿತ ನಿರ್ಮಾಣಕ್ಕೆ ಎಡೆ ಮಾಡಿಕೊಡತಕ್ಕಂಥಾ

ದ್ದಾಗಿದೆ. ವಾರ್ಷಿಕ ಹಣಕಾಸಿನ ಪರಿಸ್ಥಿತಿಯ ಒಂದು ಅವಲೋಕವನ್ನು ನಾವು ನೋಡಿದಾಗ, ಇದು ನಮ್ಮನ್ನು ಪರಿಸ್ಥಿತಿಗೆ ಎಳೆದುಕೊಂಡು ಹೋಗುತ್ತದೆ ಎಂಬುದು ಮುಖ್ಯವಾದ ವಿಚಾರ. ಸರ್ಕಾರಿ ಸೇವೆಯಲ್ಲಿರುವವರು ಕೂಡ ಈ ಒಂದು ಹಣದುಬ್ಬರದ ಅವಲೋಕನ ಮಾಡಬೇಕಾಗುತ್ತದೆ. ಆಗ ಅವರು ಕೂಡಲೇ ತುಟ್ಟಿಭತ್ಯ ಹೆಚ್ಚು ಕೇಳುವುದು, ತಮ್ಮ ಸಂಬಳಗಳನ್ನು ಜಾಸ್ತಿ ಮಾಡುವಂತೆ ಒತ್ತಾಯಿಸುವುದು ಇತ್ಯಾದಿ ಬೇಡಿಕೆಗಳು ಹೆಚ್ಚಾಗಿ ಬರುತ್ತವೆ. ನೌಕರರ ಖರ್ಚಿನ ಪಟ್ಟಿಯನ್ನು ತೆಗೆದುಕೊಂಡು ನೋಡಿದರೆ, ಹಳ್ಳಿಯವರು ಕೂಡ ಸರ್ಕಾರಿ ಸೇವೆಯಲ್ಲಿರುವವರಿಗೆ ಕೊಡಬೇಕಾಗುತ್ತದೆ,

ಅಧ್ಯಕ್ಷರು.—ಎಷ್ಟು ಪರ್ಸೆಂಟ್ ಹೇಳಿ, ನೋಡೋಣ.

ಶ್ರೀ ಎಸ್. ಬಂಗಾರಪ್ಪ.—ಆ ವಿವರಕ್ಕೆ ಬರುತ್ತೇನೆ. ನಾನು ಬಹಳ ನಿಧಾನವಾಗಿ ಹೋಗುತ್ತಿದ್ದೇನೆ. ಈ ಸಂದರ್ಭದಲ್ಲಿ ನಾವು ಎಷ್ಟೋ ಹಣವನ್ನು ಸರ್ಕಾರಿ ಸೇವೆಯಲ್ಲಿರತಕ್ಕವರಿಗೆ ಖರ್ಚು ಮಾಡುತ್ತೇವೆ. ಕೇರಳ, ರಷ್ಯಾ ದೇಶಗಳನ್ನು ಉದಾಹರಣೆಗೆ ತೆಗೆದುಕೊಂಡರೆ, ಸುಮಾರು 60 ಪರ್ಸೆಂಟ್ ಬರುತ್ತವೆ. ಇಲ್ಲಿ ನಾವು ಕೂಡ ಅದರ ಹತ್ತಿರ ಹೋಗಿದ್ದೇವೆ. ಆಂಧ್ರಪ್ರದೇಶ, ತಮಿಳುನಾಡು—ಇವುಗಳಿಗೆ ಹೋಲಿಸಿದರೂ ಸರ್ವ ಸಮಾನವಾಗಿ ಇದ್ದೇವೆ. I think in our State, we are somewhere near 40% It is subject to correction. ಇದರಿಂದ ಡಿ.ಎ., ರಿವೈಸ್ ಪೇ ಇವುಗಳನ್ನು ಕೇಳಬೇಕಾಗುತ್ತೇವೆ, ಯಾವಾಗ ನಾವು ದವಸಧಾನ್ಯಗಳನ್ನು ಬೆಳೆಯತಕ್ಕ ವಿಚಾರದಲ್ಲಿ ಕೊರತೆಯನ್ನು ಮಾಡಿಕೊಳ್ಳುತ್ತೇವೆ, ಆಗ ನಾವು ಕೊರತೆಯನ್ನು ಕಾಣುತ್ತೇವೆ. ಇದು ಕೂಡ ಹಣದುಬ್ಬರಕ್ಕೆ ಹೆಚ್ಚಾಗಿ ಎಡೆಮಾಡಿಕೊಡುತ್ತದೆ, ಇದರ ಜೊತೆಯಲ್ಲಿ ಯೋಜನೆ ಮತ್ತು ಯೋಜನೇತರ ಸ್ಕೀಂಗಳಲ್ಲಿ ಹಲವಾರು ಕಾರ್ಯಕ್ರಮಗಳನ್ನು ಕಾಣುತ್ತೇವೆ ನಾವು ಯೋಜನೆಗಳಲ್ಲಿ ಬರತಕ್ಕಂಥ ಕಾರ್ಯಕ್ರಮಗಳು ಮತ್ತು ಯೋಜನೇತರ ವರ್ಗದಲ್ಲಿ ಬರತಕ್ಕ ಕಾರ್ಯಕ್ರಮಗಳು ಇವರೆಡನ್ನೂ ಗಮನದಲ್ಲಿಟ್ಟು ಆಯವ್ಯಯಪಟ್ಟಿಯನ್ನು ತಯಾರು ಮಾಡುವುದನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ, These things are interlinked. ಪ್ಲಾನಿಂಗ್ ಕಮೀಷನನ್ ಅವರು ವಿಚಾರ ಮಾಡತಕ್ಕ, ಹೆಚ್ಚಾಗಿ ಆದ್ಯತೆಯನ್ನು ಕೊಡತಕ್ಕ ಕೆಲವು ವಲಯಗಳಲ್ಲಿ ಬರತಕ್ಕ ಕಾರ್ಯಕ್ರಮಗಳು ನಮ್ಮಲ್ಲಿವೆ. ಅವರು ಮೂಲತಃ ಇವುಗಳ ಬಗ್ಗೆ ಗಮನ ಕೊಡುತ್ತಾರೆ. ಪವರ್, ಇರಿಗೇಷನ್ ಬಗ್ಗೆ ಹೆಚ್ಚಾಗಿ ಆದ್ಯತೆಯನ್ನು ಕೊಡುತ್ತಾರೆ. ನಾವು ಯೋಜನೆಗಳನ್ನು ತಯಾರು ಮಾಡಬೇಕಾದರೆ, ಯಾವಾಗಲೂ ಅದರಿಂದ ಉತ್ಪನ್ನ ಇರಬೇಕು. ನಾವು ಹಣವನ್ನು ತೊಡಗಿಸುತ್ತೇವೆ. ಕೇಂದ್ರಸರ್ಕಾರದಿಂದ ನಮಗೆ ಬಾಕಿ ಎಷ್ಟೋ ಬರಬೇಕು. ಹಣದ ಪ್ರಮಾಣ ಮತ್ತು ಸಂಪನ್ಮೂಲಗಳ ಕ್ರೋಢೀಕರಣಗಳನ್ನು ಮಾಡತಕ್ಕಂಥ ಕಾರ್ಯಕ್ರಮ ಯಾವಾಗಲೂ ಮುಂದಿನ ಜನಾಂಗಕ್ಕೆ, ಮುಂದಿನ ಪೀಳಿಗೆಗೆ ಉತ್ಪಾದಿತ ರೀತಿಯಲ್ಲಿ ಇರಬೇಕು. ಆದಕ್ಕಾಗಿ ನಾವು ಬಜೆಟ್ ಅವಲೋಕನ ಮಾಡಿ ಹೆಚ್ಚಿನ ಪವರ್ ಜನರೇಷನ್ ಅಥವಾ ವಿದ್ಯುಚ್ಛಕ್ತಿ ಉತ್ಪಾದನೆ ಮತ್ತು ನೀರಾವರಿಗೆ ಹೆಚ್ಚಾಗಿ ಹಣವನ್ನು ಕೊಡುವುದು. ನಮ್ಮಲ್ಲಿ ಪ್ಲಾನ್ ಸ್ಕೀಂನ್ನು ಹೆಚ್ಚಾಗಿ ಇಟ್ಟುಕೊಂಡಿದ್ದೇವೆ. ಕೆಲವು ನೀರಾವರಿ ಯೋಜನೆಗಳಿಗೆ ನಾವು ನಮ್ಮ ಪ್ಲಾನ್ ವ್ಯಾಪ್ತಿಯನ್ನು ಬಿಟ್ಟು ಕೂಡ ಮಾಡಿದ್ದೇವೆ. ಕಾವೇರಿ ಬೇಸಿನ್ ಯೋಜನೆಗಳಿಗೆ ಯೋಜನೇತರ ಹಣವನ್ನು ನಾವು ಖರ್ಚು ಮಾಡುತ್ತಿದ್ದೇವೆ. ಇದು ಸುಳ್ಳು ಎನ್ನುವ ಪ್ರಶ್ನೆ ಅಲ್ಲ. ಹಲವಾರು ಕಾರಣಗಳು ಇವೆ. ಕಾವೇರಿ ಬೇಸಿನ್ ಯೋಜನೆ ವಿಚಾರದಲ್ಲಿ ನಾನು ವಿವರವಾದ ಚರ್ಚೆಗೆ ಹೋಗುವುದಿಲ್ಲ. ನೀರಿಗೆ ಸಂಬಂಧಪಟ್ಟ ವಿಚಾರದಲ್ಲಿ ನಮ್ಮ ಮಾತನ್ನು ಕಡಿಮೆ ಮಾಡಬೇಕೆಂಬ ಅಭಿಪ್ರಾಯವನ್ನು ಇಟ್ಟುಕೊಂಡಿದ್ದೇವೆ. ಕಾವೇರಿ ನೀರನ್ನು ತಮಿಳುನಾಡಿಗೆ ಬಿಟ್ಟುಕೊಟ್ಟಿರುವ ವಿಚಾರ ಇದೆ. ಅದರ ವಿವರವಾದ ಚರ್ಚೆಗೆ ಹೋಗಬಾರದು. ಕಾವೇರಿ ನೀರನ್ನು ಎಷ್ಟು ಕೊಡಬೇಕೋ ಅಷ್ಟು ಕೊಡಬೇಕು. ಆದರೆ ನಮ್ಮ ನೀರಿನ ಶಕ್ತಿಯನ್ನು ಆಧರಿಸಿ ಕೊಡಬೇಕೆಂಬ ವಿಚಾರ. ಇಟ್ಟುಕೊಳ್ಳಬೇಕು. ಯಾವುದೇ ಸರ್ಕಾರ, ತೊಂದರೆಯನ್ನು ನೋಡಿ ತೀರ್ಮಾನ ತೆಗೆದುಕೊಳ್ಳಲಿ. ನೀರು ಇದ್ದರೆ ಸ್ವಲ್ಪ ಪ್ರಮಾಣದ ನೀರನ್ನು ಕೊಡೋಣ. ಹಿಂದೆ ದೇವರಾಜ ಅರಸು ಸರ್ಕಾರ ಇದ್ದಾಗ, ಅಕ್ಕಿಯ ಕೊರತೆ ಬಂದು ತಮಿಳುನಾಡಿನಿಂದ ಅಕ್ಕಿಯನ್ನು ಪಡೆದರು. ನಾವು ಒಬ್ಬರಿಗೊಬ್ಬರು ಪರವಾಗಿ ಇರಬೇಕು, ಈ ರೀತಿಯ ಸಹಾಯವನ್ನು ಮಾಡುವಾಗ ನಮ್ಮ ರಾಜ್ಯದ ಹಿತದೃಷ್ಟಿಯನ್ನು ಬಲಿಕೊಟ್ಟು ಮಾಡಬೇಕೆಂಬ ವಿಚಾರವನ್ನು ಯಾರೂ ಒಪ್ಪುವುದಕ್ಕೆ ಸಾಧ್ಯವಿಲ್ಲ. ನಾವು ಎಲ್ಲಾ ವಿಚಾರಗಳನ್ನು ಅವಲೋಕನ ಮಾಡಿದರೆ ಸ್ಪಷ್ಟವಾಗಿ ಗೊತ್ತಾಗುತ್ತದೆ. ವಿದ್ಯುಚ್ಛಕ್ತಿ ಉತ್ಪಾದನೆ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಪದೇ ಪದೇ ಕೇಂದ್ರಸರ್ಕಾರದ ಮೇಲೆ ಆಪಾದನೆ ಹೊರಿಸುತ್ತಾರೆ. ಯಾವ ಯಾವ ಯೋಜನೆಗಳ ಬಗ್ಗೆ ಯಾವ ರೀತಿ ಮಾತನಾಡಿದ್ದೀರಿ. ನಾನು ಮೊನ್ನೆ ನೋಡಿದ್ದೇನೆ ಕರ್ನಾಟಕ ರಾಜ್ಯದಲ್ಲಿ ವಿದ್ಯುಚ್ಛಕ್ತಿ ದರವನ್ನು ಜಾಸ್ತಿ ಮಾಡುತ್ತಿದ್ದಾರೆ. ಕೇಂದ್ರಸರ್ಕಾರದವರು ವಿದ್ಯುಚ್ಛಕ್ತಿ ಯೋಜನೆಗಳನ್ನು ಮಂಜೂರು ಮಾಡಿಕೊಡಿ, ನೀರಾವರಿ ಯೋಜನೆಗಳನ್ನು ಮಂಜೂರು ಮಾಡಿ ಕೊಡಿ ಎಂದು ಪದೇ ಪದೇ ಕೇಂದ್ರ

ಸರ್ಕಾರದ ಮೇಲೆ ಆಪಾದನೆ ಹೊರಿಸಿದ್ದಾರೆ. ಯಾವ ಆಪಾದನೆಗಳು, ಯಾವ ಯೋಜನೆಗಳು ಎಂಬದು ಸಂಪೂರ್ಣ ಪಟ್ಟಿ ನನ್ನ ಹತ್ತಿರ ಇದೆ. ನನ್ನ ಅಭಿಪ್ರಾಯದಲ್ಲಿ ಈ ಒಂದು ಬಡ್ಜೆಟ್ ನೋಡಿದಾಗ, ವಿದ್ಯುಚ್ಛಕ್ತಿಗೆ ಹೆಚ್ಚು ಆದ್ಯತೆ ಕೊಟ್ಟು ಹಣವನ್ನು ತೊಡಗಿಸಬೇಕಾಗಿತ್ತು. ವಿದ್ಯುಚ್ಛಕ್ತಿಯನ್ನು ಹೆಚ್ಚಾಗಿ ಉತ್ಪಾದನೆ ಮಾಡಿದರೆ, ಕೈಗಾರಿಕಾ ವಲಯದಲ್ಲಿ ನಾವು ಹೆಚ್ಚಾಗಿ ಉತ್ಪಾದನೆ ಮಾಡುವುದಕ್ಕೆ ಸಾಧ್ಯತೆ ಇದೆ.

ನಾವು ಮೊದಲು ಈ ಅನ್ ಎಂಪ್ಲಾಯ್‌ಮೆಂಟ್ ಅನ್ನು ತೆಗೆದು ಹಾಕುವುದಕ್ಕೆ, ಅವರಿಗೆ ಹೆಚ್ಚು ಉದ್ಯೋಗವನ್ನು ಕೊಡುವುದಕ್ಕೆ ಸಾಧ್ಯತೆ ಇದೆಯೇ ಎಂಬುದನ್ನು ಯೋಚನೆ ಮಾಡಬೇಕು. ನಮ್ಮ ರಾಜ್ಯದಲ್ಲಿ ಶೇಕಡ 75–76 ಪರ್ಸೆಂಟ್‌ನಷ್ಟು ಜನರು ವ್ಯವಸಾಯವನ್ನೇ ಅವಲಂಬಿಸಿಕೊಂಡಿರುತ್ತಾರೆ, ಕೈಗಾರಿಕಾ ವಲಯದಲ್ಲೂ ಕೂಡ ಹೆಚ್ಚು ಜನ ಉದ್ಯೋಗವನ್ನು ಅವಲಂಬಿಸಿಕೊಂಡಿರುತ್ತಾರೆ ಎಂದರೆ ಅಪಕ್ವತವಾಗಲಾರದು. ಈ ವ್ಯವಸಾಯವನ್ನೇ ಅವಲಂಬಿಸಿಕೊಂಡಿರತಕ್ಕಂಥಾ ಗ್ರಾಮಾಂತರ ಪ್ರದೇಶದ ಜನರು ಅಲ್ಲಿ ಕಾಲಕ್ಕೆ ಸರಿಯಾಗಿ ಮಳೆ ಆಗದೇ ಇರುವುದರಿಂದ ಅವರ ಜೀವನಕ್ಕಾಗಿ ಪಟ್ಟಣಗಳಿಗೆ ಹಾಗೂ ನಗರಗಳಿಗೆ ವಲಸೆ ಬರುತ್ತಿದ್ದಾರೆ. ಹೀಗಾಗಿ ನಮ್ಮ ಬೆಂಗಳೂರು ನಗರದ ಜನಸಂಖ್ಯೆ ಬಹಳ ಜಾಸ್ತಿಯಾಗಿದೆ. ರಾಷ್ಟ್ರದಲ್ಲಿ ಯಾವುದೇ ನಗರವಾಗಿರಬಹುದು. ಎಲ್ಲಾ ನಗರಗಳಿಗೂ ಕೂಡ ಈವೊತ್ತು ಗ್ರಾಮೀಣ ಪ್ರದೇಶದ ಜನರು ಬಂದು ಸೇರಿಕೊಂಡಿದ್ದಾರೆ. ಮುಂದೆ ಇಂಥಾ ಒಂದು ಪರಿಸ್ಥಿತಿಯಾಗಬಾರದು, ಅದಕ್ಕೆ ತಕ್ಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಆ ಕಾರ್ಯಕ್ರಮಕ್ಕೆ ಹೆಚ್ಚಿನ ಪ್ರಾಮುಖ್ಯತೆ ಕೊಟ್ಟು ಹೆಚ್ಚಿನ ಹಣವನ್ನು ತೊಡಗಿಸಬೇಕು. ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ. ಹಿರೇಕೆರೂರು ಭಾಗದಲ್ಲಿ, ಬಿಜಾಪುರ, ರಾಯಚೂರು ಈ ಭಾಗದಿಂದ ಅನೇಕ ಜನರು ಪಟ್ಟಣ ಹಾಗೂ ನಗರಗಳಿಗೆ ಈವೊತ್ತಿನ ದಿವಸ ವಲಸೆ ಬರುತ್ತಿದ್ದಾರೆ, ಕೂಲಿಗಾಗಿ ಬರುತ್ತಾರೆ. ಈ ಬಡ್ಜೆಟ್ಟನ್ನು ತಯಾರು ಮಾಡುವಾಗ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥಾ ಜನಕ್ಕೆ ಉದ್ಯೋಗವನ್ನು ಒದಗಿಸತಕ್ಕಂಥಾ ಯೋಜನೆಗಳಿಗೆ ಹೆಚ್ಚಿನ ಹಣ ಕೊಡದೇ ಹೋದರೆ ಏನು ಪ್ರಯೋಜನವಾಗುತ್ತದೆ. ಅಂಥಾದ್ದಾವುದೂ ಕೂಡ ಈ ಬಡ್ಜೆಟ್‌ನಲ್ಲಿ ಇಲ್ಲದೇ ಇರುವುದರಿಂದ ನಾನು ಇದನ್ನು ವಿರೋಧ ಮಾಡುತ್ತೇನೆ. ನಾನು ಮೊಟ್ಟಮೊದಲನೆಯದಾಗಿ, ಇದನ್ನು ಪೀಠಿಕಾ ರೂಪದಲ್ಲಿ ಇಟ್ಟಿದ್ದೇನೆ. ಮುಖ್ಯವಾಗಿ ಹೇಳಬೇಕಾದರೆ, ಈ ಬಡ್ಜೆಟ್‌ನಲ್ಲಿ ವಿದ್ಯುಚ್ಛಕ್ತಿ ಬಾಬಿಗಾಗಿ ಎಷ್ಟು ಹಣವನ್ನು ತೊಡಗಿಸಿದ್ದಾರೆ, ಆದ್ಯತೆ ಮೇಲೆ ಬರತಕ್ಕಂಥಾ ಯೋಜನೆಗೆ ಪ್ಲಾನಿಂಗ್ ಕಮಿಷನ್‌ನಲ್ಲಿ ಇರತಕ್ಕಂಥಾ ಯೋಜನೆಗಳಿಗೆ ಎಷ್ಟು ಹಣವನ್ನು ತೊಡಗಿಸಿದ್ದಾರೆ ಅನ್ನುವುದನ್ನು ಈ ಬಡ್ಜೆಟ್ಟಿನಲ್ಲಿ ನೋಡಿದರೆ ಏನೂ ಇಲ್ಲ. ಈ ಬಗ್ಗೆ ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರಗಳ ನಡುವೆ ಏನು ಪತ್ರ ವ್ಯವಹಾರ ನಡೆದಿದೆ ಅವೆಲ್ಲವೂ ನನ್ನಲ್ಲಿದೆ ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ತಾವು ಉತ್ಪಾದನೆಯನ್ನು ಕೊಡತಕ್ಕಂಥಾ ಬಾಬುಗಳಿಗೆ ಹಣವನ್ನು ತೊಡಗಿಸುವುದಕ್ಕೆ ಸಂಪೂರ್ಣವಾಗಿ ಹಿಂದೇಟು ಹಾಕಿದ್ದೀರಿ ಎನ್ನುವ ಮಾತನ್ನು ಹೇಳುತ್ತೇನೆ. ಹಾಗೆಯೇ ರಾಜ್ಯದ ನೀರಾವರಿ ಯೋಜನೆಗಳಲ್ಲೂ ಕೂಡ ಹೆಚ್ಚು ಹಣವನ್ನು ಒದಗಿಸಿಲ್ಲ. ಮೊನ್ನೆ ದಿವಸ ಚಿಕ್ಕನಾಯಕನಹಳ್ಳಿ ಶಾಸಕರು, ಲಕ್ಕಪ್ಪನವರು ಮತ್ತು ತುಮಕೂರು, ಚಿತ್ರದುರ್ಗ, ಕೋಲಾರ ಇನ್ನೂ ಬೇರೆ ಬೇರೆ ಭಾಗದ ಶಾಸಕರು ಶಾಸಕರ ಸಭಾಂಗಣದಲ್ಲಿ ಒಂದು ಸಭೆಯನ್ನು ಕರೆದಿದ್ದರು. ಅಲ್ಲಿಗೆ ನಾವೆಲ್ಲಾ ಹೋಗಿದ್ದೆವು. ಭದ್ರಾ ಪ್ರಾಜೆಕ್ಟ್ ಅನ್ನು ತೆಗೆದುಕೊಳ್ಳಬೇಕು ಅನ್ನುವ ಮಾತು ಬಂತು. ಹಾಗೆಯೇ ಇನ್ನು ಕೆಲವರು ನಮ್ಮ ಭಾಗದಲ್ಲಿ ಮಳೆ ಇಲ್ಲ, ಬೆಳೆ ಇಲ್ಲ ಹೆಚ್ಚು ಹಣವನ್ನು ನಮ್ಮ ಭಾಗಕ್ಕೆ ಒದಗಿಸಿಕೊಡದೇ ಹೋದರೆ ಏನೂ ಉತ್ಪಾದನೆ ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿದರು. ಕಳೆದ 3 ದಿವಸಗಳಿಂದಲೂ ಕೂಡ ನಾವು ಇಲ್ಲಿ ಬರಗಾಲದ ಬಗ್ಗೆ ಚರ್ಚೆ ಮಾಡಿದೆವು. ನಾವು ಬಹಳ ಕಾಲವನ್ನೇನೂ ಹಾಳು ಮಾಡಿಲ್ಲ, ನಾವು ಮಾಡಿದ ಚರ್ಚೆಯ ಫಲವಾಗಿ ಸರ್ಕಾರದ ಕಡೆಯಿಂದ ಶಾಸಕರು ಆ ಭಾಗದಲ್ಲಿ ನೋಡಿಕೊಂಡು ಬರುವ ಹಾಗೆ ಒಂದು ತೀರ್ಮಾನವಾಯಿತು. ನಾನು ಈಗ್ಗೆ 2-3 ದಿನದಲ್ಲಿ ಕೇಳಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಳೆ ಚೆನ್ನಾಗಿ ಆಯಿತು ಎಂದು. ಈವೊತ್ತು ಕೇಳಿದೆ, ಅಲ್ಲಿ ಮಳೆ ನಿಂತುಹೋಗಿದೆ ಬಿಸಿಲು ಬಂದಿದೆ ಎಂದು. ಅಲ್ಲಿ ಸಂಪೂರ್ಣವಾಗಿ ಮಾನ್‌ಸೂನ್ ವಿಫಲವಾಗಿದೆ. ಇದು ಎಲ್ಲರಲ್ಲೂ ಕೂಡ ಕಳವಳವನ್ನುಂಟು ಮಾಡಿದೆ. ಯಾವಾಗಲೂ ಸಹ ನೀರಾವರಿ ಯೋಜನೆಗಳಿಗೆ ಹೆಚ್ಚು ಹಣವನ್ನು ಇಡಬೇಕು. ಕೆಲವರು ಹೇಳಿದರು ನೀರಾವರಿ ಯೋಜನೆಗಳಿಗೆ ಹಣ ಇಟ್ಟು ಡ್ಯಾಂನ್ನೂ ಕಟ್ಟಿದರೆ ಮಳೆ ಕಡಿಮೆಯಾದರೆ, ಮಳೆ ಬರದೇ ಹೋದರೆ ಏನು ಮಾಡಬೇಕು ಎಂದು. ಶರಾವತಿ ವ್ಯಾಲಿ ಕಟ್ಟಿದಾಗ, ಹೈಡ್ರೋವ್ಯಾಲಿ ಪ್ರಾಜೆಕ್ಟ್ ಕಟ್ಟಿದಾಗ ಎಷ್ಟು ಸಾರಿ ನೀರು ತುಂಬಿದೆ ಎನ್ನುವುದು ತಮಗೆ ಗೊತ್ತು, ಪ್ರಕೃತಿಯ ಒಂದು ನಿಯಮ ನಮ್ಮ ಕೈಯಲ್ಲಿ ಇಲ್ಲ. ಮಳೆಗಾಗಿ ಮೋಡಗಳನ್ನು ಕೂಡಿಸಿ ಮಳೆ ತರಿಸುವುದು ಕಷ್ಟ. ಹಿಂದೆ ಇದರ ಬಗ್ಗೆ ಒಂದು ವೈಜ್ಞಾನಿಕ ಪ್ರಯತ್ನ ನಡೆಯಿತು, ಅದರಿಂದ ಸಾಫಲ್ಯ ಪಡೆಯುವುದಕ್ಕೆ ಆಗಲಿಲ್ಲ. 19 ಜಿಲ್ಲೆಗಳಲ್ಲೂ ಕೂಡ

ಬೆಳೆಯನ್ನು ಬೆಳೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಒಂದು ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರದವರು ಯಾವ್ಯಾವ ಪ್ರದೇಶದಲ್ಲಿ ಏನೇನು ಯೋಜನೆಗಳನ್ನು ಹಾಕಿಕೊಳ್ಳಬೇಕೆಂದು ಯೋಚನೆ ಮಾಡಿ, ಎಲ್ಲೆಲ್ಲಿ ನೀರು ಹರಿಯುತ್ತದೆ, ಎಲ್ಲೆಲ್ಲಿ ಹಳ್ಳಕೊಳ್ಳಗಳಲ್ಲಿ ನೀರು ಹರಿಯುತ್ತದೆ, ಎಲ್ಲೆಲ್ಲಿ ಹೊರೆಯಲ್ಲಿ ನೀರು ಹರಿಯುತ್ತದೆ ಆ ನೀರನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಒಂದು ಯೋಜನೆಯನ್ನು ಸಿದ್ಧಮಾಡ ಬೇಕಾಗಿತ್ತು. ರಾಜ್ಯ ಸರ್ಕಾರದವರು ಈ ಒಂದು ಆಯವ್ಯಯ ಪತ್ರದಲ್ಲಿ ಅದು ಯಾವುದನ್ನೂ ತೋರಿ ಸಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಅರ್ಥ ಸಚಿವರೂ ಸಹ ಆಗಿದ್ದಾರೆ. ಅವರು ಹಳ್ಳಿಗಾಡಿನ ಜನರ ಕಷ್ಟ ಏನು ಎನ್ನುವುದನ್ನು ಚೆನ್ನಾಗಿ ಮಥನ ಮಾಡಿಕೊಂಡಿದ್ದರೂ ಸಹ ಸೇರಿಸಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಚಿತ್ರದುರ್ಗ ಜಿಲ್ಲೆಯ ಪ್ರವಾಸಕ್ಕೆ ಹೋಗಿದ್ದಾಗ ಈ ಅಪ್ಪರ್ ಭದ್ರ ಯೋಜನೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇವೆ, ಅವರು ಮಂಜೂರು ಮಾಡಿದ್ದಾರೆ ಅದು ಆಗುತ್ತದೆ ಅನ್ನುವ ಮಾತನ್ನು ಹೇಳಿದ್ದರು. ಅದು ಎಲ್ಲಾ ಪತ್ರಿಕೆಯಲ್ಲೂ ಬಂದಿದೆ. ಅಲ್ಲಿನ ಜನರೂ ಸಹ ನಂಬಿದ್ದರು, ಇದನ್ನು ನಿರೀಕ್ಷೆ ಮಾಡಿದ್ದರು. ಮೊನ್ನೆತಾನೇ ಶಾಸಕರ ಸಭೆಯಲ್ಲಿ ಪ್ರಮುಖರ ಸಭೆ ನಡೆದ ಮೇಲೆ ಒಂದು ನಿಯೋಗ ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿಮಾಡಿ ಈ ಒಂದು ಯೋಜನೆಯನ್ನು ರಾಜ್ಯ ಸರ್ಕಾರದವರು ಶಿಫಾರಸ್ಸು ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡಿ ಎಂದು ಹೇಳಿದರು. ಕೇಂದ್ರ ಸರ್ಕಾರದ ನೀರಾವರಿ ಸಚಿವರಾದ ಶ್ರೀ ಶಂಕರಾನಂದ ಅವರಿಗೆ ಸಂಬಂಧಪಟ್ಟ ಅಡ್ವೈಸರಿ ಕಮಿಟಿಯಲ್ಲಿ ನಮ್ಮ ರಾಜ್ಯದ 3 ಜನ ಪಾರ್ಲಿಮೆಂಟ್ ಸದಸ್ಯರು ಅಂದರೆ ಗುರಡ್ಡಿಯವರು, ಬಿಜಾಪುರ ಭಾಗದ ಕೃಷ್ಣ ರಾವ್ ಅವರು ಮತ್ತು ರಾಜ್ಯ ಸಭೆಯ ಸದಸ್ಯರಾದ ಶ್ರೀ ಹನುಮಂತಪ್ಪನವರು ಏನು ಇದ್ದಾರೆ ಅವರು ಈ ಬಗ್ಗೆ ಸ್ಪಷ್ಟವಾದ ಅಭಿಪ್ರಾಯ ಕೊಟ್ಟಿದ್ದಾರೆ. ಅಲ್ಲಿ ನೀರಾವರಿ ಇಲಾಖೆಯಲ್ಲಿರತಕ್ಕಂಥಾ ಸಂಬಂಧ ಪಟ್ಟವರೂ ಸಹ ಪತ್ರ ಬರೆದಿದ್ದಾರೆ. ಏನು ಹೇಳಿದ್ದಾರೆ ಎಂದರೆ, ಈ ಬಗ್ಗೆ ರಾಜ್ಯ ಸರ್ಕಾರದವರಿಂದ ಯಾವ ಶಿಫಾರಸೂ ಬಾರದೇ ಹೋದರೆ ಯಾವ ಯೋಜನೆಯೂ ಕಾರ್ಯಗತವಾಗುವುದಿಲ್ಲ ಎಂದು ಹೇಳಿ ದ್ದಾರೆ ಮತ್ತು ಹೀಗಾದರೆ ಯೋಜನಾ ಆಯೋಗದ ಮುಂದೆ ನಾವು ಯಾವ ಒಪ್ಪಿಗೆಯನ್ನೂ ಇಡುವು ದಕ್ಕೆ ಸಾಧ್ಯವಾಗುವುದಿಲ್ಲ ಎಂದು ಹೇಳಿದ್ದಾರೆ, ಈ ಮಾತನ್ನು ಸರ್ವಪಕ್ಷಗಳ ಸಭೆಯಲ್ಲಿ ಹೇಳಿದ್ದಾರೆ. ಆದುದರಿಂದ ಈಗಲಾದರೂ ಕೂಡ ನಾವು ಅವರಿಗೆ ಹೇಳೋಣ. ರಾಜ್ಯ ಸರ್ಕಾರದವರು ಅಪ್ಪರ್ ಭದ್ರ ಪ್ರಾಜೆಕ್ಟ್ ಬಗ್ಗೆ ಶಿಫಾರಸು ಮಾಡಿ ಕೇಂದ್ರ ಸರ್ಕಾರದ ನೀರಾವರಿ ಇಲಾಖೆ ಏನು ಇದೆ ಅಲ್ಲಿಗೆ ಕಳುಹಿಸಿ ಕೊಡಿ. ನಾವೆಲ್ಲರೂ ಸೇರಿ ಅದು ಕಾರ್ಯಗತವಾಗುವ ಹಾಗೆ ಒತ್ತಾಡ ತರೋಣ. ಇದೇ ರೀತಿ ಅಪ್ಪರ್ ಕೃಷ್ಣ, ತುಂಗ ಇನ್ನೂ ಹಲವಾರು ಯೋಜನೆಗಳು ಏನು ಇವೆ ಅದನ್ನು ಸಹ ಶಿಫಾರಸು ಮಾಡಿ ಕಳುಹಿಸಿಕೊಡಿ. ಬಹುಶಃ ಇದರ ಬಗ್ಗೆ ನಿಮ್ಮ ಪತ್ರವ್ಯವಹಾರ ಪಾಲ್ಯೂಂ ನೋಡಿದರೆ 4–5 ಸಂಪುಟಗಳು ಆಗಬಹುದು. ಪಾರ್ಲಿಮೆಂಟ್ ಸದಸ್ಯರಿಗೆ ಇದರ ಬಗ್ಗೆ ಏನು ಒದಗಿಸಿದ್ದೀರಿ ಅದನ್ನು ನೋಡಿ ನಾನು ಅಧ್ಯಯನ ಮಾಡಿದ್ದೇನೆ. ಅದರ ಮೇಲೆ ನಾನು ಈ ವಿಷಯವನ್ನು ಹೇಳುತ್ತಿದ್ದೇನೆ. ಉದಾಹರಣೆಗೆ ನಾನು ಒಂದು ಮಾತ್ರ ಹೇಳಿದೆ. ನಾನು ಈ ಸಂದರ್ಭದಲ್ಲಿ ಇದಕ್ಕಾಗಿ ಈ ಬಡ್ಜೆಟ್ಟ ನಲ್ಲಿ ಎಷ್ಟು ಹಣವನ್ನು ಇಟ್ಟಿದ್ದೀರಿ ಅನ್ನುವುದನ್ನು ಕೇಳುತ್ತೇನೆ. ನಮ್ಮ ರಾಜ್ಯದಲ್ಲಿ ರಾಯಚೂರು, ಬೀದರ್, ಬಿಜಾಪುರ ಮತ್ತು ಬೆಳಗಾಂನ ಕೆಲವು ಭಾಗಗಳಲ್ಲಿ ನೀರಾವರಿ ಪ್ರದೇಶ ಬಿಟ್ಟು ಧಾರವಾಡ ಜಿಲ್ಲೆಯ ಕೆಲವು ಭಾಗಗಳಲ್ಲಿ ಹಳೇ ಮೈಸೂರಿನ ಭಾಗದಲ್ಲಿ, ಮಂಡ್ಯ ಜಿಲ್ಲೆಯ ನಾಗಮಂಗಲದಲ್ಲಿ ತುಮಕೂರು ಭಾಗದಲ್ಲಿ, ಗುಂಡ್ಲುಪೇಟೆ ಭಾಗದಲ್ಲಿ ಅಲ್ಲಲ್ಲಿ ಬರಗಾಲ ಇದೆ. ಇದಕ್ಕಾಗಿ ಈ ಬಡ್ಜೆಟ್ಟಿ ನಲ್ಲಿ ಏಷ್ಟು ಹಣ ಇಟ್ಟಿದ್ದೀರಿ ? ಮತ್ತು ಕಾರಂಜಿ ಪ್ರಾಜೆಕ್ಟ್‌ಗಾಗಿ, ಅಪ್ಪರ್ ಕೃಷ್ಣ ಪ್ರಾಜೆಕ್ಟ್‌ಗಾಗಿ ಮುಲ್ಲಾಮಾರಿ ಪ್ರಾಜೆಕ್ಟ್‌ಗಾಗಿ ಎಷ್ಟು ಹಣವನ್ನು ಇಟ್ಟಿದ್ದೀರಿ ? ಡ್ರೈಲ್ಯಾಂಡ್ ಡೆವಲಪ್‌ಮೆಂಟ್ ಸ್ಕೀಂಗೆ ಎಷ್ಟು ಹಣವನ್ನು ಇಟ್ಟಿದ್ದೀರಿ ? ಕಡಿಮೆ ಮಳೆ ಆಗುವ ಕಡೆ ಉತ್ಪಾದನೆ ಜಾಸ್ತಿ ಮಾಡುವುದಕ್ಕೆ ಏನು ವ್ಯವಸ್ಥೆ ಮಾಡಿದ್ದೀರಾ ? ಈ ಬೋರ್ಡ್‌ಗಳಿಗೆ ಎಷ್ಟು ಹಣವನ್ನು ಕೊಟ್ಟಿದ್ದೀರಿ—ಅದನ್ನು ವಿಚಾರ ಮಾಡಿ ನೋಡಿದರೆ ಆ ಬೋರ್ಡ್‌ಗೆ ಸಾಕಾದಷ್ಟು ಹಣವನ್ನೇ ಕೊಟ್ಟಿಲ್ಲ. ಹಣ

2-30 p.m.

ಇಟ್ಟಿಲ್ಲ. ಹೈದರಾಬಾದ್ ಕರ್ನಾಟಕ ಏರಿಯಾ ಡೆವಲಪ್‌ಮೆಂಟ್ ಬೋರ್ಡ್ ಆಯಿತು, ಅದಕ್ಕೆ ಹಣವನ್ನು ಕೊಟ್ಟಿಲ್ಲ. ನೀರಾವರಿ ಯೋಜನೆ ತೆಗೆದುಕೊಳ್ಳಿ ಅಥವಾ ಬೇರೆ ಯಾವ ಒಂದು ಯೋಜನೆ ತೆಗೆದುಕೊಂಡರೂ ಕೂಡ ಹಣಕಾಸಿನ ಪರಿಸ್ಥಿತಿ ಸರಿಯಿಲ್ಲ, ಕರ್ನಾಟಕ ರಾಜ್ಯದ ಯಾವುದೇ ಮೂಲೆ ಯಲ್ಲಿ ತೆಗೆದುಕೊಂಡರೂ ಇದೇ ಪರಿಸ್ಥಿತಿ ಇದೆ. ಆಮೇಲೆ ಅಪ್ಪರ್ ಭದ್ರ ಪ್ರಾಜೆಕ್ಟ್‌ಗೆ ಒಂದು ಲಕ್ಷ ರೂಪಾಯಿ ಇದೆ. ಇನ್ನೊಂದಕ್ಕೆ 5 ಲಕ್ಷ ರೂಪಾಯಿ, ಮತ್ತೊಂದಕ್ಕೆ 4 ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ. ಇದನ್ನು ಎರಡು, ಮೂರು ಐಟಂಗಳಾಗಿ ಡಿವೈಡ್ ಮಾಡಿದ್ದಾರೆ. ಇದಕ್ಕೆ ಕೊಟ್ಟಿರ ತಕ್ಕ ಹಣದಲ್ಲಿ ಸುಮಾರು ಆಫೀಸರ್ಸ್ ಬಿಲ್ಡಿಂಗ್‌ನ್ನು ಕಟ್ಟಲಿಕ್ಕೆ ಆಗುವುದಿಲ್ಲ. ಒಂದು ಬಿಲ್ಡಿಂಗ್

8–10 ಲಕ್ಷ ರೂಪಾಯಿ ಬೇಕು. ಒಬ್ಬ ಅಸಿಸ್ಟೆಂಟ್ ಇಂಜಿನಿಯರ್‌ಗೆ ಅಲ್ಲಿ ಬಿಲ್ಡಿಂಗ್ ಕಟ್ಟಿ ಕೊಡಿಸುವುದಕ್ಕೆ ಸಾಧ್ಯವಿಲ್ಲ. ಇದೇ ರೀತಿ ತುಮಕೂರು, ಚಿತ್ರದುರ್ಗ ಮುಂತಾದ ಕಡೆಗಳಲ್ಲೂ ಇದೆ. ನಾನು ಅಪ್ಪರ್ ಭದ್ರ ಪ್ರಾಜೆಕ್ಟನ್ನು ಉದಾಹರಣೆಯಾಗಿ ಕೊಟ್ಟೆ. ಅದೇ ರೀತಿ ಕರ್ನಾಟಕ ರಾಜ್ಯದಲ್ಲಿರತಕ್ಕ ಯಾವುದೇ ಒಂದು ಯೋಜನೆಯನ್ನು ತೆಗೆದುಕೊಂಡರೂ ಅದಕ್ಕೆ ಹಣವನ್ನು ಇಟ್ಟಿರುವುದನ್ನು ನೋಡಿದರೆ ರಾಜ್ಯಸರ್ಕಾರಕ್ಕೆ ಆಸಕ್ತಿ ಇಲ್ಲ ಎಂದು ತೋರುತ್ತದೆ. ಇವರ ಹಣಕಾಸಿನ ಹಿಡಿತವನ್ನು ನೋಡಿದರೆ ರಾಜ್ಯಸರ್ಕಾರಕ್ಕೆ ಆಸಕ್ತಿ ಇಲ್ಲ ಎಂದು ಕಾಣುತ್ತದೆ. ಕರ್ನಾಟಕ ರಾಜ್ಯದಲ್ಲಿರತಕ್ಕ ರೈತರ ಹಿತದೃಷ್ಟಿಯಿಂದ, ಬೆಳೆಗಳನ್ನು ತೆಗೆಯುವ ದೃಷ್ಟಿಯಿಂದ ಪ್ರೊಡಕ್ಷನ್ ತೆಗೆಯುವ ದೃಷ್ಟಿಯಿಂದ ಪ್ರೊಡಕ್ಷನ್ ಬೇಸ್ಡ್ ಪ್ರಾಜೆಕ್ಟ್ ಮಾಡಬೇಕು. ಇದರಿಂದ ಪರ್ ಕ್ಯಾಪಿಟ ಇನ್‌ಕಂ ಜಾಸ್ತಿಯಾಗುತ್ತದೆ. ಪರ್ ಕ್ಯಾಪಿಟ ಇನ್‌ಕಂ ನೋಡಿದರೆ 1983–84ರಲ್ಲಿ ಸುಮಾರಾಗಿ 715 ರೂಪಾಯಿ ಇದ್ದದ್ದು ಈಗ ಅಂದರೆ 1984–85ರಲ್ಲಿ ಅದು 720 ರೂಪಾಯಿ ಆಗಿದೆ. ಈ ವರ್ಷದ ಅಂಕಿಅಂಶಗಳನ್ನು ನೋಡೋಣ. ಕಳೆದ ಮಾರ್ಚಿ ತಿಂಗಳಲ್ಲಿ ಪೂರ್ವ ಬೇಡಿಕೆ ಅಂದರೆ ತಾತ್ಕಾಲಿಕ ಬಡ್ಜೆಟ್‌ನ್ನು ಇಟ್ಟಿದ್ದಾರೆ. ಈಗ ಫುಲ್ ಬಡ್ಜೆಟನ್ನು ಸರ್ವಾಂತರ್ಯಾಮಿಯಾಗಿ ಇಟ್ಟಿದ್ದಾರೆ. ಕಳೆದ ವರ್ಷದ ಪ್ಲಾನ್ ಔಟ್ಲೇ ಇದೆಯೋ ಅದಕ್ಕೂ ಈ ವರ್ಷಕ್ಕೂ ಒಂದೇ ಒಂದು ಕೋಟಿ ರೂಪಾಯಿ ಮಾತ್ರ ವ್ಯತ್ಯಾಸ ಕಾಣುತ್ತಾ ಇದ್ದೇವೆ, ಹೆಚ್ಚಿನ ವ್ಯತ್ಯಾಸವಿಲ್ಲ. ನೀರಾವರಿಗೆ ಆದ್ಯತೆ ಕೊಡದೇ ಇರತಕ್ಕಂಥ, ವಿದ್ಯುಚ್ಛಕ್ತಿಗೆ ಆದ್ಯತೆ ಕೊಡದೆ ಇರತಕ್ಕಂಥ ಇವರ ವಿಚಾರಧಾರೆ ಏನಿದೆ ಇದು ಖಂಡಿಸತಕ್ಕಂಥಾದ್ದು. ಕರ್ನಾಟಕ ರಾಜ್ಯದ ಹಿತವನ್ನು ಬಲಿಕೊಟ್ಟು ಕೇಂದ್ರದಮೇಲೆ ಆರೋಪ ಹೊರಿಸತಕ್ಕ ವಿಚಾರ ಏದೆ ಇದು ನಿಜವಾಗಿಯೂ ಖಂಡಿಸತಕ್ಕಂಥಾದ್ದು. ಈ ರೀತಿ ಕೇಂದ್ರದ ಮೇಲೆ ಆರೋಪ ಮಾಡುವುದಕ್ಕೆ ಯಾವ ಹಕ್ಕು ಇದೆ ಎಂದು ಕೇಳುತ್ತೇನೆ. ಶಾಸಕರ ಭವನದ ಸಭಾಂಗಣದಲ್ಲಿ ನಡೆದ ಚರ್ಚೆಯಲ್ಲಿ ಒತ್ತಡ ಬಂದಮೇಲೆ ಮಾಡುತ್ತೇವೆ ಎಂದು ಹೇಳಿದರು. ಒಂದು ಲಕ್ಷ, ಎರಡು ಲಕ್ಷ ಹಣ ಇಟ್ಟು ಈ ಒಂದು ಭದ್ರ ಯೋಜನೆಯಾಗಿದೆ ಎಂದು ಆ ಭಾಗದಲ್ಲಿ ಭಾಷಣ ಮಾಡುವುದಕ್ಕೆ ಆಗುತ್ತದೆಯೇ, ಅಲ್ಲಿ ಭಾಷಣಮಾಡಿ ಜನರ ಪ್ರೀತಿ ವಿಶ್ವಾಸವನ್ನು ಗಳಿಸಲಿಕ್ಕೆ ಆಗುತ್ತದೆಯೇ, ಈ ಒಂದು ಅಪ್ಪರ್‌ಭದ್ರ ಪ್ರಾಜೆಕ್ಟ್ ಬಗ್ಗೆ ಶಿಫಾರಸು ಕೊಡದೆ ಉಳಿದು ನಿಮ್ಮ ಜವಾಬ್ದಾರಿಯಿಂದ ನುಣಚಿಕೊಂಡು ಕೇಂದ್ರದಮೇಲೆ ಇಲ್ಲದಸಲ್ಲದ ಆರೋಪ ಮಾಡಿ, ಜನರನ್ನು ನಂಬಿಸಿ ಮೋಸ ಮಾಡುವುದಕ್ಕಾಗುತ್ತದೆಯೇ. ಈ ಕಾರಣದ ಆಧಾರದ ಮೇಲೆ ಇನ್‌ಫ್ಲೇಷನ್ ಜಾಸ್ತಿಯಾಗಿದೆ. ಅದು ಟ್ಯಾಕ್ಸೇಷನ್ ಪ್ರಪೋಸಲ್ ಇರಬಹುದು, ತೆರಿಗೆಗಳ ಮುಖಾಂತರ ಇರಬಹುದು ಅಥವಾ ಔಟ್‌ಪುಟ್ ಕಡಿಮೆಯಾದಾಗ ಹಣದುಬ್ಬರಕ್ಕೆ ಎಡೆಮಾಡಿಕೊಡತಕ್ಕಂಥಾದ್ದು. ಮತ್ತು ಯೋಜನೇತರ ವೆಚ್ಚಗಳು ಹೆಚ್ಚಾದಾಗ ಕೂಡ ಹಣದುಬ್ಬರಕ್ಕೆ ಅವಕಾಶ ಮಾಡಿಕೊಡತಕ್ಕಂಥಾದ್ದು. 20 ಅಂಶಗಳ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಸರ್ಕಾರ ಕೂಡ ಇದೇ ರೀತಿ ಹರಿಜನ–ಗಿರಿಜನರಿಗೆ ಸೀರೆ ಕೊಡತಕ್ಕಂಥಾದ್ದು, ಕುಪ್ಪಸ ಕೊಡತಕ್ಕಂಥಾದ್ದು, ಬಟ್ಟೆ, ಸ್ಲೇಟು, ಪುಸ್ತಕ ಕೊಡತಕ್ಕಂಥಾದ್ದು ಎಲ್ಲಾ ಮಾಡಿದೆ. ಇವೆಲ್ಲಾ ನಾನ್‌ಪ್ಲಾನ್ ಸ್ಕೀಂನಲ್ಲಿ ಬರುತ್ತವೆ. ಇದನ್ನು ನಾನು ಒಪ್ಪುತ್ತೇನೆ, ಕೊಡಬಾರದು ಎಂದು ಹೇಳುವುದಿಲ್ಲ. ಇವರ 1983-84ರ ಬಡ್ಜೆಟ್‌ಗೂ ಮತ್ತು 1984–85ರ ಬಡ್ಜೆಟ್‌ಗೂ ಹೋಲಿಸಿದಾಗ ಪ್ಲಾನ್ ಔಟ್ಲೇ ಸ್ಕೀಮ್ಸ್ ವಿಚಾರದಲ್ಲಿ ಖಂಡಿತವಾಗಿಯೂ ನಾನ್‌ಪ್ಲಾನ್ ಸ್ಕೀಮ್ಸ್ ಜಾಸ್ತಿಯಾಗಿದೆ. ಸೀರೆ, ಕುಪ್ಪಸ, ಅಂಗಿ ಕೊಡತಕ್ಕಂಥಾದ್ದು ಬ್ಲೌಸ್‌ಪೀಸ್ ಕೊಡತಕ್ಕಂಥಾದ್ದು ಧೋತ್ರ, ಪಂಚೆ ಶರ್ಟ್ 20 ರೂಪಾಯಿಗೆ ಒಂದು ಜೊತೆ ಕೊಡತಕ್ಕಂಥಾದ್ದು ಅದೇ ರೀತಿ ಬಂಗಾರದ ತಾಳಿ, ಶಾಲಾಮಕ್ಕಳಿಗೆ ಸಮವಸ್ತ್ರಗಳು, ಪಠ್ಯಪುಸ್ತಕಗಳನ್ನು ಕೊಡತಕ್ಕಂಥಾದು ಇವೆಲ್ಲವೂ ಕೂಡ ನಾನ್ ಪ್ಲಾನ್ ಸ್ಕೀಂನಲ್ಲಿ ಬರತಕ್ಕಂಥಾದ್ದು. ನೀವು ಕೊಡಿ, ಕೊಡಬಾರದು ಎಂದು ಯಾರೂ ಹೇಳಲಿಲ್ಲ. ಅದೇ ರೀತಿ ಪ್ರಪೋರ್ಷನೇಟಾಗಿ ನಾನ್‌ಪ್ಲಾನ್ ಸ್ಕೀಂಗಿಂತ ಪ್ಲಾನ್ ಸ್ಕೀಮ್ಸ್‌ಗೆ ಹೆಚ್ಚಾಗಿ ಹಣವನ್ನು ತೊಡಗಿಸತಕ್ಕ ಆಯವ್ಯಯ ಪತ್ರವನ್ನು ಇಟ್ಟಿದ್ದರೆ ನಾನು ಸ್ವಾಗತಿಸುತ್ತಿದ್ದೆ. ಸದ್ಯಕ್ಕೆ ನಾವು ತಡೆದುಕೊಂಡರೂ ಕೂಡ ಮಾನ್ಯ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳೂ ಆಗಿ ಅರ್ಥಮಂತ್ರಿಗಳು ವಿದ್ಯುತ್ ಉತ್ಪಾದನೆಗೆ ಹೆಚ್ಚು ಹಣವನ್ನು ತೊಡಗಿಸಿದ್ದಾರೆ, ಭವಿಷ್ಯದಬಗ್ಗೆ ಚಿಂತನೆ ಮಾಡತಕ್ಕಂಥ ಸರ್ಕಾರ ಇಲ್ಲಿದೆ, ಇವತ್ತು ಮೇಲ್ಪಂಕ್ತಿ ಹಾಕುತ್ತಾರೆ ಎಂದು ನಾವು ನಿರೀಕ್ಷೆಕೂಡ ಇಟ್ಟುಕೊಂಡಿದ್ದೆವು. ಆದರೆ ಈ ಆಯವ್ಯಯ ಪತ್ರವನ್ನು ನೋಡಿದಾಗ, ಅವಲೋಕನ ಮಾಡಿದಾಗ ಯಾರಿಗಾದರೂ ಗೊತ್ತಾಗುತ್ತದೆ ಇವರ ರಾಜಕೀಯ ಉದ್ದೇಶ ಸಾಧನೆಗೋಸ್ಕರ ಅಂದರೆ ಬಟ್ಟೆ ಕೊಡಬೇಕು ಓಟ್ ತೆಗೆದುಕೊಳ್ಳಬೇಕು, ಪುಸ್ತಕ ಕೊಡಬೇಕು ಓಟ್ ತೆಗೆದುಕೊಳ್ಳಬೇಕು, ಸೀರೆ ಕೊಡಬೇಕು ಓಟ್ ತೆಗೆದುಕೊಳ್ಳಬೇಕು, ಕುಪ್ಪಸ ಕೊಡಬೇಕು ಓಟ್ ತೆಗೆದುಕೊಳ್ಳಬೇಕು, ತಾಳಿಗಳನ್ನು ಕೊಡಬೇಕು ಓಟ್ ತೆಗೆದುಕೊಳ್ಳಬೇಕು ಎನ್ನುವುದು. ಯೋಜನೇತರ ವೆಚ್ಚಗಳನ್ನು ಜಾಸ್ತಿಮಾಡಿರತಕ್ಕಂಥ ಈ ಬಡ್ಜೆಟನ್ನು ಯಾರೂ ಕೂಡ ಒಪ್ಪುವುದಿಲ್ಲ. ಕೇಂದ್ರದಲ್ಲಿ ಡಿಫಿಸಿಟ್ ಇದೆ, ಹಣದುಬ್ಬರಕ್ಕೆ ಎಡೆ

ಮಾಡಿಕೊಟ್ಟಿದೆ, ಅದಕ್ಕೋಸ್ಕರ ರಾಜ್ಯಸರ್ಕಾರದವರು ಏನು ಮಾಡಬೇಕು ಎನ್ನುವ ವಾದ ಇದೆ. ಎಲ್ಲಕೂ ಕೂಡ ಇದರ ಬಗ್ಗೆ ವಿಚಾರ ಮಾಡಿದರೂ ಕೂಡ ಅರ್ಥಶಾಸ್ತ್ರಜ್ಞರು ಒಂದು ಮಾತನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಬಡ್ಜೆಟ್‌ನಲ್ಲಿ ಮೂರು ರೀತಿಯ ಬಡ್ಜೆಟ್ ಇದೆ. ಒಂದನೆಯದು ಡಿಫಿಸಿಟ್ ಬಡ್ಜೆಟ್‌ಗೆ ಎರಡನೆಯದು ಸರ್ಪ್ಲಸ್ ಬಡ್ಜೆಟ್ ; ಮೂರನೆಯದು ಡಿಫಿಸಿಟ್ಟೂ ಅಲ್ಲ, ಸರ್ಪ್ಲಸ್ಸೂ ಅಲ್ಲ, ಸರಿ ಸಮಾನವಾದ ಬಡ್ಜೆಟ್ ಇದು ತ್ರೈ ಆರ್ಥಿಕ ನೀತಿ. ಕೊರತೆಯ ಆಯವ್ಯಯಪತ್ರ, ಹೆಚ್ಚುವರಿ ತೋರಿಸತಕ್ಕ ಆಯವ್ಯಯ ಪತ್ರ ಮತ್ತು ಸರಿಸಮಾನವಾದುದು ಎಂದು ಹೇಳತಕ್ಕಂಥ ಆಯವ್ಯಯ ಪತ್ರ ಹೀಗೆ ಮೂರು ಭಾಗ ಇದೇ ಕೇಂದ್ರಸರ್ಕಾರ ಕೊರತೆಯ ಬಡ್ಜೆಟನ್ನು ಇಟ್ಟಿದೆ. ಆ ವಿಚಾರದಲ್ಲಿ ಒಂದು ಮಾತನ್ನು ತಮ್ಮ ಗಮನಕ್ಕೆ ತರಬೇಕಾಗಿದೆ. ಕೇಂದ್ರದ ಅರ್ಥ ಸಚಿವರಾದ ಶ್ರೀಮಾನ್ ವಿ.ಪಿ. ಸಿಂಗ್ ಅವರು ಪಾರ್ಲಿಮೆಂಟಿನಲ್ಲಿ ಬಡ್ಜೆಟ್‌ನ್ನು ಇಟ್ಟಮೇಲೆ, ಇದರಿಂದ ಹೆಚ್ಚಾಗಿ ಹಣದುಬ್ಬರ ಬರುತ್ತದೆ ಎಂದು ಆ ಒಂದು ಆಯವ್ಯಯ ಪತ್ರವನ್ನು ನೋಡಿದ ಮೇಲೆ ಬಹಳ ಜನ ವ್ಯಾಖ್ಯಾನ ಕೂಡ ಮಾಡಿದರು. ಅಧ್ಯಕ್ಷರೆ, ಸುಮಾರು ಜೂನ್ 21ನೇ ತಾರೀಖು ಕೇಂದ್ರ ಸಚಿವರು ಒಂದು ಪತ್ರಿಕಾ ಗೋಷ್ಠಿಯಲ್ಲಿ ಸ್ಪಷ್ಟವಾಗಿ ಒಂದು ಮಾತನ್ನು ಹೇಳಿದ್ದಾರೆ. ಸುಮಾರು 3,500 ಕೋಟಿ ರೂಪಾಯಿಗಳ ಕೊರತೆ ಕೇಂದ್ರ ಸರ್ಕಾರದ ಬಜೆಟ್‌ನಲ್ಲಿ ಏನು ಇದೆ ಅದನ್ನು ನಾವು ಸರಿದೂಗಿಸತಕ್ಕ ಶಕ್ತಿಯನ್ನು ಪಡೆದಿದ್ದೇವೆಂದು ಸ್ಪಷ್ಟವಾಗಿ ಹೇಳಿದ್ದಾರೆ. ಸುಪ್ರೀಮ್ ಕೋರ್ಟ್ ಜಡ್ಜ್‌ಮೆಂಟ್ ಬಂದ ಮೇಲೆ 10 ಪರ್‌ಸೆಂಟ್ ಟ್ಯಾಕ್ಸೇಷನ್ ಜಾಸ್ತಿ ಮಾಡಲಿಕ್ಕೋಸ್ಕರ ಒಂದು ಅವಕಾಶ ಸಿಕ್ಕಿತು. ಈಗ 500 ಕೋಟಿ ರೂಪಾಯಿಗಳ ಒಂದು ಹೆಚ್ಚಿನ ಉತ್ಪನ್ನ ಬರತಕ್ಕದ್ದು ಮಾಡಿಕೊಂಡಿದ್ದಾರೆ. ಈಗ ಸುಮಾರು 150 ಕೋಟಿ ರೂಪಾಯಿಗಳ ನಿವ್ವಳ ಆದಾಯ ಕಂಡುಬರುತ್ತಿದೆ. ಇದು ಬಜೆಟ್ ಮಂಡನೆ ಆದಮೇಲೆ ಪತ್ರಿಕಾಗೋಷ್ಠಿಯಲ್ಲಿ ಹೇಳಿರತಕ್ಕ ವಿಚಾರ. ಕೇಂದ್ರ ಸರ್ಕಾರದವರು ಕೊರತೆ ಇರತಕ್ಕ ಬಡ್ಜೆಟ್ ಮಂಡನೆ ಮಾಡಿದಾಗ ಅದಕ್ಕೆ ಅರ್ಥ ಇರುತ್ತದೆ. ಇಂಟರ್‌ನ್ಯಾಷನಲ್ ಮಾನಿಟರಿ ಸ್ಟೆಬಿಲೈಸೇಷನ್ ದೃಷ್ಟಿಯಿಂದ ಅದು ಇರಬೇಕಾಗುತ್ತದೆ. ಕೆಲವೊಂದು ಯೋಜನೆಗಳನ್ನು ಮಾಡಬೇಕಾಗುತ್ತದೆ. ಬೇರೆ ಬೇರೆ ವಿಚಾರಕ್ಕೆ ಹಣ ಖರ್ಚು ಮಾಡತಕ್ಕ ಸಂದರ್ಭ ಬರುತ್ತದೆ. ಡಿಫೆನ್ಸ್‌ಗಾಗಿ 8,000 ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರ ತೆಗೆದಿಟ್ಟಿದೆ. ಶ್ರೀಲಂಕಾ, ಪಾಕಿಸ್ತಾನ, ಬಂಗ್ಲಾದೇಶ–ಇವೆಲ್ಲಾ ನಮ್ಮ ರಾಷ್ಟ್ರದ ಅಕ್ಕಪಕ್ಕದಲ್ಲಿವೆ. ನಮ್ಮ ರಾಷ್ಟ್ರದ ಸಂಸ್ಕೃತಿಯನ್ನು ಮತ್ತು ಸುಭದ್ರತೆಯನ್ನು ಕಾಪಾಡುವ ದೃಷ್ಟಿಯಿಂದ ನಮ್ಮ ಡಿಫೆನ್ಸ್ ಅಭಿವೃದ್ಧಿಪಡಿಸಲೇಬೇಕಾಗುತ್ತದೆ. ಅದಕ್ಕಾಗಿ ಹೆಚ್ಚು ಹಣವನ್ನು ಖರ್ಚು ಮಾಡಲೇಬೇಕಾಗುತ್ತದೆ. ಅದು ಅನಿವಾರ್ಯ. ಮಾನ್ಯ ಸಭಾಧ್ಯಕ್ಷರೇ, ಈ ಸಂದರ್ಭದಲ್ಲಿ ನಾನು ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರಲಿಕ್ಕೆ ಇಷ್ಟಪಡುತ್ತೇನೆ. ನಾವು ಅಂತರರಾಷ್ಟ್ರ ಮಟ್ಟಕ್ಕೆ ನಮ್ಮ ಆರ್ಥಿಕ ಸ್ವರೂಪ ನಿಲ್ಲಿಸಲಿಕ್ಕೆ ಹಣ ಖರ್ಚು ಮಾಡುವ ಸಂದರ್ಭ ಬಂದಾಗ ಕೊರತೆ ಆಯವ್ಯಯ ಪತ್ರ ಮಂಡನೆ ಮಾಡಿದರೆ ಅದರಿಂದ ಆಶ್ಚರ್ಯ ಏನೂ ಇಲ್ಲ. 1985-86ನೇ ಸಾಲಿನ ಕೇಂದ್ರ ಸರ್ಕಾರದ ಅರ್ಥ ಸಚಿವರು ಮಂಡಿಸಿರತಕ್ಕ ಬಡ್ಜೆಟ್ ಅವಲೋಕನ ಮಾಡಿದರೆ 3,500 ಕೋಟಿ ರೂಪಾಯಿ ಕೊರತೆ ಕಂಡುಬರುತ್ತಿದ್ದುದು, ಈಗ 150 ಕೋಟಿ ರೂಪಾಯಿ ನಿವ್ವಳ ಲಾಭ ಕಂಡುಬರುತ್ತಿದೆ. ಕೇಂದ್ರ ಸರ್ಕಾರದ ಬಡ್ಜೆಟ್ ಕೊರತೆ ಬಡ್ಜೆಟ್ ಆದಾಗ ನಾವು ಸುಧಾರಿಸಿಕೊಳ್ಳಬಹುದು. ಅದೇ ರಾಜ್ಯ ಸರ್ಕಾರದಲ್ಲಿ ಕೊರತೆ ಬಡ್ಜೆಟ್ ಆದರೆ ತಡೆದುಕೊಳ್ಳುವುದಕ್ಕೆ ಆಗುವುದಿಲ್ಲ. ಈ ಅಂಶವನ್ನು ಡಾ। ತಿಮ್ಮಯ್ಯ, ಇನ್‌ಸ್ಟಿಟ್ಯೂಟ್ ಫಾರ್ ಸೋಷಿಯಲ್ ಚೇಂಜ್ ಎನ್ನತಕ್ಕವರು ಬೇರೆ ಬೇರೆ ಪರಿಣಿತರು ವ್ಯಾಖ್ಯಾನ ಮಾಡಿದ್ದಾರೆ. ಇದರ ಬಗ್ಗೆ ಕೆಲವು ಪತ್ರಿಕೆಯವರು ಸಂಪಾದಕೀಯದಲ್ಲಿಯೂ ಸಹ ಬರೆದಿದ್ದಾರೆ. ನಮ್ಮ ಆಯವ್ಯಯ ಪತ್ರ ಸುಧಾರಣೆ ಮಾಡತಕ್ಕ ಸಂದರ್ಭದಲ್ಲಿ ನಾವು ಯಾವಾಗಲೂ ಕೂಡ ಇನ್‌ಫ್ಲೇಷನರಿ ಟ್ರೆಂಡ್ ಮೆಜರ್ಸ್ ಬರದಹಾಗೆ ಬಡ್ಜೆಟ್ ಇಡಬೇಕು. ಮಾನ್ಯ ರಾಮಕೃಷ್ಣ ಹೆಗಡೆಯವರು ಅರ್ಥ ವಿಚಾರದಲ್ಲಿ ಪರಿಣಿತರು ಎಂದು ಕೆಲವು ರಾಜ್ಯ ಪತ್ರಿಕೆಗಳವರು ಬರೆದದ್ದು ನೋಡಿದೆ. ಮಾನ್ಯ ಸಭಾಧ್ಯಕ್ಷರೆ, ಬಡ್ಜೆಟ್ ನೋಡಿದಾಗ ಯೋಜನೇತರ ವೆಚ್ಚಗಳಿಗೆ ಹೆಚ್ಚು ಮಾಡಿ ಯೋಜನಾ ಕಾರ್ಯಕ್ರಮಗಳಿಗೆ ಕೊರತೆ ಮಾಡಿರುವುದು ಕಂಡುಬರುತ್ತದೆ. ಅರ್ಥ ಶಾಖೆ ನಡೆಸತಕ್ಕ ಬುದ್ಧಿವಂತರು ಯಾರೂ ಮಾಡದೇ ಇರುವಂಥಾದ್ದು ಇದು, ಇದು ಕರ್ನಾಟಕಕ್ಕೆ ಮಾಡಿರತಕ್ಕ ಮಹಾ ಅನ್ಯಾಯ. ಇನ್ನು ಅಂಕಿಅಂಶಗಳ ಕಡೆ ಬರುತ್ತೇನೆ. ಯೋಜನೇತರ ವೆಚ್ಚ ಜಾಸ್ತಿಯಾಗಿರುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅಧ್ಯಕ್ಷರೆ, ಎಕ್ಸ್‌ಪೆಂಡಿಚರ್ ಆನ್ ಡೆವಲಪ್‌ಮೆಂಟ್-ಇದರಲ್ಲಿ ತಮಗೆ ಗೊತ್ತಾಗುತ್ತದೆ. ಅದರಲ್ಲಿ about the cutting down on the capital outlay ಇದೆ. ಅದೂ ಅಲ್ಲದೆ ಸಂಪೂರ್ಣವಾಗಿ ರೆವಿನ್ಯೂ ಅಕೌಂಟ್‌ನಲ್ಲಿ it has been scaled down........ ಸುಮಾರಾಗಿ ಸೋಷಿಯಲ್ ಅಂಡ್ ಕಮ್ಯೂನಿಟಿ ಸರ್ವೀಸಸ್ ಬಗ್ಗೆ ಇಂಟ್ರಿಮ್ ಬಡ್ಜೆಟ್ ಅಂಕಿಅಂಶಗಳನ್ನು ಕೊಡುತ್ತೇನೆ. ಮಾರ್ಚಿಯಲ್ಲಿ ಇಟ್ಟಿರತಕ್ಕ ಬಡ್ಜೆಟ್ ಇದು ಕೋಟಿ ರೂಪಾಯಿಗಳ

ಲ್ಲಿದೆ ; ಅಂದರ 783.02 ಕೋಟಿ ರೂಪಾಯಿ. ಫುಲ್ ಬಡ್ಜೆಟ್ ಈಗ ಇಟ್ಟಿರತಕ್ಕದ್ದು 733.88 ಕೋಟಿ ರೂಪಾಯಿ. ಇಲ್ಲಿ 49.14 ಕೋಟಿ ರೂಪಾಯಿ ಕಡಿಮೆ ಬಿದ್ದಿದೆ. ಇನ್ನು ಎಕನಾಮಿಕ್ ಸರ್ವೀಸಸ್ 663.71 ಕೋಟಿ ರೂಪಾಯಿ, ಫುಲ್ ಬಡ್ಜೆಟ್ 634.39 ಕೋಟಿ ರೂಪಾಯಿ. ಡಿಫರೆನ್ಸ್ 28.32 ಕೋಟಿ ರೂಪಾಯಿ. ಸುಮಾರಾಗಿ ಇದು ಏನು ತೋರಿಸುತ್ತದೆ ಎಂದರೆ economic development has been brought down by 77.46 crores. ಇದರಲ್ಲಿ ಸಂಪೂರ್ಣವಾಗಿ ಕಡಿಮೆಯಾಗಿದೆ. On other hand General Services figure has been increased from 572.08 crores-interim budgetನಲ್ಲಿ ಬಂದಿರತಕ್ಕದ್ದು 587.12 ಕೋಟಿ ರೂಪಾಯಿ. 50.02 ಕೋಟಿ ರೂಪಾಯಿ ಜಾಸ್ತಿಯಾಗಿದೆ. ಇದರ ಟ್ರೆಂಡ್ ನೋಡಿದರೆ ಸ್ಪಷ್ಟವಾಗಿ ಗೊತ್ತಾಗುತ್ತದೆ. 77.46 ಕೋಟಿ ಕೊಟ್ಟಿದ್ದು ಕಾಣುತ್ತದೆ ಇಂಟ್ರಿಮ್ ಬಡ್ಜೆಟ್‌ಗೂ ಫುಲ್ ಬಡ್ಜೆಟಿಗೂ—15.04 ಕೋಟಿ ರೂಪಾಯಿ ಹೆಚ್ಚಳ ನೋಡುತ್ತಿದ್ದೇವೆ. ಆದ್ದರಿಂದ ಅರ್ಥ ಏನಾಯಿತು ? ಬಡ್ಜೆಟ್ ತಯಾರು ಮಾಡಿರುವುದು ರಾಜಕೀಯ ಉದ್ದೇಶಕ್ಕೋಸ್ಕರ ಎಂದು ಪ್ಲಾನ್ ಸ್ಕೀಮು, ಮತ್ತು ನಾನ್ ಪ್ಲಾನ್ ಸ್ಕೀಮುಗಳಿಗೆ ಒದಗಿಸಿರುವ ಹಣ ನೋಡಿದರೆ ಅರ್ಥವಾಗುತ್ತದೆ. ನಾನು ಬಡವರಿಗೆ ಬಟ್ಟೆ ಕೊಡುವುದನ್ನು, ಮಕ್ಕಳಿಗೆ ಪುಸ್ತಕ ಮತ್ತು ಸಮವಸ್ತ್ರ ಕೊಡುವುದನ್ನು ಬೇಡ ಎಂದು ಹೇಳುವುದಿಲ್ಲ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ಯೋಜನೆ ವೆಚ್ಚದಲ್ಲಿ ಕಡಿತ ಆದರೆ, ಭವಿಷ್ಯದಲ್ಲಿ ಕರ್ನಾಟಕ ರಾಜ್ಯವನ್ನು ಪ್ರಗತಿಪಥದತ್ತ ತೆಗೆದುಕೊಂಡು ಹೋಗತಕ್ಕದ್ದರಲ್ಲಿ ಕಡಿತ ಮಾಡಿ, ಯೋಜನೇತರ ಕಾರ್ಯಕ್ಕೆ ಖರ್ಚು ಮಾಡಿದರೆ ರಾಜಕೀಯಗೋಸ್ಕರ ಮಾಡಿದ್ದಾರೆ ಎನ್ನುವುದನ್ನು ಸ್ಪಷ್ಟಪಡಿಸಬೇಕಾಗುತ್ತದೆ. ತಾವು ಅರ್ಥ ಶಾಖೆ ನಿರ್ವಹಣೆ ಮಾಡತಕ್ಕ ಸಂದರ್ಭದಲ್ಲಿ ನಿಜವಾಗಿಯೂ ನಿಮಗೆ ಏನಾದರೂ ಮನಸ್ಸು ಇದ್ದರೆ ನೀವು ಯೋಜನೆ ವೆಚ್ಚಗಳಿಗೆ ಹಣವನ್ನು ತೊಡಗಿಸಿ, ಯೋಜನೇತರ ವೆಚ್ಚ ಕಡಿಮೆ ಮಾಡಲಿಕ್ಕೆ ಕೈ ಹಾಕುತ್ತಿದ್ದೀರಿ. ನೀವು ಅದರ ಬಗ್ಗೆ ಗಮನ ಕೊಟ್ಟಿಲ್ಲ. ಈಗಾಗಲೇ ಕೇಂದ್ರ ಸರ್ಕಾರದ ಮೇಲೆ ಆರೋಪವನ್ನು ಸಾಕಷ್ಟು ಪ್ರಮಾಣದಲ್ಲಿ ಹೊರಿಸಿದ್ದೀರಿ, ಕೇಂದ್ರ ಸರ್ಕಾರ ಮಲತಾಯಿ ಧೋರಣೆ ತೋರಿಸುತ್ತಿದೆ ಎಂದು ಹೇಳಿದ್ದೀರಿ. Step-motherly treatment by the Central Government to the State Government ಎಂದು ಹೇಳಿದ್ದೀರಿ. ನಿರಂತರವಾಗಿ, ಖಾಯಂ ಆಗಿ ಆಪಾದನೆ ಮಾಡುತ್ತಿದ್ದೀರಿ. ಕೇಂದ್ರ ಸರ್ಕಾರದವರು ಸೆಂಟ್ರಲ್ ಅಸಿಸ್ಟೆನ್ಸ್ ಎಷ್ಟೆಷ್ಟು ಕೊಟ್ಟಿದ್ದಾರೆ ಎನ್ನುವುದನ್ನು ನೋಡಿದರೆ ನಮ್ಮ ರಾಜ್ಯದಲ್ಲಿ ಪರ್ ಕ್ಯಾಪಿಟಾ ಇನ್‌ಕಮ್ ಜಾಸ್ತಿಯಾಗಲಿ, ಯೋಜನೆಗಳು ಚೆನ್ನಾಗಿ ನಡೆಯಲಿ ಎಂದು ಬೇಕಾದಷ್ಟು ಹಣವನ್ನು ಕೊಟ್ಟಿದ್ದಾರೆ. ನೀವು ಪರ್‌ಕ್ಯಾಪಿಟಾ ಇನ್‌ಕಮ್ ಹೆಚ್ಚು ಮಾಡಲಿಕ್ಕೆ ಯೋಜನೆಗಳಿಗೆ ಹಣ ತೊಡಗಿಸಬೇಕೆಂದು ಹೇಳಿದ್ದೀರಿ. ಪರ್‌ಕ್ಯಾಪಿಟಾ ಇನ್‌ಕಮ್ ಬಗ್ಗೆ ಒಂದು ಮಾತನ್ನು ಹೇಳಬೇಕಾಗುತ್ತದೆ 1983-84ರಲ್ಲಿ ತಮಗೆ ಗೊತ್ತಿರುವ ಹಾಗೆ ಅದು 5 ಪರ್‌ಸೆಂಟ್ ಇತ್ತು. ಈಗ ಅದು ಸಂಪೂರ್ಣವಾಗಿ ಇಳಿದಿದೆ. ಈಗ ಅದು 3.3 ಪರ್‌ಸೆಂಟ್. Per capita income has come down rapidly and we see lot of difference in this. ಇದು ಏನು ತೋರಿಸುತ್ತದೆ ಅಂದರೆ ರಾಜ್ಯ ಸರ್ಕಾರದ ಆರ್ಥಿಕ ಶಾಖೆ, ಆರ್ಥಿಕ ನೀತಿ ಕೆಟ್ಟ ರೀತಿಯ ಯಜಮಾನರ ಕೈಯಲ್ಲಿ ಉಳಿದುಕೊಂಡಿದೆ ಎನ್ನುವುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಇವರದು ಕೆಟ್ಟ ಮ್ಯಾನೇಜ್‌ಮೆಂಟ್. The entire economy of the state is in the hands of a very bad manager. Here the manager is the Hon'ble Chief Minister Sri Ramakrishna Hegde, who is also the Finance Minister. ಶೇಕಡಾ 5ರಷ್ಟಿದ್ದದ್ದು 3.3ಕ್ಕೆ ಇಳಿದಿದೆ. ಸೆಂಟ್ರಲ್ ಅಸಿಸ್ಟೆನ್ಸ್ ಬಗ್ಗೆ ಪದೇ ಪದೇ ಮಾತನಾಡುತ್ತಿದ್ದಾರೆ. ನಾನು ತಮ್ಮ ಗಮನಕ್ಕೆ ಈ ಸಂದರ್ಭದಲ್ಲಿ ಒಂದು ವಿಚಾರವನ್ನು ತರುತ್ತೇನೆ. ಯಾವ ರೀತಿಯಾಗಿ ಸೆಂಟ್ರಲ್ ಅಸಿಸ್ಟೆನ್ಸ್ ನಮಗೆ ಬಂತು ಮತ್ತು ಬಂದರೂ ಕೂಡ ಯಾವ ರೀತಿಯಲ್ಲೂ ಅದನ್ನು ಸದುಪಯೋಗ ಮಾಡಲಿಲ್ಲ ಎಂಬುದನ್ನು ಹೇಳಬೇಕಾಗುತ್ತದೆ. ಪತ್ರಿಕೆಗಳಲ್ಲಿ ದೊಡ್ಡ ದೊಡ್ಡದಾಗಿ ಕೇಂದ್ರದ ಮಲತಾಯಿ ಧೋರಣೆ ಎಂದು ಹೇಳಿಕೆಗಳೇ ಇವರದ್ದು ಬಂದುಬಿಡುತ್ತವೆ. ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ಇರುವುದರಿಂದ ಇಲ್ಲಿ ಜನತಾ ಸರ್ಕಾರಕ್ಕೆ ಕಿರುಕುಳ ಕೊಡುತ್ತಿದ್ದಾರಂತೆ ಇದರಿಂದ ಜನಕ್ಕೆ 'ಪಾಪ ಹೌದೇನೋ' ಎನ್ನುವ ಅನುಮಾನ ಬರಬಹುದು ನೋಡಿ ಹೆಗಡೆಯವರೇ, ನಿಮ್ಮ ಮನಸ್ಸೇಚ್ಛೆ ವ್ಯಾಖ್ಯಾನಗಳಿಗೆ ನಮ್ಮ ಉತ್ತರ ಸಿದ್ಧವಾಗಿವೆ. ಸೆಂಟ್ರಲ್ ಸೇಲ್ಸ್ ಟ್ಯಾಕ್ಸನ್ನು ಸಂಪೂರ್ಣವಾಗಿ ಕೇಂದ್ರ ರಾಜ್ಯಗಳಿಗೇ ಕೊಡುತ್ತಿತ್ತು. ಇನ್‌ಕಂ ಟ್ಯಾಕ್ಸ್‌ನಲ್ಲಿ ಶೇಕಡ 85ರಷ್ಟು ರಾಜ್ಯಗಳಿಗೆ ಹೋಗುತ್ತಿತ್ತು. ಯೂನಿಯನ್ ಎಕ್ಸೈಸ್ ಡ್ಯೂಟಿ ಶೇಕಡ 45ರಷ್ಟು ರಾಜ್ಯಗಳಿಗೆ ಬರುತ್ತಿತ್ತು. ಅನಂತರ ಎಸ್ಟೇಟ್ ಡ್ಯೂಟಿಯನ್ನು ಕೇಂದ್ರ ಅಬಾಲಿಷ್ ಮಾಡಿದೆ. ಅದರ ಬಾಬ್ತು ಕಳೆದ ಮೂರು ವರ್ಷ

ಗಳಿಂದ ರಾಜ್ಯ ಆದಾಯ ಮಾಡಿಕೊಂಡಿದೆ. ಶೇಕಡಾ ನೂರಕ್ಕೆ ನೂರರಷ್ಟು ರಾಜ್ಯಗಳಿಗೆ ಕೊಡತಕ್ಕಂಥ ಕಾನೂನು ಕೇಂದ್ರದಲ್ಲಿದೆ.

ಸಭಾಧ್ಯಕ್ಷರೇ, ಈ ಸಣ್ಣ ಉಳಿತಾಯದಲ್ಲಿ ಇವರು ಬಹಳ ಕೊಚ್ಚಿಕೊಳ್ಳುತ್ತಿದ್ದಾರೆ. ಏನೆಂದರೆ, ನೋಡಿ, ನಾವು ಕೇಂದ್ರ ಸರ್ಕಾರ ನಿಗದಿಪಡಿಸಿದ್ದಕ್ಕಿಂತ ಹೆಚ್ಚಿನ ಮೊಬಲಗನ್ನು ಸಂಗ್ರಹಿಸಿದ್ದೇವೆ, ಎಂದು ಇವರ ಭುಜವನ್ನು ಇವರೇ ತಟ್ಟಿಕೊಳ್ಳುತ್ತಿದ್ದಾರೆ. ಸೀರೀಸ್ 6, 7ರ ಮುಖಾಂತರ ಕೇಂದ್ರ ಸರ್ಕಾರ ಹಲವಾರು ರಿಯಾಯಿತಿಗಳನ್ನು ಕೊಟ್ಟಿದೆ. ಆದರೂ ಕೇಂದ್ರವನ್ನು ದೂಷಿಸುವ ಇವರ ರಾಗಕ್ಕೆ ಕೊನೆಬಿದ್ದಿಲ್ಲ.

(ಶ್ರೀಮತಿ ಮನೋರಮಾ ಮಧ್ವರಾಜ್ ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು).

ಕೇಂದ್ರ ಎಲ್ಲ ರಾಜ್ಯಗಳಿಗೂ ಮೂರರಲ್ಲಿ ಎರಡರಷ್ಟು ಹಣ ಕೊಡುತ್ತಿದೆ. 12 ಪರ್ಸೆಂಟ್ ಹಣದಲ್ಲಿ ಕೇಂದ್ರ 3 ಪರ್ಸೆಂಟ್ ನಷ್ಟ ಮಾಡಿಕೊಂಡು ನಷ್ಟ ಭರಿಸುತ್ತಿದೆ ನಮ್ಮ ಕೇಂದ್ರ ಸರ್ಕಾರ ಇವೆಲ್ಲದರ ಜೊತೆಗೆ ಮತ್ತೆ ಯಾವ್ಯಾವ ಯೋಜನೆಗಳಿವೆ ಅವುಗಳಲ್ಲೆಲ್ಲ ಕೇಂದ್ರ ಹಣ ಕೊಡುತ್ತಲೇ ಇದೆ. ಎಂದಿಗೂ ಕೇಂದ್ರ ಹಣ ಕೊಡುವಲ್ಲಿ ಹಿಂದೇಟು ಹಾಕಿಲ್ಲ. ಇನ್ನೂ ಅನೇಕ ಯೋಜನೆಗಳಿವೆ : ವಿಜಯನಗರ ಸ್ಟೀಲ್ ಪ್ಲಾಂಟ್. ವಿ.ಐ.ಎಸ್.ಎಲ್. ಮತ್ತೆ ಯಾವುದೇ ಇರಬಹುದು, ಅವಕ್ಕೆಲ್ಲಾ ತೊಂದರೆಮಾಡಿಲ್ಲ. ಈ ಸಂದರ್ಭದಲ್ಲಿ ಒಂದು ಮಾತು ಹೇಳುತ್ತೇನೆ. ಇವರು ಕೇಂದ್ರಕ್ಕೆ ಒಂದು ಪತ್ರ ಬರೆದು ವಿಐಎಸ್ ಎಲ್ ಅನ್ನು ನೀವು ಕೊಂಡುಕೊಂಡು ಬಿಡಿ, ನಮ್ಮ ಕೈಯಲ್ಲಿ ಇದನ್ನು ನಡೆಸಿಕೊಂಡು ಹೋಗಲು ಆಗುತ್ತಿಲ್ಲ ಎಂದು ತಿಳಿಸಿದರು. ಇಂಥಾ ಕೆಟ್ಟ ಸರ್ಕಾರವನ್ನು ನಾನು ಎಂದೂ ಎಲ್ಲೂ ಕಂಡಿಲ್ಲ, ಮತ್ತು ಕೇಳಿಲ್ಲ. ಅಧ್ಯಕ್ಷರೇ, ವಿಶ್ವೇಶ್ವರಯ್ಯನವರು ವಿಐಎಸ್ಎಲ್ ಅನ್ನು ಬೆವರುಸುರಿಸಿ ಕಟ್ಟಿದ್ದರು. ಅಂಥಾ ಒಬ್ಬ ಸಾಧಿಸಿದ್ದನ್ನು ಈ ಸರ್ಕಾರ ಉಳಿಸಿಕೊಳ್ಳುವುದಕ್ಕೆ ಅಸಮರ್ಥವಾಗಿದೆ. ನಮ್ಮ ರಾಜ್ಯದಲ್ಲಿ ಪವರ್ ಶಾರ್ಟೇಜ್ ಇರಬಹುದು. ಇದೇನೋ ಹೊಸ ಸಮಸ್ಯೆಯಲ್ಲ. ಹಿಂದೆಯೂ ಇತ್ತು. ವೇಜಸ್ಸೂ ಜಾಸ್ತಿ ಆಗಿರಬಹುದು. ಇದು ನಮ್ಮ ರಾಜ್ಯವೊಂದರ ಸಮಸ್ಯೆಯಲ್ಲ. ಚೆನ್ನಾಗಿ ಪ್ರಾಫಿಟ್ ಮಾಡಿಕೊಳ್ಳುವಾಗ ಮಾಡಿಕೊಂಡು ಈಗ ಅದನ್ನು ಕುಲಗೆಡಿಸಿ ಕೇಂದ್ರಕ್ಕೆ ಹೊತ್ತುಹಾಕುವ ಮಾತನಾಡುತ್ತಿರುವ ಈ ಜನತಾ ಸರ್ಕಾರಕ್ಕೆ ಯಾವ ನೈತಿಕತೆ ಇದೆ ? ಇದನ್ನೆಲ್ಲ ನೋಡಿಯೇ ನಮ್ಮ ಕೇಂದ್ರ ಮಂತ್ರಿಗಳಾದ ಶ್ರೀ ವೀರೇಂದ್ರ ಪಾಟೀಲರು ಟಾಟಾ ಮ್ಯಾನೇಜ್‌ಮೆಂಟ್ ಅವರನ್ನು ಕರೆಸಿ ಮಾರಾಟದ ಮಾತನ್ನೆತ್ತದೆ ಕೇವಲ ಮ್ಯಾನೇಜ್‌ಮೆಂಟ್ ವಹಿಸಿಕೊಳ್ಳುವ ಘಾತುಕತೆ ನಡೆಸಿದ್ದಾರೆ. ಪಬ್ಲಿಕ್ ಸೆಕ್ಟರ್ ಕಾರ್ಖಾನೆಗಳಿಂದ ಸರ್ಕಾರ ಸ್ವಲ್ಪ ಎಫಿಶಿಯೆನ್ಸಿ ತೋರಿದರೂ ಸಾಕು ನಿವ್ವಳ ಲಾಭ ಮಾಡಬಹುದು. ಉದಾಹರಣೆಗೆ ಕೆ.ಇ.ಬಿ. ಅಥವಾ ಕೆಎಸ್ಆರ್‌ಟಿಸಿ ಗಳನ್ನೇ ತೆಗೆದುಕೊಳ್ಳಿ. ನಿಜವಾಗಿಯೂ ಇವು ಹೆಚ್ಚಿನ ಗಳಿಗೆ ತಂದು ಕೊಡುವಂಥಾ ಪಬ್ಲಿಕ್ ಸೆಕ್ಟರ್ ವ್ಯಾಪ್ತಿಯಲ್ಲಿ ಬರುವುವು. ಆದರೆ ಇಲ್ಲಿ ಏನಾಗಿದೆ ಎಂದರೆ ಅವೆಲ್ಲ ಹೆಚ್ಚಿನ ಲಾಸ್‌ನಲ್ಲಿ ನಡೆಯುತ್ತಿವೆ. ಸಿಂಧ್ಯಾ ಅವರೇ ನೀವು ಇನ್ನೂ ಯುವಕರು, ಜನಗಳ ಕೊಳ್ಳುವ ಶಕ್ತಿ ದಿಢೀರನೆ ಹೆಚ್ಚುವುದಿಲ್ಲ ಎಂಬುದನ್ನು ಎಂದಾದರೂ ಯೋಚಿಸಿದ್ದೀರಾ ? ಏಕ್‌ದಂ ಸಾರಿಗೆ ದರವನ್ನು ಶೇಕಡಾ 30ರಷ್ಟು ಏರಿಸಲಾಗುವುದೆಂದು ಹೇಳುತ್ತಿರುವಿರಲ್ಲ ಅದಕ್ಕೆ ಬದಲು ಸಂಸ್ಥೆಯ ನಷ್ಟದ ಮೂಲಗಳಾವುವು ಎಂಬುದನ್ನು ಪತ್ತೆ ಹಚ್ಚಿದ್ದೀರಾ ? ನಿಮ್ಮ ಅಧಿಕಾರಿವರ್ಗ ವರ್ಷೇ ವರ್ಷೇ ನುಂಗುತ್ತಿರುವ ಹಣದ ಪ್ರಮಾಣ ಹತ್ತಾರು ಕೋಟಿ ದಾಟುವುದೆಂಬುದು ನಿಮಗೆ ಗೊತ್ತಿಲ್ಲವೇ ? ಇಂದು ಡೀಸೆಲ್ ಬೆಲೆ ಜಾಸ್ತಿಯಾಗಿರಬಹುದು : ಟೈರ್ ಬೆಲೆ ಜಾಸ್ತಿ ಮಾಡಿರಬಹುದು ; ಬಿಡಿ ಭಾಗಗಳು ಸಿಗದಿರಬಹುದು. ಆದರೆ ನಿಮ್ಮ ಸಾರಿಗೆ ವ್ಯವಸ್ಥೆಯಲ್ಲಿ ಪ್ರತಿನಿತ್ಯ ಕಂಡಕ್ಟರುಗಳು ಜೇಬಿಗಿಳಿಸುವ ಮೊಬಲಗು ಎಷ್ಟು ? ಪ್ರತಿ ಚಾಸಿಸ್ ಮೇಲೆ ಎಷ್ಟು ಸಾವಿರ ಮಾಯವಾಗುತ್ತಿದೆ ? ಇಂಥ ಲೂಪ್‌ಹೋಲ್ಸ್‌ನ್ನೆಲ್ಲ ಮುಚ್ಚದೆ ಮಧ್ಯಮವರ್ಗ ಮತ್ತು ಬಡ ಜನತೆ ಬಳಸುವ ರಾಜ್ಯ ಸಾರಿಗೆಗೆ ಏಕ್‌ದಂ 30 ಪರ್ಸೆಂಟ್ ದರ ಏರಿಸುವುದಕ್ಕೆ ನೀವು ಹೇಗೆ ಮುಂದಾಗುತ್ತೀರಿ ? ಬಡ ಜನತೆಯ ಉದ್ಧಾರ ಮಾಡಿಬಿಡುತ್ತೇವೆ ಎಂದು ಅವರ ವೋಟು ಪಡೆದು ಮೌಲ್ಯಾಧಾರಿತ ರಾಜಕಾರಣವೆಂಬ ಆಷಾಡಭೂತಿಯಂತೆ ವರ್ತಿಸುತ್ತಿರುವ ನಿಮ್ಮ ಸರ್ಕಾರದ ಲೆಕ್ಕದಲ್ಲಿ ಲಂಚ ಸ್ವೀಕರಿಸುವುದೂ ಸಹ ಮೌಲ್ಯಾಧಾರಿತವಾಗಿಯೇ ? ಹಾಲಿನ ದರವನ್ನು ದೊಡ್ಡ ಪ್ರಮಾಣದಲ್ಲಿ ವ್ಯವಸ್ಥಿತವಾಗಿ ಏರಿಸಿದ್ದೀರಿ. ಅಲ್ಲಿ ಯಾವುದೂ ಲೂಪ್‌ಹೋಲ್ಸ್ ಇಲ್ಲವೇನು ? ಇವತ್ತು ಕರ್ನಾಟಕದಲ್ಲಿ ಎಲ್ಲಿ ನೋಡಿದರೂ ಲಂಚಮಯವಾಗಿದೆ. ಹಿಂದೆ ಅದು ಇರಲಿಲ್ಲವೆಂದಲ್ಲ. ಆದರೆ ಇವತ್ತು ರಾಜಾರೋಷವಾಗಿ ಲಂಚ ನಡೆಯುತ್ತಿದೆ. ಲಂಚ ಪ್ರಮಾಣವು ಶೇಕಡವಾರು ಕಡಿಮೆಯಾಗಿದೆಯೇ ? ಹಾಗಿದ್ದರೆ ಆಧಾರ ತೋರಿಸಿ. ಇದನ್ನೆಲ್ಲ ನೀವು ಇನ್ನೂ ಅರ್ಥಮಾಡಿಕೊಂಡಿಲ್ಲ. ನಿಮಗೆ ಅರ್ಥಮಾಡಿಕೊಳ್ಳಲು ಇನ್ನೂ ಕೆಲವು ದಿನ ಬೇಕು.

3-00 p.m.

ನಮ್ಮ ಕಾಲದಲ್ಲಿ ಲಂಚ ಇತ್ತೆಂದು ನೀವು ಹೇಳುತ್ತಿದ್ದೀರಿ. ಮತ್ತು ಅದನ್ನು ನಾವು ನಿಲ್ಲಿಸುತ್ತೇವೆಂದು ಹೇಳಿದ್ದೀರಿ. ಆದರೆ ನಿಲ್ಲಿಸಿಲ್ಲ. ನೀವು ಸಾಧನೆ ಮಾಡಿದ್ದು ಏನು. ಇದರ ಬಗ್ಗೆ ರಾಜ್ಯಪಾಲರ ಭಾಷಣದಲ್ಲಾಗಲೀ ಅಥವಾ ಬಡ್ಜೆಟ್ಟಿನಲ್ಲಾಗಲೀ ಒಂದು ಚಕಾರ ಶಬ್ದವೂ ಇಲ್ಲ. ಇವತ್ತು ಸರ್ಕಾರಿ ಕಚೇರಿಗಳಲ್ಲಿ ಎಲ್ಲಿ ಹೋದರೂ ಅಧಿಕಾರಿಗಳಿಗೆ ಲಂಚ ತೆಗೆದುಕೊಳ್ಳುವುದಕ್ಕೆ ಧೈರ್ಯ ಇದೆ. ಇವತ್ತು ಲಂಚ ತೆಗೆದುಕೊಳ್ಳುವ ಕೆಲಸ ಕಾನೂನುಬದ್ಧವಾಗಿ ಒಂದು ಗ್ರೀನ್ ಸಿಗ್ನಲ್ ಇದ್ದ ಹಾಗೆ ಇದೆ ಮಾನ್ಯ ಬೊಮ್ಮಾಯಿಯವರು ಸಬ್ ರಿಜಿಸ್ಟ್ರಾರ್ ಕಚೇರಿಗೆ ಹೋಗಿ ನೋಡಿದರೆ ಗೊತ್ತಾಗುತ್ತದೆ. ನಾನು ಇದರ ಬಗ್ಗೆ ಸವಿಸ್ತಾರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಒಂದು ಉದಾಹರಣೆ ಕೊಟ್ಟಿದ್ದೇನೆ ಅಷ್ಟೆ. ಈ ಆಡಳಿತ ಯಂತ್ರವನ್ನು ಚೊಕ್ಕಟ ಮಾಡತಕ್ಕಂತಹ ವಿಚಾರದಲ್ಲಿ ಯಾವ ಚಿಂತನೆಯನ್ನೂ ಮಾಡದೇ ಇರತಕ್ಕಂತಹ ಮಾನ್ಯ ರಾಮಕೃಷ್ಣ ಹೆಗಡೆಯವರು, ಜನತಾ ಸರ್ಕಾರದವರು ಮೌಲ್ಯಾಧಾರಿತ ರಾಜಕಾರಣದ ಬಗ್ಗೆ ವ್ಯಾಖ್ಯಾನ ಮಾಡಲು ಯಾವ ಮೂಲಭೂತವಾದ ಹಕ್ಕು ಪಡೆದಿದ್ದಾರೆಂದು ಕೇಳುತ್ತೇನೆ. ಅವರ ಸಾಧನೆಯನ್ನು ಜನತೆಯ ಮುಂದೆ ಇಡಲಿ. ಲಂಚ ನಿರ್ಮೂಲನದ ಬಗ್ಗೆ ಒಂದು ಚಕಾರ ಶಬ್ದ ಕೂಡ ಇಲ್ಲ. ಈ ಬಡ್ಜೆಟ್ಟಿನಲ್ಲಿ ಒಂದು ಹೊಸ ಪದವನ್ನು ಜನತಾವಲಯ ಎಂದು ಸೇರಿಸಿದ್ದೀರಿ. ಜನತಾಪಕ್ಷದ ಹೆಸರನ್ನು ನೋಡಿಕೊಂಡು ಆ ಹೆಸರನ್ನು ಇಟ್ಟಿದ್ದೀರಿ. ಜನತಾ ಪಕ್ಷದ ಬಗ್ಗೆ ಯಾವ ಮಾತನ್ನೂ ಆಡಬಾರದು. ಅದರ ಬದಲು ಜನರ ವಲಯ ಎಂದರೆ ಆಗುತ್ತಿತ್ತು. ಇದರಲ್ಲೂ ಜನತಾ ಪಕ್ಷವನ್ನು ತೂರಿಸಬೇಕೆಂದು ಮಾಡಿದ್ದೀರಿ. ಮತ್ತು ಬಡವರಿಗೆ ಹ್ಯಾಂಡ್‌ಲೂಮ್ ಬಟ್ಟೆಯನ್ನು ನೀಡುವ ಬಗ್ಗೆ ಮಾನ್ಯ ಬಸವಣಪ್ಪನವರು ಹುಬ್ಬಳ್ಳಿ, ಧಾರವಾಡದಲ್ಲಿ ಒಂದು ಹೇಳಿಕೆ ಕೊಟ್ಟರು. 20 ರೂಪಾಯಿಗಳಿಗೆ ಒಂದು ಸೀರೆ, ಕುಪ್ಪಸದ ಕಣ ಕೊಡುತ್ತೇವೆಂದು. ಅದಕ್ಕೆ ಜನತಾ ಪಕ್ಷದ ಬಾರ್ಡರ್, ಸೇರಿಸಿ, ಅದನ್ನು ಜನರ ಮೈಗೆ ತೊಡಿಸುವ ಹಾಗಿದ್ದರೆ ಕೇಂದ್ರ ಸರ್ಕಾರ ಏನು ಇದಕ್ಕೆ ಸಬ್ಸಿಡಿ ಕೊಡುತ್ತಿದೆ ಅದನ್ನು ನಿಲ್ಲಿಸಬೇಕಾಗುತ್ತದೆ. ಆ ಹಣ ನಿಮ್ಮದೂ ಅಲ್ಲ ; ನಮ್ಮದೂ ಅಲ್ಲ, ಅದು ಸಾರ್ವಜನಿಕರದ್ದು. ಅದನ್ನು ತೆಗೆದುಕೊಂಡು ಸೀರೆಮೇಲೆ ಜನತಾ ಪಕ್ಷದ ಪತಾಕೆಯನ್ನು ಸೇರಿಸಿ, ಜನರ ಮೈಮೇಲೆ ಹೊರಿಸುವುದಕ್ಕಾಗುವುದಿಲ್ಲ. ಒಂದು ವೇಳೆ ತಾವು ಹಾಗೇನಾದರೂ ಮಾಡಿದ್ದೇ ಆದರೆ, ನಾವೂ ಕೂಡ ಅದನ್ನೇ ಮಾಡಬೇಕಾಗುತ್ತದೆ. ಏಕೆಂದರೆ, ಅದಕ್ಕೆ ಕೇಂದ್ರ ಸರ್ಕಾರದ ಸಹಾಯವೂ ಕೂಡ ಇದೆ. ಜನತಾ ಪಕ್ಷದ ಫ್ಲಾಗನ್ನು ಸೀರೆಗೆ ಸೇರಿಸಿದರೆ, ಅದನ್ನು ಹೆಣ್ಣುಮಕ್ಕಳು ಉಡುತ್ತಾರೆಂದು ತಿಳಿದುಕೊಳ್ಳಬೇಡಿ. ಉಟ್ಟಿರುವ ಸೀರೆಯನ್ನು ಬಿಚ್ಚಿ ಎಸೆದು ಬೇರೆ ಬೇರೆ ಉಟ್ಟುಕೊಳ್ಳುತ್ತಾರೆ. ಅದು ಬಡವರಿಗೆ ಗೊತ್ತಿದೆ. ಆದುದರಿಂದ ದಯವಿಟ್ಟು ಈ ವಿಚಾರಕ್ಕೆ ಕೈಹಾಕುವುದಕ್ಕೆ ಹೋಗಬೇಡಿ. ಇದರ ಬಗ್ಗೆ ನಾಗಲೋಟದಲ್ಲಿ ಹೋಗುವುದು ಬೇಡ.

ಶ್ರೀ ಆರ್. ಎಲ್. ಜಾಲಪ್ಪ.—ಹೆಣ್ಣು ಮಕ್ಕಳ ಹಣೆಯ ಮೇಲೆ ಕೈ ಗುರುತಿನ ಕುಂಕುಮ ಹಚ್ಚಿದ್ದೀರಲ್ಲ :

ಶ್ರೀ ವೇದಾಂತ ಹೆಮ್ಮಿಗೆ.—ಮಾನ್ಯ ಬಂಗಾರಪ್ಪನವರು ಹೇಳಿದ ಹಾಗೆ, ಜನತಾ ಪಕ್ಷದ ಸಿಂಬಲ್ ಇರತಕ್ಕಂತಹ ಸೀರೆಯನ್ನು ಮಹಿಳೆಯರು ಬಿಚ್ಚಲಿ, ಅದನ್ನು ಕಿತ್ತು ಹಾಕುತ್ತಾರೆಂದು ಹೇಳಿದರೆ, ಅವರು ದುಶ್ಯಾಸನನ ಪಾತ್ರವನ್ನು ಮಾಡುತ್ತಾರೆಯೆ ?

ಶ್ರೀ ಎಸ್. ಬಂಗಾರಪ್ಪ.—ಆ ಕೆಲಸಕ್ಕೆ ತಾವೇ ಸೂಕ್ತವೆಂದು ನನಗೆ ಕಾಣಿಸುತ್ತದೆ. ಅದಕ್ಕೆ ನಿಮ್ಮನ್ನೇ ನಿಲ್ಲಿಸುತ್ತೇವೆ. ಚುನಾವಣೆ ಕಾಲದಲ್ಲಿ ನಾವು ನಮ್ಮ ದುಡ್ಡಿನಿಂದ ನಮ್ಮ ಪಕ್ಷದ ಸಿಂಬಲ್ ಅನ್ನು ಮುಖಕ್ಕೂ ಹಚ್ಚುತ್ತೇವೆ ; ಕಾಲಿಗೂ ಹಚ್ಚುತ್ತೇವೆ. ನಿಮ್ಮ ರೊಕ್ಕದಿಂದಲ್ಲ, ಸಾರ್ವಜನಿಕರ ಹಣದಿಂದಲ್ಲ. ನಿಮ್ಮ ಹಾಗೆ ನಮ್ಮ ಪಕ್ಷದ ಸಿಂಬಲ್ ಅನ್ನು ಸೀರೆಗೆ ಅಂಟಿಸುವುದಕ್ಕೆ ಹೋಗುವುದಿಲ್ಲ. ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಇದು ಹೆಚ್ಚು ದಿವಸ ಬಾಳಿಕೆ ಬರುವುದಿಲ್ಲ, ಹಾಲಿನ ಬೆಲೆ ಜಾಸ್ತಿ ಮಾಡಿದ್ದೀರಿ. ಸಾರ್ವಜನಿಕರ ಹಣವನ್ನು ಪೋಲು ಮಾಡತಕ್ಕಂತಹ ವಿಚಾರದಲ್ಲಿ ತೊಡಗಿದ್ದೀರಿ. ಈ ಬಡ್ಜೆಟ್ ಮೇಲೆ ಚರ್ಚೆ ಪ್ರಾರಂಭಿಸುವುದಕ್ಕೆ ಮೊದಲು ನೀವು ಇದರ ಬಗ್ಗೆ ಸ್ಪಷ್ಟೀಕರಣ ಕೊಡಬೇಕಿತ್ತು, ಹ್ಯಾಂಡ್‌ಲೂಮ್ ಮೇಲೆ ಕೇಂದ್ರಸರ್ಕಾರ ಸಬ್ಸಿಡಿ ಕೊಟ್ಟಿದ್ದಾರೆ. ಅದನ್ನು ಸದುಪಯೋಗಪಡಿಸಿಕೊಳ್ಳುತ್ತಿದ್ದೀರಿ. ಒಂದು ಸ್ಕ್ವೇರ್ ಮೀಟರ್ ಬಟ್ಟೆಗೆ 2-3-5 ರೂಪಾಯಿ ಇದೆ, ಬಟ್ಟೆಗಳ ಗುಣಕ್ಕೆ ತಕ್ಕಂತೆ ಇದೆ, ಇದಕ್ಕೆ ರಾಜ್ಯ ಸರ್ಕಾರ ಕೂಡ ಸಬ್ಸಿಡಿ ಕೊಡುತ್ತದೆ. ಆದುದರಿಂದ ಇದು ನಮಗೂ ಸೇರುತ್ತದೆ. ಇದರಲ್ಲಿ ಜನತಾ ಪಕ್ಷದ ಹಣ ಒಂದೇ ಇದೆ ಅನ್ನುವ ಹಾಗಿದ್ದರೆ, ನಾವೂ ಕೂಡ ಇದು ನಮ್ಮದು ಅನ್ನತಕ್ಕಂತಹ ಒಂದು ವಾದವನ್ನು ನಿಮ್ಮ ಮುಂದೆ ಇಡಬೇಕಾಗುತ್ತದೆ. ದಯವಿಟ್ಟು ಈ ಕೆಲಸವನ್ನು ಬಿಡಿ. ನೀವು ಏನಾದರೂ ಒತ್ತಾಯ ಮಾಡಿದರೆ, ನಂತರ ಅದನ್ನು ತೆಗೆದುಕೊಳ್ಳುವುದಕ್ಕೆ ತಾವು ಸಿದ್ಧರಾಗಿರಬೇಕಾಗುತ್ತದೆ. ಇಂತಹ ಒಂದು ಸಂದರ್ಭದಲ್ಲಿ ನಮ್ಮ ಕರ್ನಾಟಕ

ರಾಜ್ಯಕ್ಕೆ ಆದಂತಹ ಅನ್ಯಾಯದ ಬಗ್ಗೆ ಪದೇ ಪದೇ ಕೇಂದ್ರಸರ್ಕಾರಕ್ಕೆ ಇವರು ಪತ್ರವನ್ನು ಬರೆಯುತ್ತಿದ್ದಾರೆ. ನಾವು ಅಕ್ಕಿಯನ್ನು ಕೊಡುತ್ತಿದ್ದೇವೆ. ಇದಕ್ಕೆ ಕೇಂದ್ರಸರ್ಕಾರದಿಂದ ಹಣದ ಸಹಾಯ ಸಿಗುತ್ತಿಲ್ಲ. ಒಂದು ಕೆ.ಜಿ. ಅಕ್ಕಿಗೆ 2-30 ರೂಪಾಯಿನಂತೆ ಕೊಡತಕ್ಕಂಥಾದ್ದರಲ್ಲಿ ಕೇಂದ್ರಸರ್ಕಾರದ ಸಬ್ಸಿಡಿ 67 ಪೈಸೆ ಇದೆ. ಇನ್ನು ಹಸಿರು ಕಾರ್ಡ್‌ಗಳನ್ನು ಮಾಡಿದ್ದಾರೆ. ಇವರು ಚುನಾವಣೆಗೆ ಮೊದಲು ಏನು ಹೇಳಿದ್ದಾರೆಂದರೆ ನಾವು ಅಧಿಕಾರಕ್ಕೆ ಬಂದರೆ ಕರ್ನಾಟಕ ರಾಜ್ಯದಲ್ಲಿರತಕ್ಕ ಎಲ್ಲಾ ಜನರಿಗೆ ಎರಡು ರೂಪಾಯಿಗೆ ಒಂದು ಕೆ.ಜಿ. ಅಕ್ಕಿಯನ್ನು ಕೊಡುತ್ತೇವೆ ಎಂದು ಬಡವರಿಗೆ ಮಧ್ಯಮ ವರ್ಗದವರಿಗೆ ಎಲ್ಲರಿಗೂ ಕೊಡುತ್ತೇವೆಂದು ಹೇಳಿದ್ದಾರೆ. ಈಗ Poores of the poor ಎಂದು ಹೇಳುತ್ತಿದ್ದಾರೆ ಕರ್ನಾಟಕದಲ್ಲಿರತಕ್ಕ ಎಲ್ಲಾ ಜನರಿಗೂ ಕೊಡುತ್ತೇವೆಂದು ಆವತ್ತು ಹೇಳಿದ್ದರು. ಯಾಕೆಂದರೆ ಇವರಿಗೆ ಓಟು ಬೇಕಾಗಿತ್ತು, ಓಟು ತೆಗೆದುಕೊಂಡ ಮೇಲೆ ಏನು ಮಾಡಿದರು ಅಂದರೆ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕವರಿಗೆ ಮಾತ್ರ ಎಂದು ಹೇಳಿದರು. ಬಹುಮತ ಪಡೆದುಕೊಂಡು ಪ್ರಮಾಣವಚನ ಸ್ವೀಕಾರ ಮಾಡಿದ ಮೇಲೆ ಹೇಗೂ ಇನ್ನು ಐದು ವರ್ಷ ಚಿಂತೆಯಿಲ್ಲವೆಂದು ಬೇರೆ ಮಾತನ್ನು ಹೇಳಿದರು. ಒಂದು ನಾಲಿಗೆಯಲ್ಲಿ ಎರಡು ಮಾತು, ಮೊದಲು ಹೇಳಿದಂತೆ ನಡೆದುಕೊಳ್ಳ ಬೇಕಾಗಿತ್ತು. ವಾರ್ಷಿಕ ಉತ್ಪನ್ನ ಕಡಿಮೆ ಇರತಕ್ಕವರಿಗೆ ಅದರಲ್ಲೂ ಕಡು ಬಡವರಿಗೆ ಕೊಡುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಅಧಿಕಾರಿಗಳು ಈಗ ಗುರುತು ಮಾಡಿರತಕ್ಕ ಫಲಾನು ಭವಿಗಳನ್ನು ಬಿಟ್ಟು, ಅದರಲ್ಲೂ ಕಡಿಮೆ ಆದಾಯ ಇರತಕ್ಕವರನ್ನು ಹಳ್ಳಿಗಳಿಗೆ ಹೋಗಿ ಪಟ್ಟಿಮಾಡಿ ಎಂದು ಇಲ್ಲಿಂದ ಮೊನ್ನೆ ತಾನೇ ಒಂದು ಸುತ್ತೋಲೆಯನ್ನು ಕಳುಹಿಸಿದ್ದಾರೆ. ನೀವೀಗ ಗುರುತು ಮಾಡಿರುವ ಕಡುಬಡವರಲ್ಲಿ ಅತಿ ಕಡುಬಡುವರನ್ನು ಗುರುತುಮಾಡಿಯೆಂದು ಹೇಳಿದ್ದಾರೆ. ಈಗ ಅಧಿಕಾರಿಗಳು ಒಂದು ಊರಿನಲ್ಲಿ 100 ಮನೆಗಳು ಇದ್ದರೆ 30ರಿಂದ 60 ಮನೆಗಳಲ್ಲಿ ಬಡವರು ಇದ್ದಾರೆ ಎಂದು ಪಟ್ಟಿ ಮಾಡಿದ್ದರು. ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಒಂದು ಊರಿನಲ್ಲಿ ನಾಲ್ಕೈದು ಕುಟುಂಬಗಳು ಮಾತ್ರ ಎಲ್ಲದರಲ್ಲೂ ಸರಿಯಾಗಿರುತ್ತಾರೆ. ಉಳಿದವರೆಲ್ಲರೂ ಬಡವರೇ ಆಗಿರುತ್ತಾರೆ. ಶೇಕಡಾ 90ರಷ್ಟು ಜನರ ಆರ್ಥಿಕ ಪರಿಸ್ಥಿತಿ ಬಹಳ ಕೆಟ್ಟುಹೋಗಿದೆ. 2ರೂಪಾಯಿಗೆ ಒಂದು ಕೆ.ಜಿ. ಅಕ್ಕಿಯನ್ನು ಕೊಡಲಿಕ್ಕೆ, ಒಂದು ನಿಯೋಗ ಆಂಧ್ರಪ್ರದೇಶಕ್ಕೆ ಹೋಗಿ ಬರುವುದಿತ್ತು. ಆ ನಿಯೋಗ ಆಂಧ್ರಪ್ರದೇಶಕ್ಕೆ ಹೋಯಿತೋ ಇಲ್ಲವೊ ? ಎನ್. ಟಿ. ರಾಮರಾವ್ ಮತ್ತು ಹೆಗಡೆಯವರು ಬಹಳ ಸ್ನೇಹಿತರು. 'ತೆಲಗು ಗಂಗಾ' ವಿಚಾರದಲ್ಲಿ ರಾಮಕೃಷ್ಣ ಹೆಗಡೆಯವರು ಹೇಳಿಕೆ ಕೊಟ್ಟಿದ್ದಾರೆ. ಅದರ ಬಗ್ಗೆ ಈಗ ಮಾತನಾಡುವುದಕ್ಕೆ ಹೋಗುವುದಿಲ್ಲ. ಹೈದರಾಬಾದ್‌ನಲ್ಲಿ ಒಂದು ಪತ್ರಿಕೆಗೆ ಹೇಳಿಕೆಯನ್ನು ಕೊಟ್ಟಿದ್ದಾರೆ 'ನೀರು ತಾನೇ ಓ ಯಸ್ ಅದಕ್ಕೇನು ಕೊಡೋಣ, ಎಂದು ಹೇಳಿದ್ದಾರೆ. ಈ ಸಂದರ್ಭದಲ್ಲಿ ನಾನು ದೇವೇಗೌಡರನ್ನು ಅಭಿನಂದಿಸುತ್ತೇನೆ. ಅವರ ಹೇಳಿಕೆ ನಮ್ಮ ರಾಜ್ಯದ ಹಿತದೃಷ್ಟಿಯಿಂದ ಕರಾರುವಾಕ್ಕಾಗಿದೆ. ಮಂತ್ರಿಮಂಡಲದ ಸದಸ್ಯರಾಗಿ ದೇವೇಗೌಡರು ಜವಾಬ್ದಾರಿಯುತವಾದ ಹೇಳಿಕೆಯನ್ನು ಕೊಟ್ಟಿದ್ದಾರೆ ಬೇಜವಾಬ್ದಾರಿಯುತವಾದ ಹೇಳಿಕೆಯನ್ನು ಕೊಟ್ಟಿರುವವರು ಮುಖ್ಯ ಮಂತ್ರಿಗಳು. ಹೈದರಾಬಾದ್‌ನಲ್ಲಿ ಮುಖ್ಯಮಂತ್ರಿಗಳು ಕೊಟ್ಟಿರತಕ್ಕ ವರದಿ ಬಂದಿದೆ. ಆಂಧ್ರ ಪ್ರದೇಶದ ನಿಮ್ಮ ಅಕ್ಕಿಯ ಯಾತ್ರೆ ಏನಾಯಿತೋ ಗೊತ್ತಿಲ್ಲ. ಅಕ್ಕಿ ಕೊಡುವ ನಿಮ್ಮ ಹಸಿರು ಕಾರ್ಡ್ ಒಂದು ಊರಿನಲ್ಲಿ ಐದಾರು ಜನಗಳಿಗೂ ಸಿಕ್ಕುವುದಿಲ್ಲ. ಅದರ ಬಗ್ಗೆ ಯೋಚನೆ ಮಾಡಬೇಕಾಗಿದೆ. ನಗರಪ್ರದೇಶಗಳಲ್ಲಿರತಕ್ಕ ಜನರಿಗೆ ಏನು ಮಾಡುತ್ತೀರಿ ? ಚುನಾವಣೆ ಮೊದಲು ಇದನ್ನೆಲ್ಲಾ ಯೋಚನೆ ಮಾಡಲಿಲ್ಲವೆ ? ಬಸವನಗುಡಿಯಲ್ಲಿ ಹೆಗಡೆಯವರು ಚುನಾವಣೆಯಲ್ಲಿ ಗೆಲ್ಲಬೇಕಾಗಿತ್ತು, ಅದಕ್ಕೆ ಮೊದಲು ಎಲ್ಲರಿಗೂ 2ರೂಪಾಯಿಗೆ ಕೆ.ಜಿ. ಅಕ್ಕಿಯನ್ನು ಕೊಡುತ್ತೇವೆಂದು ಹೇಳಿದರು. ಓಟು ತೆಗೆದುಕೊಂಡು ಆಯಿತು, ಆಮೇಲೆ ಪಟ್ಟಣ ಪ್ರದೇಶಗಳಿಗೆ ಅಕ್ಕಿ ಸರಬರಾಜು ಮಾಡುವುದಿಲ್ಲವೆಂದು ಹೇಳುತ್ತಾರೆ. ಕುಡಿಯುವ ನೀರಿಗೋಸ್ಕರ ಪರ್ಜನ್ಯ ಜಪ ಮಾಡಿಸಿಯಾಯಿತು, ಇವತ್ತು ತಿಪ್ಪಗೊಂಡನಹಳ್ಳಿ ಕೆರೆ ಒಣಗಿ ಬಿರುಕು ಬಿಟ್ಟಿರುವುದನ್ನು ಎಲ್ಲರೂ ನೋಡುವಂತಹ ಪರಿಸ್ಥಿತಿಯಾಗಿದೆ ತಿಪ್ಪಗೊಂಡನಹಳ್ಳಿ ಜಲಾಶಯವೇ ಅಲ್ಲ, ಇವರು ಕಾಲಿಟ್ಟಲ್ಲೆಲ್ಲಾ ನೆಲ ಒಣಗಿ ಹೋಗುತ್ತದೆ.

ಶ್ರೀ ಆರ್. ಎಲ್. ಜಾಲಪ್ಪ.—35 ವರ್ಷಗಳಿಂದ ನಿಮ್ಮ ಪಕ್ಷಮಾಡಿದ ಪಾಪದ ಫಲ. ಕಾಡು ಕಡಿದು, ಕಾಡನ್ನು ನಿರ್ಮೂಲನಮಾಡಿ, ನಾವು ಕಾಲಿಡುವುದಕ್ಕೆ ಮೊದಲೇ ಬಂಜರು ಭೂಮಿಯನ್ನು ನಮಗೆ ಬಿಟ್ಟಿದ್ದೀರಿ.

ಶ್ರೀ ಎಸ್. ಬಂಗಾರಪ್ಪ.—ಕೆಲವು ಮಾನ್ಯ ಸದಸ್ಯರು ಮೇಜು ಕುಟ್ಟುತ್ತಾರೆ, ಕಳೆದ 35 ವರ್ಷಗಳಿಂದ ಅಂದರೆ ಅದರಲ್ಲಿ ನಿಮ್ಮ ಹೆಗಡೆಯವರು ಸೇರಿಕೊಂಡಿದ್ದಾರೆ. ಆಮೇಲೆ ನೀವು ಸೇರಿಕೊಳ್ಳುತ್ತೀರಿ.

ಶ್ರೀ ಆರ್. ಎಲ್. ಜಾಲಪ್ಪ.—ಅದು ನಿಮ್ಮಿಂದ ಶುರುವಾಯಿತು.

ಶ್ರೀ ಎಸ್. ಬಂಗಾರಪ್ಪ.—ಈಗ ಅದರ ಬಗ್ಗೆ ಚರ್ಚೆಮಾಡುವುದು ಬೇಡ, ಅವು ಬಹಳಷ್ಟು ಇವೆ. ಅದನ್ನು ಚರ್ಚೆಮಾಡಬೇಕಾದರೆ ನಾನು ಸಿದ್ಧವಾಗಿದ್ದೇನೆ, ಅದರ ಬಗ್ಗೆ ನಿಮಗೆ ಅನುಮಾನ ಬೇಕಾಗಿಲ್ಲ. ನೀವು ಕಾಲಿಟ್ಟಲ್ಲಿ ನೆಲ ಒಣಗಿ ಹೋಗುತ್ತಿದೆ, ನೀರು ಬತ್ತಿಹೋಗುತ್ತಿದೆ. ಕರ್ನಾಟಕ ರಾಜ್ಯದ 19 ಜಿಲ್ಲೆಗಳಲ್ಲಿ ಎಂದೂ ಈ ತರಹ ಭೀಕರ ಬರಗಾಲ ಬಂದದ್ದು ಇಲ್ಲ. ಉತ್ತರ ಕರ್ನಾಟಕದಲ್ಲಿ ಕೆಲವು ಭಾಗಗಳಲ್ಲಿ ಕೆರೆಗಳು ಬತ್ತಿ ಹೋಗುತ್ತಿವೆ. ಇವತ್ತು ಮಲೆನಾಡು ಪ್ರದೇಶಗಳಲ್ಲೂ ಸಹ ಬರಗಾಲ ಬಂದಿದೆ ಮಾನ್ಯ ಜಾಲಪ್ಪನವರು ಮಂತ್ರಿಮಂಡಲದಲ್ಲಿ ದೊಡ್ಡ ಜವಾಬ್ದಾರಿಯನ್ನು ತೆಗೆದುಕೊಂಡ ಮೇಲೆ ಮಳೆ ಬರುತ್ತಾ ಇಲ್ಲ.

ಅಕ್ಕಿಯ ವಿಚಾರದಲ್ಲಿ ಹೇಳುವುದಾದರೆ ಎಲ್ಲರಿಗೂ ಕೊಡುತ್ತೇವೆಂದು ಹೇಳಿ ನಗರ ಪ್ರದೇಶಗಳಲ್ಲಿರ ತಕ್ಕವರಿಗೆ ನಂಬಿಕೆ ದ್ರೋಹ ಮಾಡಿದ್ದೀರಿ. ಏತಕ್ಕೆ ಆರೀತಿ ಮಾಡಿದ್ದೀರಿ ? ಹಿಂದೆ ನೀರು ಸಿಗದಿದ್ದರೆ ಅರ್ಜುನ ಬಾಣ ಹೊಡೆದು ನೀರು ತರಿಸುತ್ತಿದ್ದ. ನೀವು ಅಕ್ಕಿಯನ್ನು ಕೊಡಲಿಕ್ಕೆ ಏನು ಮಾಡುತ್ತೀರಿ ನೋಡೋಣ. ಜನಗಳಿಗೆ ಬೇಕಾಗಿರುವುದು ಅಕ್ಕಿ, ನೀವು ಕೊಟ್ಟಂತಹ ಭರವಸೆಯನ್ನು ಈಡೇರಿಸ ಬೇಕು. ಕರ್ನಾಟಕ ರಾಜ್ಯದ ನಗರಪ್ರದೇಶಗಳಲ್ಲಿ ಇರತಕ್ಕ ಜನರಿಗೆ ಎರಡು ರೂಪಾಯಿಗೆ ಒಂದು ಕೆ.ಜಿ ಅಕ್ಕಿಯನ್ನು ಕೊಡಬೇಕು. ಪಟ್ಟಣ ಪ್ರದೇಶಗಳನ್ನು ಏತಕ್ಕೆ ಬಿಟ್ಟಿದ್ದೀರಿ ? ಮಂಡಲ್ ಪಂಚಾಯತ್ ಜಿಲ್ಲಾ ಪರಿಷತ್ ಚುನಾವಣೆಗಳು ಬರುತ್ತಿವೆ ನಿಮಗೆ ಓಟು ಬೇಕು ಅದಕ್ಕೋಸ್ಕರ ಈ ರೀತಿ ಮಾಡುತ್ತಿದ್ದೀರಿ. ಹಳ್ಳಿಗಳಿಗೆ ಮಾತ್ರ ಅಕ್ಕಿ ಕೊಡುವುದು, ಪಟ್ಟಣಗಳಿಗೆ ಬರುವುದಕ್ಕೆ ಅಕ್ಕಿ ಮುಗಿಯುತ್ತದೆ, ರಾಜಕೀಯ ದುರುದ್ದೇಶದಿಂದ ಇಂತಹ ಕೆಲಸಗಳನ್ನು ಮಾಡುತ್ತಿದ್ದೀರಿ. ಅಡಿಯಿಂದ ಮುಡಿಯವರೆಗೆ ಆಪಾದಮಸ್ತಕ ರಾಜಕೀಯ ಕೆಟ್ಟ ಚಿಂತನೆಯ ಪ್ರತಿಫಲ ಇದು. ನೀವು ತಪ್ಪು ದಂಡ ತೆರಬೇಕಾಗುತ್ತದೆ. ಅದಕ್ಕೆ ನೀವು ಸಿದ್ಧರಾಗಿರಬೇಕಾಗುತ್ತದೆ. ಇಷ್ಟರೊಳಗೆ ನೀವು ಅಕ್ಕಿಯನ್ನು ಕೊಡಬೇಕಾಗಿತ್ತು. ತಿಂಗಳಾನುಗಟ್ಟಳೆ ಅದರೂ ಅಕ್ಕಿಯನ್ನು ಜನರಿಗೆ ಕೊಡಲಿಲ್ಲ. ಗುಲ್ಬರ್ಗ, ಬಿಜಾಪುರ, ಉಡುಪಿ ಈ ಕಡೆಗಳಲ್ಲಿ ಇದರ ಸುದ್ದಿಯೇ ಇಲ್ಲ. ಈಗ ಒಂದೇ ಸಾರಿ ನವೆಂಬರ್ 1ನೇ ತಾರೀಖಿನಿಂದ ಕೊಡುತ್ತೇವೆಂದು ಹೇಳಿದ್ದಾರೆ. ಕನ್ನಡ ರಾಜ್ಯೋತ್ಸವದ ದಿನವೇ ಏಕೆ ಕೊಡಬೇಕಾಗಿತ್ತು ? ಅದಕ್ಕೆ ಮುಂಚೆ ಕೊಡುವುದಕ್ಕೆ ನಿಮಗೆ ಏನಾಗಿತ್ತು ? ನೀವು ಅಕ್ಕಿಯನ್ನು ಸ್ಟಾಕ್‌ಮಾಡಿಕೊಳ್ಳಬೇಕಾಗಿತ್ತು. ನಿಮ್ಮ ಲೆವಿ ಕಲೆಕ್ಷನ್ ಏನಾಯಿತು ? ಚುನಾವಣೆಯಾದ ತಕ್ಷಣ ನೀವು ಏತಕ್ಕೆ ಕ್ರಮ ತೆಗೆದುಕೊಳ್ಳಲಿಲ್ಲ ? ಜನರನ್ನು ನಂಬಿಸಿ ಓಟು ಪಡೆದು, ಬಹುಮತ ಬಂದಮೇಲೆ ನೀವು ಕೊಟ್ಟಂತಹ ಮಾತನ್ನು ಹಿಂದೆ ತೆಗೆದುಕೊಂಡಿದ್ದೀರಿ.

ನಮ್ಮ ನಾಲಿಗೆ ಸಂಪೂರ್ಣವಾಗಿ ಸತ್ತುಹೋಯಿತು, ಹೋಗಿಬಿಡ್ತು ಎಂಬ ಪದವನ್ನು ಪದೇ ಪದೆ. ಹೇಳುತ್ತಿದ್ದೇನೆ. ಶ್ರೀಮಾನ್ ಕೃಷ್ಣಪ್ಪನವರೇ ಆ ನಾಲಿಗೆ ಸತ್ತು ಹೋಯಿತು.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಇಷ್ಟೊಂದು ವೈಚಾರಿಕಾ ಸೇವಾಕಾಂಕ್ಷಿ ಇರತಕ್ಕಂತವರು ನೀವು ಅಧಿಕಾರವನ್ನು ವಹಿಸಿಕೊಂಡ ಮೇಲೆ ಮಳೆ ನಿಂತು ಹೋಯಿತು. ಕೆರೆಗಳು ಬತ್ತಿ ಹೋದವು. ಇಂತಹ ಅವೈಜ್ಞಾನಿಕ ಮಾತು ನಿಮ್ಮ ಬಾಯಲ್ಲಿ ಬರಬಾರದಿತ್ತು. ಉತ್ತರ ಭಾರತದಲ್ಲಿ ವಿಪರೀತ ಮಳೆ ಬಂದು 6 ಲಕ್ಷ ಎಕರೆಯಲ್ಲಿರುವ ಗೋಧಿ ಹೋಯಿತು. ಅಲ್ಲೆಲ್ಲಾ ಕಾಂಗ್ರೆಸ್ ಸರ್ಕಾರವೇ ಇವೆ. ಇದಕ್ಕೆ ಅವರು ಹೊಣೆ ಅಂತ ಹೇಳುವುದಕ್ಕಾಗುತ್ತದೆಯೇ. ತಾವು ಆ ವಿವರಣೆಗೆ ಹೋಗಲೇಬಾರದು.

ಶ್ರೀ ಎಸ್. ಬಂಗಾರಪ್ಪ.—ನಾವು ಇದ್ದಾಗ ಬರಗಾಲ ಇರಲಿಲ್ಲ ಅಂತ ಹೇಳಲಿಲ್ಲ. ಇದನ್ನೂ ಕೂಡ ತಾವು ಫಾಲೋ ಮಾಡಬೇಕಾಗುತ್ತದೆ. ನಮ್ಮ ಸರ್ಕಾರ ಇದ್ದಾಗ ನಾನೂ ಮಂತ್ರಿಯಾಗಿದ್ದೆ, ರೆವಿನ್ಯೂ ಮಂತ್ರಿಯಾಗಿದ್ದೆ. ಫ್ಲಡ್ ಬಂತು ಹಣವನ್ನು ಮಂಜೂರುಮಾಡಿದೆ ಅದೇ ರೀತಿ ಬರಗಾಲ ಬಂದಾಗ ಹಣವನ್ನು ಮಂಜೂರು ಮಾಡಿದೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ನೀವು ಕಾಲಿಟ್ಟರಿ ; ಎಲ್ಲಾ ಹಾಳಾಗಿ ಹೋಯಿತು.

ಶ್ರೀ ಎಸ್. ಬಂಗಾರಪ್ಪ.—19 ಜಿಲ್ಲೆಗಳಲ್ಲೂ ಹಾಳಾಗಿ ಹೋಗಿದೆಯಲ್ಲ ; ನಮ್ಮ ಕಾಲದಲ್ಲಿ 19 ಜಿಲ್ಲೆಗಳೂ ಬರಗಾಲ ಪರಿಸ್ಥಿತಿಯನ್ನು ಎದುರಿಸಿದ್ದಿಲ್ಲ. ತಾವು ದಯಮಾಡಿ ರೆಕಾರ್ಡನ್ನು ತೆಗೆಸಿ ನೋಡಿ. ಕೆಲವು ವಿಚಾರದಲ್ಲಿ ಬಹಳ ಪ್ರಚಾರ ಪ್ರಿಯರು. ಪ್ರಚಾರಮಾಡಿ ಮಾಡಿ ನಿಮ್ಮ ಮಾತುಗಳೇ ನಿಂತು ಹೋದವು. ಮಂಡಲ್ ಪಂಚಾಯಿತಿ ಹಾಗೂ ಜಿಲ್ಲಾ ಪರಿಷತ್ತಿನ ಚುನಾವಣೆಗಳು ಮುಂದೆ ಬರತ್ತಾ ಇವೆ. ಜನಗಳ ಮುಂದೆ ವಿಚಾರವನ್ನು ತಾವು ಇಡಿ, ನಾವು ಇಡುತ್ತೇವೆ ಅವರು ಕೊಟ್ಟಂತಹ ತೀರ್ಪಿಗೆ ಸಿದ್ಧವಾಗೋಣ. ಒಂದೇ ಒಂದು ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಾದರೆ, ಒಂದು ಕೆ.ಜಿ. ಅಕ್ಕಿಗೆ ಕೇಂದ್ರ ಸರ್ಕಾರದವರು 67 ಪೈಸೆ ಸಹಾಯಧನವನ್ನು ಕೊಡತಕ್ಕಂತಹ ಅಂಶ ನಿಮ್ಮ ಗಮನದಲ್ಲಿ ಇರಲಿ ನಿಮ್ಮ ಪಕ್ಷದ ಲಾಭಕ್ಕಾಗಿ ದುರುಪಯೋಗಪಡಿಸಿಕೊಳ್ಳತಕ್ಕಂತಹ ವಿಚಾರ ಧಾರೆಗೆ ಕೈಹಾಕಿದರೆ ಅದನ್ನು ಒಪ್ಪತಕ್ಕ ಜನ ಕರ್ನಾಟಕ ರಾಜ್ಯದಲ್ಲಿ ನಿಮಗೆ ಸಿಕ್ಕಲಾರರು. ಜನತೆಯ

ಪ್ರತಿಭಟನೆ ನಡೆದೀತು ಎಂಬುದನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಗೋಧಿ ಬಗ್ಗೆ ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ನಮ್ಮಲ್ಲಿ ಗೋಧಿ ಉಪಯೋಗ ಬಹಳ ಕಡಿಮೆ. ಅದಕ್ಕೂ ಕೂಡ ಒಂದು ಕೆ.ಜಿ.ಗೆ 54 ಪೈಸೆ ಸಹಾಯ ಧನವನ್ನು ಕೇಂದ್ರ ಸರ್ಕಾರ ಕೊಡುತ್ತಿದೆ. ಈ ಸಂದರ್ಭದಲ್ಲಿ ರಾಜ್ಯ ಸರ್ಕಾರದವರು ಬಹಳ ಸಾಧನೆ ಮಾಡಿದ್ದೇವೆಂದು ಹೇಳುತ್ತಿದ್ದಾರೆ. ಅದನ್ನು ಈಗ ಕೊಟ್ಟಿರತಕ್ಕಂತಹ ಬಜೆಟ್ ಪುಸ್ತಕವನ್ನು ನೋಡಿದರೆ ಗೊತ್ತಾಗುತ್ತದೆ. ಜನತಾ ಹೌಸಿಂಗ್ ಸ್ಕೀಮಿನಲ್ಲಿ ಎಷ್ಟೆಷ್ಟು ಸಾಧನೆ ಮಾಡಿದ್ದೇವೆಂದು ಹೇಳಿದ್ದಾರೆ. ಅದೇ ರೀತಿ ಬೇರೆ ಬೇರೆ ಕೆಲಸಗಳಲ್ಲಿ ಎಷ್ಟೆಷ್ಟು ಸಾಧನೆ ಮಾಡಿದ್ದೇವೆ ಎನ್ನತಕ್ಕಂತಹ ಮಾತನ್ನು ಹೇಳಿದ್ದಾರೆ. ಮುಂಗಡ ಪತ್ರದ 43ನೇ ಪುಟದಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಕಾರ್ಯಕ್ರಮ, ಅನುಸೂಚಿತ ಪಂಗಡಗಳ ಕಲ್ಯಾಣ ಹಾಗೂ ಕುಡಿಯುವ ನೀರು ಈ ಕಾರ್ಯಕ್ರಮ ದೇಶದಲ್ಲಿ ಮೊದಲನೆಯದು. ಅದೇ ರೀತಿ ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಎರಡನೆ ಸ್ಥಾನವನ್ನು ಗಳಿಸಿದೆ ಎಂಬುದಾಗಿ ಹೇಳಿದ್ದಾರೆ.

ಅದೇ ರೀತಿ ಈ ಕೆಳಕಂಡ ಬಾಬುಗಳ ಸಂಬಂಧದಲ್ಲಿ ಸಾಧನೆಯು ಸರಾಸರಿಗಿಂತ ಕಡಿಮೆಯಾಗಿದೆ ಅಂತ ಹೇಳಿದ್ದಾರೆ, 1) ಜೀತ ಕಾರ್ಮಿಕ 2) ಮನೆ ನಿವೇಶನಗಳು 3) ಆರ್ಥಿಕವಾಗಿ ದುರ್ಬಲವಾದ ವರ್ಗಗಳ ಮನೆಗಳು. 4) ಬಯೋಗ್ಯಾಸ್ ಸ್ಥಿರಯಂತ್ರಗಳು, 5) ಸಂತಾನ ಶಕ್ತಿಹರಣ ಶಸ್ತ್ರ ಚಿಕಿತ್ಸೆಗಳು ಹಾಗೂ 6) ಆರೋಗ್ಯ ಉಪ ಕೇಂದ್ರಗಳು. ಇದರಲ್ಲಿ ಸರಾಸರಿಗಿಂತ ಕೆಳಗೆ ಇದ್ದಾರೆಂದು ಪ್ಲಾನಿಂಗ್ ಕಮೀಷನ್ ರವರೇ ಹೇಳಿದ್ದಾರೆ. ಬಜೆಟ್‌ನಲ್ಲಿ ಒಂದು ಮಾತನ್ನೂ ಈ ಬಗ್ಗೆ ಹೇಳಲಿಲ್ಲ. ಪದೇ ಪದೇ ಶಾಸನ ಸಭೆಯಲ್ಲಿ ಹೇಳಿದ್ದಾರೆ. ಹಿಂದಿನ ಸರ್ಕಾರ ಇದ್ದಾಗ ತಾಲ್ಲೂಕು ಅಭಿವೃದ್ಧಿ ಮಂಡಳಿಗಳಿಗೆ ಬಡಾವಣೆಯನ್ನು ಮಾಡುವುದಕ್ಕೋಸ್ಕರ ಯಾರ್‍ಯಾರು ನಿವೇಶನ ರಹಿತ ಜನ ಇದ್ದಾರೆ, ಅವರಿಗೆ ನಿವೇಶನವನ್ನು ಕೊಡತಕ್ಕ ವಿಚಾರದಲ್ಲಿ ಹಣವನ್ನು ಪ್ರತ್ಯೇಕವಾಗಿ ಇಡುತ್ತಾ ಇದ್ದರು. ಆದರೆ ಈ ಸಾರಿ ಬಜೆಟ್‌ನಲ್ಲಿ ಅದನ್ನು ನಮೂದೇ ಮಾಡಿಲ್ಲ, ಅದು ಹೊರಟುಹೋಯಿತು. ಒಂದು ಪೈಸೆ ಇಲ್ಲ. 1983–84ನೇ ಸಾಲಿನ ಬಜೆಟ್ ಕೂಡ ಸೇರಿದಂತೆ 5 ಪೈಸೆಯನ್ನೂ ಕೂಡ ಇಟ್ಟಿಲ್ಲ. ಹಾಗಿದ್ದ ಮೇಲೆ ನಿಮಗೆ ಯಾವ ನೈತಿಕ ಹಕ್ಕು ಇದೆ, ಬಡವರಿಗೋಸ್ಕರ ಕೆಲಸವನ್ನು ಮಾಡಿದ್ದೇವೆ ಅಂತ ಹೇಳುವುದಕ್ಕೆ ? ಅದೇ ರೀತಿ ಮನೆಗಳ ವಿಚಾರ ತೆಗೆದುಕೊಳ್ಳೋಣ. ಆಲ್ ಇಂಡಿಯಾದ ಆಚಿವ್‌ಮೆಂಟ್‌ನ್ನು ತೆಗೆದುಕೊಂಡರೆ ಅವರು 62 ಪರ್ಸೆಂಟ್ ಸಾಧನೆ ಮಾಡಿದ್ದಾರೆ, ನಮ್ಮ ಕರ್ನಾಟಕ ಸಾಧನೆ ಕೇವಲ 34 ಪರ್ಸೆಂಟ್. ಮನೆಗಳನ್ನಾದರೂ ಕೊಡುತ್ತೇನೆಂದು ಹೇಳಿದ್ದಾರೆ ಅದರ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುತ್ತಿರಲಿಲ್ಲ. ಆ ಮನೆಗಳಿಗೆ ಇವರು ಕೊಡತಕ್ಕಂತಹ ಮರ ಬಾಗಿಲುಗಳು, ಹೆಂಚುಗಳು ಇವುಗಳ ಕ್ವಾಲಿಟಿ ಇಲ್ಲದೆ ಹಾಗೇ ಕಟ್ಟಿದ್ದಾರೋ ಏನೋ ? ಹಾಗೂ ಕಟ್ಟಿದ ತಕ್ಷಣವೇ ಬಿದ್ದು ಹೋಗಿರುವ ಮನೆಗಳನ್ನೂ ಒಟ್ಟು ಮಾಡಿದರೂ ಕೂಡ ಶೇಕಡ 34 ಪರ್ಸೆಂಟ್. ಪುನಃ 1983–84ನೇ ಸಾಲಿನ ವಿಚಾರವನ್ನು ನೋಡಿ. ಏಕೆಂದರೆ 1982–83ರ ಬಜೆಟ್ ಪ್ರಕಾರ ಹಿಂದಿನ ಸರ್ಕಾರ, ಶ್ರೀಮಾನ್ ಗುಂಡೂರಾವ್ ರವರು ಇದ್ದಂತಹ ಸರ್ಕಾರ ಎಷ್ಟು ಮನೆಗಳನ್ನು ಕಟ್ಟಿಸಿದ್ದರು, ಆವಾಗ ಎಷ್ಟು ಹಣವನ್ನು ಇದಕ್ಕಾಗಿ ತೆಗೆದಿಟ್ಟಿದ್ದರು ಅದನ್ನು ಮುಂದುವರಿಸಿದರೇ ವಿನಹ ಅದಕ್ಕಿಂತ ಹೆಚ್ಚು ಒಂದು ರೂಪಾಯಿಯನ್ನೂ ಬಜೆಟ್‌ನಲ್ಲಿ ಇದಕ್ಕಾಗಿ ಒದಗಿಸಿಲ್ಲ. ಆ ವಿವರಗಳನ್ನು ಮಾನ್ಯ ಸದಸ್ಯರಿಗೆ ಕೊಡಿ. ಒಂದು ರೂಪಾಯಿ ಹೆಚ್ಚಿಗೆ ಇಟ್ಟಿಲ್ಲ. ಅದು ನಿಮ್ಮಿಂದ ಆಗುವುದೂ ಇಲ್ಲ. That is why I said here, the all India average has stood at 62% ಅನಿವಾರ್ಯವಾಗಿ ಮುಂದೆ ಹೇಳಬೇಕಾಗುತ್ತದೆ. 1983-84ನೇ ಸಾಲಿನ ಬಜೆಟ್‌ನಲ್ಲಿ 10–12 ಕೋಟಿ ರೂಪಾಯಿಗಳನ್ನು ಹಿಂದಿನ ಬಾಕಿಗಾಗಿ ಖರ್ಚು ಮಾಡಿದ್ದೇವೆಂದು ಹೇಳಿದ್ದಾಯಿತು. ಆದರೆ ಇವರು ಅದಕ್ಕಾಗಿ ಹೆಚ್ಚಿನ ಹಣವನ್ನೇ ತೊಡಗಿಸಲಿಲ್ಲ. ಅದೇ ರೀತಿ 1984–85ನೇ ಸಾಲಿನಲ್ಲೂ ಹೆಚ್ಚು ಹಣವನ್ನು ಮನೆಗಳಿಗಾಗಿ ಇಟ್ಟಿರಲಿಲ್ಲ, ಈವಾಗಲೂ ಇಲ್ಲ. ಹೀಗಾಗಿ ಮನೆಗಳ ಕಾರ್ಯಕ್ರಮ ಸಂಪೂರ್ಣವಾಗಿ ಹಾಳಾಗಿ ಹೋಯಿತು. ಮುಂದೆ ಜನಗಳನ್ನು ಎದುರಿಸುವುದಕ್ಕೆ ಆಗದೇ ಇರುವಂತಹ ಪರಿಸ್ಥಿತಿ ಬರುತ್ತದೆ. ಈಗಿನ ಬಜೆಟ್‌ನಲ್ಲಾದರೂ ಜನತಾ ಮನೆಗಳಿಗೆ ಎಲ್ಲಿದೆ ಪ್ರಾವಿಜನ್ ? ನಾನು ಕೇಳುತ್ತಿದ್ದೇನೆ ನಿಮಗೆ ಜನಗಳ ಬಗ್ಗೆ ಮಾತನಾಡುವುದಕ್ಕೆ ಎಲ್ಲಿದೆ ಹಕ್ಕು ಎಂದು ಈ ಒಂದು ಕಾರ್ಯಕ್ರಮ 1982-83ರಲ್ಲಿ ಪ್ರಾರಂಭವಾಯಿತು. 1985–86ಕ್ಕೂ ಈ ಕಾರ್ಯಕ್ರಮ ಮುಂದುವರಿಯಬಹುದು. ಅದಕ್ಕಾಗಿ ಹಣವನ್ನು ಎಲ್ಲಿ ಒದಗಿಸಿದ್ದೀರಿ ? ಅದಕ್ಕಾಗಿ ಹಣವನ್ನೇ ಒದಗಿಸಿಲ್ಲ ಹೀಗಾದರೆ ಜನಗಳಿಗೆ ಯಾವ ರೀತಿ ಉತ್ತರ ಕೊಡುತ್ತೀರಿ ? ಯಾವ ರೀತಿ ಮನೆಗಳನ್ನು ಕಟ್ಟುತ್ತೀರಿ ? ಇದಕ್ಕಾಗಿ ಯೋಜನೆ ಇರಬೇಕು. ಎಷ್ಟು ಬೇಕೋ ಅಷ್ಟು ಮನೆಗಳನ್ನು ಕೊಡಬೇಕು. ಪ್ರತಿವರ್ಷ ಇದಕ್ಕಾಗಿ ಯೋಜನೆಯನ್ನು ಮಾಡಲೇಬೇಕು. 19 ಜಿಲ್ಲೆಗಳಲ್ಲಿರತಕ್ಕ ನಿವೇಶನ ರಹಿತ ಜನ ಹಾಗೂ ಮನೆ ರಹಿತ ಜನ ಯಾರು ಅಂದರೆ ಬಡವರು, ಕೂಲಿ ಮಾಡತಕ್ಕಂತಹ ವರ್ಗ, ದುರ್ಬಲವರ್ಗದವರು ಹಾಗೂ ಹರಿಜನ - ಗಿರಿಜನರು ಹಿಂದುಳಿದವರ್ಗದವರು, ಅಲ್ಪಸಂಖ್ಯಾತರು, ಎಲ್ಲಾ ಜಾತಿಗಳಲ್ಲೂ

ಬಡವರು ಇದ್ದಾರೆ. ಒಕ್ಕಲಿಗರಲ್ಲೂ ಬಡವರು ಇದ್ದಾರೆ. ಅದೇ ರೀತಿ ಲಿಂಗಾಯಿತರಲ್ಲೂ ಬಡವರು ಇದ್ದಾರೆ. ಅವರು ದುರ್ಬಗ ವರ್ಗದವರು ಎಂಬ ಅರ್ಥ ವ್ಯಾಪ್ತಿಯಲ್ಲಿ ಬರತಕ್ಕಂತಹವರು. ಅವರಿಗೆ ಮನೆಗಳನ್ನು ಕೊಡತಕ್ಕಂತಹ ವಿಚಾರದಲ್ಲಿ ಒಂದು ಮಾತನ್ನೂ ಬಜೆಟ್ ಹೇಳಿಲ್ಲ. ನಿಮಗೆ ಯಾವ ನೈತಿಕ ಹಕ್ಕು ಇದೆ, ಇದು ಪೀಪಲ್ಸ್ ಗೌರ್ನಮೆಂಟ್ ಎಂದು ಹೇಳುವುದಕ್ಕೆ ? ಯಾವ ನೈತಿಕ ಹಕ್ಕು ಇದೆ ಅವರ ಬಗ್ಗೆ ಮಾತನಾಡುವುದಕ್ಕೆ ಎಂದು ನಾನು ಕೇಳುತ್ತಿದ್ದೇನೆ ಇಷ್ಟು ಲಕ್ಷ ಮನೆಗಳನ್ನು ನಾವು ಈ ವರ್ಷದಲ್ಲಿ ಕಟ್ಟಿಸುತ್ತೇವೆಂಬುದನ್ನೂ ಕೂಡ ಕಾಣಿಸಿರಲಿಲ್ಲ. ಲಕ್ಷ ಬೇಡ, ಇಷ್ಟು ಸಾವಿರ ಮನೆಗಳನ್ನು ಈ ವರ್ಷ ಕಟ್ಟಿಸುವುದಕ್ಕೆ ಇಷ್ಟು ಹಣವನ್ನು ತೆಗೆದಿಟ್ಟಿದ್ದೇವೆಂಬುದು ಬಜೆಟ್‌ನಲ್ಲಿ ಬರಬೇಕು. ಆದರೆ ಅದರ ಬಗ್ಗೆ ಒಂದೂ ಮಾತನ್ನೂ ಕೂಡ ಆಡಲಿಲ್ಲ. ಏನು ಕೊಡುತ್ತೀರಿ ? ನಾನ್‌ಪ್ಲಾನ್‌ನಲ್ಲಿ ಸ್ವಲ್ಪ ಹಣವನ್ನು ಕೊಟ್ಟರೆ ಅದರಿಂದ ಏನು ಮಾಡುವುದಕ್ಕೆ ಸಾಧ್ಯ ? ಮನೆಗಳ ಕಟ್ಟಡವನ್ನು ಮಾಡುತ್ತಿರತಕ್ಕಂತಹವರ ಪರಿಸ್ಥಿತಿ ಏನಾಗಿದೆ ಎಂಬುದು ನಿಮಗೆ ಗೊತ್ತಿದೆಯೇ ನಿಮ್ಮ ಚೆಕ್ಕುಗಳ ಪರಿಸ್ಥಿತಿ ಏನಾಗಿದೆ ? ಕೊಟ್ಟಿರತಕ್ಕಂತಹ ಯಾವುದೇ ಚೆಕ್ ಬೌನ್ಸ್ ಆಗಿಲ್ಲ, ರಿಜೆಕ್ಟ್ ಆಗಿಲ್ಲವೆಂದು ಶ್ರೀಮಾನ್ ರಾಮಕೃಷ್ಣ ಹೆಗಡೆಯವರೂ ಹೇಳಿಕೆ ಕೊಟ್ಟರು. ಅದೇ ರೀತಿ ಶ್ರೀಮಾನ್ ಬೊಮ್ಮಾಯಿಯವರೂ ಕೂಡ ಹೇಳಿಕೆಯನ್ನು ಕೊಟ್ಟರು. ಎಷ್ಟೆಷ್ಟೋ ಹೇಳಿಕೆಗಳು ಬಂದವು. ಎಲ್ಲ ಇಲಾಖೆಗಳು ಆಯಾ ಮಿತಿಗನುಸಾರವಾಗಿ ಸಾವಿರಾರು ರೂಪಾಯಿಗಳ ವ್ಯವಹಾರ ಮಾಡಬೇಕಾಗುತ್ತದೆ. ಕೆಲಸಕಾರ್ಯಗಳು ನಡೆಯುತ್ತಿರುತ್ತವೆ. ಲೋಕೋಪಯೋಗಿ ಇಲಾಖೆಯಲ್ಲಾದರೂ ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜೀನಿಯರ್, ಎಕ್ಸಿಕ್ಯೂಟೀವ್ ಇಂಜಿನೀಯರ್, ಅದೇ ರೀತಿ ಸೂಪರಿಂಟೆಡಿಂಗ್ ಇಂಜೀನಿಯರ್‌ಗಳು ಚೆಕ್‌ಗಳನ್ನು ಇಷ್ಯೂ ಮಾಡುತ್ತಾರೆ. ಅದೇ ರೀತಿ ಸುಮಾರು 80 ಇಲಾಖೆಗಳು ಇದ್ದಾವೆ. ಅವರುಗಳೆಲ್ಲರೂ ಕೆಲಸಕಾರ್ಯಗಳಿಗಾಗಿ ಕೊಟ್ಟಂತಹ ಚೆಕ್ಕುಗಳು ಬ್ಯಾಂಕಿನಲ್ಲಿ ಮತ್ತು ಟ್ರೆಜರಿಯಲ್ಲಿ ಬೌನ್ಸ್ ಆಗಿದ್ದಾವೆ. ಇದನ್ನು ನೋಡಿದ ಸರ್ಕಾರ ತಲೆಬಾಗಿಸಬೇಕು. ಹಿಂದೆ ಎಲ್ಲೋ ಒಂದು ಕಡೆ ಸ್ವಲ್ಪ ಹಣವನ್ನು ಕೊಟ್ಟಿಲ್ಲದ್ದಕ್ಕೆ ಮತ್ತು ಕೋರ್ಟ್ ಅಟ್ಯಾಚ್‌ಮೆಂಟ್ ಆಗಿದ್ದಕ್ಕೆ ಅದು ಬಹಳ ದೊಡ್ಡ ಸುದ್ದಿಯಾಗಿತ್ತು. ಘನತೆ, ಗೌರವ, ಮಾನ ಮರ್ಯಾದೆ ಏನೇನೂ ಇಲ್ಲ. ಇವರು ಕೊಟ್ಟಂತಹ ಚೆಕ್ಕುಗಳು ರಿಜೆಕ್ಟ್ ಆಗಿರತಕ್ಕ ವಿಚಾರದಲ್ಲಿ ಹೇಳುವುದಾದರೆ, ಗೋಣಿ ಚೀಲದಲ್ಲಿ ತುಂಬಬಹುದು ಶಾಸಕರುಗಳ ಚೆಕ್ಕುಗಳೂ ಕೂಡ ರಿಜೆಕ್ಟ್ ಆಗಿವೆ. ಸದನದಲ್ಲೇ ಈ ವಿಚಾರ ಪ್ರಸ್ತಾಪಕ್ಕೆ ಬಂತು. ಆ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳು ಮತ್ತು ಬೇರೆ ಬೇರೆ ಮಂತ್ರಿಗಳು ಅವರು ಯಾರೇ ಇರಬಹುದು, ಹೇಳಿಕೆ ಕೊಟ್ಟರು. ಓ.ಡಿ.ಯನ್ನು ಸಿಕ್ಕಾಪಟ್ಟೆ ಮಾಡಿಲ್ಲ, ಮಿತಿಯಲ್ಲಿದ್ದೇವೆ. ಅದೇ ರೀತಿ ಚೆಕ್ಸ್‌ಗಳು ಬೌನ್ಸ್ ಆಗಿಲ್ಲ. ಟ್ರೆಜರಿಯಲ್ಲಾಗಲಿ, ಬ್ಯಾಂಕುಗಳಲ್ಲೇ ಆಗಲಿ ರಿಜೆಕ್ಟ್ ಆಗಿಲ್ಲ, ಏನೇನೂ ಆಗಿಲ್ಲ ಎಂದು ಹೇಳಿದರು.

3-30 p.m.

ಸುಮಾರಾಗಿ ಎಲ್ಲಾ ಇಲಾಖೆಗಳು ಇಶ್ಯೂ ಮಾಡಿ ರಿಜೆಕ್ಟ್ ಆಗಿರತಕ್ಕ ಚೆಕ್‌ಗಳನ್ನು ಗೋಣಿಚೀಲದಲ್ಲಿ ತುಂಬಬಹುದು. ಅದೇ ರೀತಿ ಶಾಸಕರ ಚೆಕ್‌ಗಳನ್ನು ತುಂಬಬಹುದು. ಆದರೆ ಮುಖ್ಯಮಂತ್ರಿಗಳು ಯಾವ ಚೆಕ್‌ಗಳೂ ಉಲ್ಲಂಘನೆಯಾಗಿಲ್ಲವೆಂದು ಹೇಳಿಕೆ ಕೊಟ್ಟಿದ್ದಾರೆ. 19 ಜಿಲ್ಲೆಗಳಲ್ಲೂ ಚೆಕ್‌ಗಳು ರಿಜೆಕ್ಟ್ ಆಗಿವೆ, ಜನತಾ ಮನೆ ಫೌಂಡೇಶನ್ ಹಾಕಿದರೂ, ಗೋಡೆ ಕಟ್ಟಿದರೂ, ಹೆಂಚು ಹಾಕಿದರೂ ಪ್ರತಿಯೊಂದಕ್ಕೂ ಬಿಲ್ಲುಗಳನ್ನು ಪಾಸ್ ಮಾಡಿಕೊಡಬೇಕು ಕಂಟ್ರಾಕ್ಟರಿಗೆ, ಆದರೆ ಅವರ ಬಿಲ್ಲುಗಳು ಪಾಸಾಗದೆ ಕೆಲಸಗಳು ಅಪೂರ್ಣವಾಗಿ ಗೋಡೆ ಕಟ್ಟಿದ್ದೆಲ್ಲ ಮಲೆನಾಡು ಪ್ರದೇಶಗಳಲ್ಲಿ ಮಳೆ ಬಿದ್ದಕಡೆ ಎಲ್ಲ ಬಿದ್ದು ಹೋಗುತ್ತದೆ, ಫೌಂಡೇಶನ್ ಹಾಳಾಗಿ ಹೋಗಿದೆ ಅರ್ಧಂಬರ್ಧ ಕಟ್ಟಿದ ಮನೆಗಳೆಲ್ಲ ಪೂರ್ತಿ ನಾಶವಾಗಿ ಹೋಗುತ್ತಿವೆ. ಇವರು ತಾಲ್ಲೂಕು ಅಭಿವೃದ್ಧಿ ಮಂಡಲಿಗೆ ಆದೇಶ ಕೊಟ್ಟಿದ್ದಾರೆ, ಒಂದು ಬಿಲ್ಲನ್ನೂ ಪಾಸ್ ಮಾಡಬಾರದು, ಚೆಕ್ಕನ್ನು ಇಶ್ಯೂ ಮಾಡಬಾರದೆಂದು ; ಆನರ್ ಮಾಡಬಾರದೆಂದು. ಇದನ್ನು ಕಂಡ ಕಂಟ್ರಾಕ್ಟರುಗಳು ಹೆದರಿ ಕೊಟ್ಟ ಚೆಕ್ಕುಗಳನ್ನು ಹಿಂದಕ್ಕೆ ಕೊಟ್ಟಿದ್ದಾರೆ. ಟ್ರಷರಿಗೆ ಪ್ರೆಸೆಂಟ್ ಮಾಡಿದ ಬೇಕಾದಷ್ಟು ಚೆಕ್‌ಗಳಿಗೆ ಈಗ ಪಾಸ್ ಮಾಡುವುದಕ್ಕಾಗುವುದಿಲ್ಲವೆಂದು ಎಂಡಾರ್ಸ್‌ಮೆಂಟ್ ಕೊಟ್ಟಿದ್ದಾರೆ ಕರ್ನಾಟಕ ರಾಜ್ಯದ ಆರ್ಥಿಕ ಪರಿಸ್ಥಿತಿ ಇಷ್ಟು ಕೆಳಮಟ್ಟಕ್ಕೆ ಹೋಗುತ್ತದೆಂದು ನಾನಂತೂ ಯೋಚಿಸಿರಲಿಲ್ಲ. ಇದಕ್ಕೆ ಹೆಗಡೆಯವರೇ ನಾಯಕತ್ವ ವಹಿಸಿದ್ದಾರೆ. ಇವರ ಬಗ್ಗೆ ಕೆಲವು ಪತ್ರಿಕೆಗಳು ಉಲ್ಲೇಖಿಸಿವೆ. ಇವರೊಬ್ಬರು ಆರ್ಥಿಕ ತಜ್ಞರಂತೆ. ಇವರು ಚೆಕ್ ರಿಜೆಕ್ಟ್ ಮಾಡಿಸುವುದರಲ್ಲಿ ತಜ್ಞರು, ಲಕ್ಷಾಂತರ ರೂಪಾಯಿ ಚೆಕ್‌ಗಳು ಹೋದವು. ನಮಗೆ ಇಷ್ಟು ಲಕ್ಷ ರೂಪಾಯಿ ಹಣ ಬರಬೇಕಾಗಿದೆ, ಇದುವರೆಗೆ ಕೊಟ್ಟಿಲ್ಲವೆಂದು ಹೇಳುತ್ತಿದ್ದಾರೆ. ಒಬ್ಬ ಪತ್ರಿಕೋದ್ಯಮಿಯ 250 ರೂಪಾಯಿ ಚೆಕ್ ರಿಜೆಕ್ಟ್ ಆಗಿದೆ. ನೂರು, ಸಾವಿರ, ಲಕ್ಷ ರೂಪಾಯಿ ಹೀಗೆ ಎಲ್ಲಾ ರೀತಿಯ ಚೆಕ್‌ಗಳು ರಿಜೆಕ್ಟ್ ಆಗಿವೆ. ಇದಕ್ಕೆ ಇವರು ಈ ರೀತಿ ಆದೇಶ ಕೊಟ್ಟಿದ್ದಾರೆ : I demand now, the Hon. Chief Minister or the Minister concerned should

place all these records on the Table of the House. ಇದಕ್ಕೆ ಸಂಬಂಧಪಟ್ಟ ಎಲ್ಲಾ ದಾಖಲಾತಿಗಳನ್ನು ಸಭೆಯ ಮುಂದೆ ಇಡಬೇಕು. ಯಾವ ಇಲಾಖೆಯಿಂದ ಚೆಕ್ ಕೊಡಬಾರದೆಂದು ಆದೇಶ ಹೋಗಿತ್ತು, ಎಷ್ಟು ಚೆಕ್‌ಗಳನ್ನು ಕೊಟ್ಟಿಲ್ಲ, ಎಷ್ಟು ಚೆಕ್‌ಗಳು ರಿಜೆಕ್ಟ್ ಆಗಿವೆ ಎಂಬ ವಿವರಣೆಯನ್ನು ಕೇಳಬಯಸುತ್ತೇನೆ. ಈ ಎಲ್ಲಾ ಮಾಹಿತಿಗಳನ್ನು ಸದನದ ಮುಂದೆ ಇಡಬೇಕು. ಇದು ಕರ್ನಾಟಕ ರಾಜ್ಯದ ಜನರಿಗೆ ಗೊತ್ತಾಗಲಿ. ಇವರು ಆರ್ಥಿಕ ಪರಿಸ್ಥಿತಿಯನ್ನು ಯಾವ ಮಟ್ಟಕ್ಕೆ ಕೊಂಡೊಯ್ದಿದ್ದಾರೆಂಬುದು ರಾಜ್ಯದ ಜನತೆಗೆ ಗೊತ್ತಾಗಲಿ. ಡಿ. ದೇವರಾಜ ಅರಸುವರು ಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿ ಆರ್ಥಿಕ ಪರಿಸ್ಥಿತಿ ಪ್ರಗತಿಪಥದಲ್ಲಿತ್ತು. ಇವರ ಕಾಲದಲ್ಲಿ ಅದು ಹೋಯಿತು. ಏತಕ್ಕೆ ಹಾಗೆ ಆಗಿರಬಹುದೆಂಬುದನ್ನು ನಾವು ಆಲೋಚನೆ ಮಾಡಬೇಕಾಗಿದೆ ನಿಜ ಹೇಳಬೇಕೆಂದರೆ, 1983-84-85ರ ಆರ್ಥಿಕ ವರ್ಷದಲ್ಲಿ ಇವರು ಮಾಡಿರತಕ್ಕ ದುರಾಡಳಿತವೇ ಕಾರಣವೆಂದು ಹೇಳಬಹುದು. ನಾನ್ ಪ್ಲಾನ್ ಸ್ಕೀಂಗಳಿಗೆ ಹಣ ಖರ್ಚು ಮಾಡಿರತಕ್ಕದ್ದು, ರಾಜಕೀಯ ಒತ್ತಾಡಗಳಿಗೆ ಮಣಿದು ಸಂಪೂರ್ಣ ಉತ್ಪನ್ನರಹಿತವಾದ ಯೋಜನೆಗಳಿಗೆ ಹಣ ತೊಡಗಿಸಿದ್ದು ಕಾರಣವಾಗಿದೆ. ಇದರ ಕ್ಕೋಸ್ಕರ ರಾಜ್ಯದ ಆರ್ಥಿಕ ಪರಿಸ್ಥಿತಿ ಈ ಮಟ್ಟಕ್ಕೆ ಬಂದಿದೆ. ಈ ವಿಚಾರದಲ್ಲಿ ನಾನು ಹೆಗಡೆಯವರ ಮೇಲೆ ಪದೇಪದೇ ಆರೋಪ ಮಾಡುವುದಕ್ಕಾಗಲಿ ಅಥವಾ ಹೆಗಡೆಯವರು ಕೇಂದ್ರ ಸರ್ಕಾರದ ಮೇಲೆ ಪದೇಪದೇ ಆರೋಪ ಮಾಡುತ್ತಿದ್ದಾರೆಂದು ಹೇಳುವುದಕ್ಕಾಗಲಿ ತಯಾರಿಲ್ಲ. ಹಣ ಕೊಡತಕ್ಕ ವಿಚಾರದಲ್ಲಿ ಬಹಳ ಜವಾಬ್ದಾರಿರಹಿತವಾದ ಇವರ ನಡುವಳಿಕೆ ಇದೆ. ಹಿಂದೆ ನಾಟಕ ಕಂಪನಿಯೊಂದಕ್ಕೆ ಹಣ ಕೊಟ್ಟು ವಿದೇಶಕ್ಕೆ ಕಳುಹಿಸಿದರು. ಇವರ ಮಾವನ ಮನೆಯ ಹಣವನ್ನು ಎತ್ತಿಕೊಟ್ಟಹಾಗೆ ಕೊಟ್ಟು ಕಳುಹಿಸಿದರು. ಆ ಕಂಪನಿಯವರು ಹೋಗಬೇಕಾದರೆ ಅಡಿಗೆ ಭಟ್ಟನನ್ನು ಕೂಡ ನಾಟಕದಲ್ಲಿ ಪಾತ್ರ ಮಾಡತ್ತಾನೆಂದು ಕರೆದುಕೊಂಡು ಹೋದರು. ಅದಕ್ಕೆಲ್ಲ ಬೇಕಾದಷ್ಟು ಹಣವನ್ನು ಮಂಜೂರ್ಮಾಡಿದರು. ಇದು ಮೌಲ್ಯಾಧಾರಿತ ರಾಜಕಾರಣ ! ಮೌಲ್ಯವನ್ನು ಹುಡುಕಬೇಕಾದರೆ ಹೆಗಡೆಯವರ ರಿಜೆಕ್ಟೆಡ್ ಚೆಕ್‌ನಲ್ಲಿ ಹುಡುಕಬೇಕು. ಅವರು ಕೊಟ್ಟಿರತಕ್ಕ ಹಣದಲ್ಲಿ ಹುಡುಕಬೇಕಾಗಿದೆ. ಅವರ ಹೊಗಳುಭಟ್ಟರಲ್ಲಿ ನಾವು ಮೌಲ್ಯಗಳನ್ನು ಹುಡುಕಬೇಕಾಗಿದೆ. ಇದೇ ಸಂದರ್ಭದಲ್ಲಿ ನಾನು ಎಲ್ಲಾ ವಿಚಾರಗಳನ್ನು ಪ್ರಸ್ತಾಪಿಸುವುದಕ್ಕೆ ಹೋಗದಿದ್ದರೂ ನಮ್ಮ ಯೋಜನೆಗಳಿಗೆ ಹಣವನ್ನು ತೊಡಗಿಸತಕ್ಕ ವಿಚಾರದಲ್ಲಿ ಹೆಗಡೆಯವರೇ ಒಂದು ಮಾತನ್ನು ಹೇಳಿದ್ದಾರೆ. ಅವರು ತಮ್ಮ ರಿಗ್ರೆಟ್ ಅನ್ನು ವ್ಯಕ್ತಪಡಿಸಿದ್ದಾರೆ. ಯೋಜನೆಗಳಿಗೆ ಬೇಕಾಗುವಷ್ಟು ಹಣವನ್ನು ತೊಡಗಿಸುವುದಕ್ಕೆ ನಮ್ಮಿಂದ ಆಗಿಲ್ಲವೆಂದು ತಮ್ಮ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಇವರ ಭಾಷಣದ ಪುಟ 15ರಲ್ಲಿ ಈ ರೀತಿ ಹೇಳಿದ್ದಾರೆ :

> "Because of resource constraints which are not peculiar to our State, I regret that it has not been possible for me to substantially euhance the budgetary allocations for the various development programmes over the provisions made in the last year's budget. When our finacial position improves, I shall be happy to increase the provisions, particularly in the key sectors, like, power, Irrigation, etc. etc."

ಆರ್ಥಿಕ ಮಂತ್ರಿಗಳಾಗಿರುವ ಮುಖ್ಯ ಮಂತ್ರಿಗಳು ತಮ್ಮ ಸೋಲನ್ನು ಸ್ಪಷ್ಟವಾಗಿ ಒಪ್ಪಿಕೊಂಡಿರುವುದಕ್ಕೆ ಸಂತೋಷಿಸುತ್ತೇನೆ ಇದಕ್ಕೆ ಅವರೇ ಸಂಪೂರ್ಣವಾಗಿ ಕಾರಣ. why financial constraints? It is because of his thinking of takitng more Non-Plan schemes. ಕೇಂದ್ರದ ಮೇಲೆ ಪದೇಪದೇ ಇವರು ಆಪಾದನೆಗಳನ್ನು ಹೊರಿಸುತ್ತಾ ಹೋಗಿದ್ದಾರೆ. ಪವರ್ ಕಾರ್ಪೊರೇಷನ್ ಬಗ್ಗೆ ಆಪಾದನೆಗಳು ಇವೆ. ಯಾವ ಯಾವ ಯೋಜನೆಗಳು ಯಾವ ಯಾವ ಹಂತದಲ್ಲಿವೆ ಎಂಬ ವಿವರಗಳನ್ನು ನಾನು ಪಡೆದಿದ್ದೇನೆ. 460 ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸತಕ್ಕ ಶರಾವತಿ ಪ್ರಾಜೆಕ್ ಏನಿದೆ ಇದು ಸುಮಾರು 160.6 ಕೋಟಿ ರೂಪಾಯಿಗಳನ್ನು ಖರ್ಚು ಮಾಡತಕ್ಕ ಪ್ರಾಜೆಕ್ಟ್ ಆಗಿದೆ. ಇದಕ್ಕೆ 1983ರಲ್ಲೇ ಸಿ.ಇ.ಎ. ಯವರು ಟೆಕ್ನೋ ಇಕನಾಮಿಕಲ್ ಕ್ಲಿಯರೆನ್ಸ್ ಕೊಟ್ಟಿದ್ದಾರೆ. ಈ ಕಾ ರ್ಯ ದ ಲ್ಲಿ ಕೇಂದ್ರ ಸರ್ಕಾರ ಹಿಂದೆ ಬಿದ್ದಿಲ್ಲ. ಆದರೆ ಮುಳುಗಡೆಯ ಬಗ್ಗೆ ಇಲಾಖೆಯವರು ವಿಚಾರ ಮಾಡಬೇಕಾಗುತ್ತದೆ. ಇದು ಅರಣ್ಯ ಇಲಾಖೆಗೆ ಮತ್ತೊಂದಕ್ಕೆ ಬರಬಹುದು ಮಾನ್ಯ ಪ್ರಧಾನ ಮಂತ್ರಿಗಳು ಅರಣ್ಯದ ವಿಚಾರದಲ್ಲಿ ಹೆಚ್ಚಿನ ಗಮನ ಕೊಡುತ್ತಿದ್ದಾರೆ. ಪ್ರಕೃತಿ ಸಂಪತ್ತು ಹಾಳಾದರೆ ಸಂಪೂರ್ಣವಾಗಿ ಭೌಗೋಳಿಕ ಚಿತ್ರವೇ ವಿರೂಪಗೊಳ್ಳಬಹುದು ; ಫಲಿತಾಂಶ ಬಹಳ ಕೆಟ್ಟದ್ದಾಗುತ್ತದೆಂಬುದು ಅವರ ವಿಚಾರಧಾರೆಯಾಗಿದೆ ನಿಜವಾಗಿಯೂ ಅವರು ಈ ವಿಚಾರದಲ್ಲಿ ಹೆಚ್ಚಿನ ಗಮನ ಹರಿಸಿದ್ದಾರೆ. ಆದಕ್ಕಾಗಿ ನಾನು ಅವರನ್ನು ಅಭಿನಂದಿಸಲಿಚ್ಛಿಸುತ್ತೇನೆ. ಇಲ್ಲಿ ರಾಜ್ಯದ

ಅರಣ್ಯ ಇಲಾಖೆಯವರು ಕೂಡ ಅಬ್ಜೆಕ್ಷನ್ ರೈಸ್ ಮಾಡಿದ್ದಾರೆ. ನನ್ನ ಭಾಷಣದ ಕಾಲದಲ್ಲಿ ಮಾನ್ಯ ರಾಮಕೃಷ್ಣ ಹೆಗಡೆಯವರು ಇಲ್ಲಿರಬೇಕಾಗಿತ್ತು.

ಚೇರ್ಮನ್.—ಬಿಸಿನೆಸ್ ಆಡ್ವೈಸರಿ ಕಮಿಟಿಗೆ ಹೋಗಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಹಾಗಾದರೆ ಸರಿ ಶರಾವತಿ ಟೈಲ್ ಎಂಡ್ ಪವರ್ ಪ್ರಾಜೆಕ್ಟ್ ವಿಚಾರದಲ್ಲಿ ಅರಣ್ಯ ಇಲಾಖೆಯವರ ಒಪ್ಪಿಗೆ ಕೇಂದ್ರಕ್ಕೆ ಇನ್ನೂ ಕೊಟ್ಟಿಲ್ಲ, ಅವರಿಗೆ ಒಪ್ಪಿಗೆ ಕೊಡದಿದ್ದರೆ ಅವರು ಹೇಗೆ ಕ್ಲಿಯರೆನ್ಸ್ ಕೊಡುತ್ತಾರೆ. ಅವರು ಕ್ಲಿಯರೆನ್ಸ್ ಕೊಟ್ಟಿಲ್ಲ ಎಂದು ಆಪಾದನೆ ಮಾತ್ರ ಮಾಡುತ್ತಿದ್ದಾರೆ ಅವರು ಹೇಗೆ ಕ್ಲಿಯರ್ ಮಾಡಬೇಕು ? ಯೋಜನೆಗಳು ಕ್ಲಿಯರ್ ಆಗದೇ ಇರುವುದಕ್ಕೆ ಕಾರಣ ಇವರೆ. ನಮ್ಮ ರಾಜ್ಯ ಸರ್ಕಾರದ ಅರಣ್ಯ ಇಲಾಖೆಯಲ್ಲಿ ಒಪ್ಪಿಗೆ ಕೊಡದೆ ಈ ವಿಚಾರ ಹಾಗೇ ಬಿದ್ದಿದೆ. 5x50 ಮೆಗಾವಾಟ್ಸ್ ಮತ್ತು 1x18 ಮೆಗಾವಾಟ್ಸ್‌ನ ಅಪ್ಪರ್ ಕೃಷ್ಣಾ ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್ ಏನಿದೆ this power project is linked with irrigation also. ಅಪ್ಪರ್ ಕೃಷ್ಣ ಯೋಜನೆಯಲ್ಲಿ ನೀರಾವರಿ ಮುಖ್ಯವಾದುದು. ಪಕ್ಕದಲ್ಲಿ ಪವರ್ ಜನರೇಷನ್‌ಗೆ ಎಷ್ಟು ಬೇಕೋ ಅಷ್ಟನ್ನು ಇಟ್ಟುಕೊಂಡಿದ್ದಾರೆ. This matter is being examined by Central Electricity Authority. ಅವರು ಇದನ್ನು ಪರಿಶೀಲನೆ ಮಾಡುತ್ತಿದ್ದಾರೆ. 2x10 ಮೆಗಾವಾಟ್ಸ್‌ನ ಗಂಗವಳ್ಳಿ ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್ 1979ರಲ್ಲಿ ಸ್ಯಾಂಕ್ಷನ್ ಆಗಿದೆ. ಇದು 139.8 ಕೋಟಿ ರೂಪಾಯಿಗಳ ಯೋಜನೆ. 5 ವರ್ಷಗಳ ಹಿಂದೆ ಮಂಜೂರಾಗಿರುವುದು. The State Government had formed a Committee to look into the ecological and other aspects. ಈ ಕಮಿಟಿ ರಿಪೋರ್ಟನ್ನು ಕೇಂದ್ರಕ್ಕೆ ಇನ್ನೂ ಕಳುಹಿಸಿಲ್ಲ. ಆದ್ದರಿಂದ ಗಂಗವಳ್ಳಿ ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟಿನ ಕೆಲಸ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಯಾವುದು ಆಗಬೇಕು, ಯಾವುದು ಆಗಬಾರದು ಎಂಬ ವಿಚಾರ ಬೇರೆ. ರಾಜ್ಯ ಸರ್ಕಾರದ ಹಂತದಲ್ಲಿ ಯಾವ ಪ್ರಾಜೆಕ್ಟ್‌ಗಳ ವಿಷಯ ಉಳಿದಿದೆ ಎಂಬುದನ್ನು ನೋಡಿ ಅದನ್ನು ಕ್ಲಿಯರ್ ಮಾಡುವ ಕಡೆ ಗಮನ ಕೊಡಬೇಕಾಗಿತ್ತು. ಮಹಗಾಯಿ ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್ this is to be located in Belgaum District. ಇದರ ಬಗ್ಗೆ field surveys are being done. They are in progress. 20 ಮೆಗಾವಾಟ್ಸ್‌ನ ಕಬಿನಿ ಡ್ಯಾಂ ಪವರ್ ಹೌಸ್ ಏನಿದೆ ಇದರಲ್ಲಿ ಕಾವೇರಿ ನೀರಿನ ಯೂಟಿಲೈಸೇಷನ್ ವಿಚಾರ ಇದೆ. ಇದರ ಬಗ್ಗೆ Central Water Commission has sought certain clarification from the State Government. ಆದರೆ ನಮ್ಮ ರಾಜ್ಯ ಸರ್ಕಾರದಿಂದ ಇನ್ನೂ ಕೂಡ ಕ್ಲಾರಿಫಿಕೇಷನ್‌ಗೆ ಉತ್ತರ ಕಳುಹಿಸಿ ಕೊಟ್ಟಿಲ್ಲ. ಅದು ರಾಮಕೃಷ್ಣ ಹೆಗಡೆಯವರ ಜೇಬಿನಲ್ಲೇ ಉಳಿದಿದೆ. ಕೇಂದ್ರ ಸರ್ಕಾರದವರು ಹೇಗೆ ಕ್ಲಿಯರ್ ಮಾಡುತ್ತಾರೆ ? 59 ಕೋಟಿ ರೂಪಾಯಿಗಳ ಅಂದಾಜಿನ 4x13 ಮೆಗಾವಾಟ್ಸ್ ಗ್ಯಾಸ್ ಟರ್ಬೈನ್ ಪ್ರಾಜೆಕ್ಟ್ ಒಂದಿದೆ. ನಾನು ಇದುವರೆಗೆ ಹೇಳುತ್ತಿರುವುದೆಲ್ಲಾ ಪವರ್ ಪ್ರಾಜೆಕ್ಟ್‌ಗಳು. ದಿನಾಂಕ 4-7-1985ರಲ್ಲಿ ಸೆಂಟ್ರಲ್ ಎಲೆಕ್ಟ್ರಿಸಿಟಿ ಅಥಾರಿಟಿ ಮೀಟಿಂಗಿನಲ್ಲಿ ಈ ವಿಚಾರ ಚರ್ಚೆಯಾಗಿದೆ. ಅಂದಿನ ಮೀಟಿಂಗಿನಲ್ಲಿ ಇದನ್ನು ಮಾಡಬಹುದು ಎಂದು ಒಪ್ಪಿಗೆ ಕೊಟ್ಟಿದ್ದಾರೆ. Minutes of that meeting are awaited. That matter is in progress at the Central Government level. 2x210 ಮೆಗಾವಾಟ್ಸ್‌ನ ಮಂಗಳೂರು ಮಲ್ಟಿ ಫ್ಯುಯಲ್' ಪ್ರಾಜೆಕ್ಟ್ ಏನಿದೆ ಇದರ feasibility report has been furnished to the Central Authority. The approved power plans for Karnataka contains a lumpsum of Rs. 5 crores for all the schemes in the Seventh Plan. ಇಷ್ಟಾದರೂ ಕೂಡ ಕೇಂದ್ರ ಸರ್ಕಾರದವರು 7ನೇ ಯೋಜನೆಯಲ್ಲಿ 5 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ರಾಜ್ಯ ಸರ್ಕಾರದಿಂದ ಉತ್ತರಗಳು ಬರದಿದ್ದರೂ ಕೂಡ ಪ್ರಿಲಿಮಿನರಿ ಕೆಲಸಗಳಿಗೆ ಹಣ ಬೇಕಾಗುತ್ತದೆ ಎಂಬ ದೃಷ್ಟಿಯಿಂದ 5 ಕೋಟಿ ರೂಪಾಯಿಗಳ ಲಂಪ್ಸಂ ಗ್ರಾಂಟನ್ನು ಸುಮ್ಮನೆ ತೆಗೆದಿಟ್ಟಿದ್ದಾರೆ. ಕೆಲಸ ಪ್ರಾರಂಭ ಮಾಡಲಿ, ನಂತರ ಅಡಿಷನಲ್ ಗ್ರಾಂಟ್ ಕೊಡುತ್ತಾ ಹೋಗಬಹುದು ಎಂಬ ದೃಷ್ಟಿಯಿಂದ ಆ ಹಣವನ್ನು ಇಟ್ಟಿದ್ದಾರೆ. ಕಾಳಿ ಪ್ರಾಜೆಕ್ಟ್ ಕೆಲಸ ಪ್ರೋಗ್ರೆಸ'ನಲ್ಲಿದ್ದರೂ ಕೂಡ ರಾಜ್ಯ ಸರ್ಕಾರ ಇದಕ್ಕೆ ಸರಿಯಾಗಿ ಹಣ ಇಡದೇ ಇರುವುದರಿಂದ ಕೆಲಸ ಕುಂಠಿತವಾಗಿದೆ. ಇದರಿಂದ ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್‌ನ ಉಪಯೋಗವನ್ನು ಪಡೆಯುವುದಕ್ಕೆ ಆಗಿಲ್ಲ. ಆದರೂ ಕೂಡ ಎಲೆಕ್ಟ್ರಿಸಿಟಿ ಟಾರಿಫ್ ರೇಟ್ಸ್ ಜಾಸ್ತಿ ಮಾಡುವುದಕ್ಕೆ ಕೇಂದ್ರ ಸರ್ಕಾರ ಹೊಣೆ ಎಂಬ ಮಾತನ್ನು ರಾಮಕೃಷ್ಣ ಹೆಗಡೆಯವರು ಹೇಳಿರುವುದು ಪತ್ರಿಕೆಗಳಲ್ಲಿ ಬಂದಿದೆ. ನಮ್ಮ ಪ್ರಾಜೆಕ್ಟ್‌ಗಳನ್ನೆಲ್ಲಾ ಕೇಂದ್ರ ಸರ್ಕಾರ ಕ್ಲಿಯರ್ ಮಾಡದಿರುವುದರಿಂದ ನಾವು ಬೆಲೆ ಜಾಸ್ತಿ ಮಾಡಬೇಕಾಗಿದೆ ಎಂಬ ಮಾತನ್ನು ಹೇಳಿ

ದ್ದಾರೆ. ಆದ್ದರಿಂದ ನಾನು ಏನು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇನೆ ಇದರ ಬಗ್ಗೆ ರಾಮಕೃಷ್ಣ ಹೆಗಡೆಯವರು ಉತ್ತರ ಕೊಡಬೇಕು. ಈ ವಿಚಾರಗಳನ್ನು ಸದನದ ಮುಂದೆ ಇಡಬೇಕು. ಕೇಂದ್ರದಿಂದ ಒಪ್ಪಿಗೆ ತರುವುದಕ್ಕೆ ನಾವು ತಯಾರಾಗಿದ್ದೇವೆ. ಯಾವುದೇ ಪ್ರಾಜೆಕ್ಟ್ ಆಗಿರಲಿ, ರಾಜ್ಯದ ಹಿತವನ್ನು ಕಡೆಗಣಿಸಿ ಜನತಾ ಪಕ್ಷದ ಸರ್ಕಾರ ಇದೆ ಎಂಬ ಭಾವನೆಯಿಂದ ಮಂಜೂರು ಮಾಡಬಾರದು ಎಂದು ಹೇಳುವುದಿಲ್ಲ. ಏಕೆಂದರೆ, ಅವರೇ ಅಧಿಕಾರದಲ್ಲಿ ಗೂಟ ಹೊಡೆದುಕೊಂಡು ಇರುವುದಕ್ಕಾಗುವುದಿಲ್ಲ.

ಶ್ರೀ ಸಾಲೇರೆ ಸಿದ್ದಪ್ಪ.---ಜನ ಒಪ್ಪಿದರೆ ನೀವೇ ಬನ್ನಿ.

ಶ್ರೀ ಎಸ್. ಬಂಗಾರಪ್ಪ.—ಸಾಲೇರ ಸಿದ್ದಪ್ಪನವರು ತೂಕವಾಗಿ ಚೆನ್ನಾಗಿ ಮಾತನಾಡುತ್ತಾರೆ. ನಮ್ಮ ಶಿವಮೊಗ್ಗ ಜಿಲ್ಲೆಯವರೇ ಹಾಗೆ. ಅದೇನೇ ಇರಲಿ, ಇಷ್ಟೊಂದು ಪ್ರಾಜೆಕ್ಟ್‌ಗಳ ವಿಷಯ ಏನು ಸದನದ ಮುಂದಿಟ್ಟಿದ್ದೇನೆ ಇದರ ವಿಚಾರದಲ್ಲಿ ಕೇಂದ್ರ ಸರ್ಕಾರದ ಮೇಲೆ ಅನ್ಯಾಯವಾಗಿ ದೋಷಾರೋಪಣೆ ಮಾಡುವುದಕ್ಕೆ ರಾಜ್ಯ ಸರ್ಕಾರಕ್ಕೆ ಮತ್ತು ರಾಮಕೃಷ್ಣ ಹೆಗಡೆಯವರಿಗೆ ಯಾವ ನೈತಿಕ ಹಕ್ಕಿದೆ ? I think he is in the habit of making allegations. Continuously he is making these allegations. ಇಂಥ ಕೆಟ್ಟ ರಾಜಕಾರಣವನ್ನು ಮಾಡಹಾರದು. ಎಷ್ಟು ದಿವಸ ಜನರನ್ನು ತಪ್ಪುದಾರಿಗೆ ಎಳೆಯುವುದಕ್ಕೆ ಸಾಧ್ಯ ? ನಾನು ಏನು ಸದನದ ಮುಂದೆ ವಿಚಾರಗಳನ್ನು ಹೇಳಿದ್ದೇನೆ ಇದನ್ನು ನಾಳೆ ಜನರ ಮುಂದೆ ಇಡುತ್ತೇವೆ. ನಂತರ ಜನರ ತೀರ್ಪಿಗೆ ತಲೆ ಬಾಗುತ್ತೇನೆ. ಈಗಲೂ ಕೂಡ ರಾಜ್ಯದ ಹಿತದೃಷ್ಟಿಯಿಂದ ಈ ಸರ್ಕಾರಕ್ಕೆ ಮತ್ತು ರಾಮಕೃಷ್ಣ ಹೆಗಡೆಯವರಿಗೆ ಕಿವಿಮಾತು ಹೇಳುತ್ತೇನೆ, ಈಗಲಾದರೂ ಜನಹಿತದ ಬಗ್ಗೆ ಗಮನ ಕೊಟ್ಟು ಕೇಂದ್ರದ ಮೇಲೆ ಬೀಳತಕ್ಕ ಪದ್ಧತಿಯನ್ನು ಬಿಡಿ. ನಿಮ್ಮ ವಿಚಾರಧಾರೆಯಲ್ಲಿ, ನೋಡತಕ್ಕ ದೃಷ್ಟಿಕೋನದಲ್ಲಿ ಬದಲಾವಣೆ ಅಗತ್ಯ. ಹಾಗಿಲ್ಲದಿದ್ದರೆ ಕಷ್ಟವಾಗುತ್ತದೆ. ಕೇಂದ್ರ ಸರ್ಕಾರ ಏನೂ ಅನ್ಯಾಯ ಮಾಡುವುದಿಲ್ಲ. ಪ್ರಧಾನ ಮಂತ್ರಿಗಳ ಹತ್ತಿರ ನಾನು ಮಾತನಾಡಿದ್ದೇನೆ. ನಮ್ಮ ಪಕ್ಷದ ಅನೇಕ ಮುಖಂಡರು ಮಾತನಾಡಿದ್ದಾರೆ. ಈ ಪ್ರಾಜೆಕ್ಟ್‌ಗಳ ಬಗ್ಗೆ, ಇರಿಗೇಷನ್ ಪ್ರಾಜೆಕ್ಟ್‌ಗಳ ಬಗ್ಗೆ ನಾನು ಮಾತನಾಡಿದ್ದೇನೆ. ಪ್ರಿಯಾರಿಟಿ ವಿಚಾರದಲ್ಲಿ ಚರ್ಚೆ ಮಾಡಿದ್ದೇನೆ. ನಿಮಗೆ ರಾಜ್ಯದ ಹಿತದ ಬಗ್ಗೆ ವಿಷ್ಟು ಲಕ್ಷ್ಯವಿದೆಯೋ ಅದಕ್ಕಿಂತ ಎಳ್ಳಷ್ಟೂ ಕೂಡ ಕಡಿಮೆ ಲ್ಲಕ್ಷ್ಯ ನಮಗಿಲ್ಲ. ಇನ್ನೂ ಜಾಸ್ತಿ ಇಟ್ಟುಕೊಂಡಿದ್ದೇವೆಂಬ ಹೆಗ್ಗಳಿಕೆಯ ನಿಲುವು ನಮ್ಮದು. ಯಾವುದೇ ವಿಚಾರ ಇರಲಿ, ಕೇಂದ್ರದ ಜೊತೆ ನಿಮ್ಮ ವ್ಯವಹಾರ, ನಿವು ನೋಡತಕ್ಕ ವಿಚಾರಧಾರೆ ಮತ್ತು ದೃಷ್ಟಿಕೋನವನ್ನು ಬದಲಾವಣೆ ಮಾಡದಿದ್ದರೆ ನಿಮ್ಮ ಯಾವುದೇ ಯೋಚನೆಯೂ ಮಂಜೂರಾಗುವುದಕ್ಕೆ ಸಾಧ್ಯವಿಲ್ಲ. ಕೇಂದ್ರ ಸರ್ಕಾರ ಏನೂ ಅನ್ಯಾಯ ಮಾಡುವುದಿಲ್ಲ. ನೀವು ಕೇಂದ್ರದ ಜೊತೆ ಸಹಕಾರ ಕೊಡಬೇಕು. ರೈಲ್ವೆ ಸ್ಲೀಪರ್ ವಿಚಾರದಲ್ಲಿ ಹೇಳಿದ್ದಾರೆ. ಕಾರವಾರ ರೈಲ್ವೆ ಲೈನ್ ಬಗ್ಗೆ ಗಮನ ಕೊಟ್ಟಿಲ್ಲ, ಗುಂತಕಲ್ ಲೈನ್ ಬ್ರಾಡ್‌ಗೇಜ್ ಮಾಡುವುದಕ್ಕೆ ಹಣ ಕೊಟ್ಟಿಲ್ಲ ಎಂದು ಹೇಳಿದ್ದಾರೆ. ನಾವೂ ಈ ಬಗ್ಗೆ ಹೇಳಿದ್ದೇವೆ; ಒತ್ತಡ ತಂದಿದ್ದೇವೆ. ಬೆಂಗಳೂರು ಮೈಸೂರು ಮೀಟರ್‌ಗೇಜನ್ನು ಬ್ರಾಡ್‌ಗೇಜ್ ಮಾಡುವುದಕ್ಕೆ ಹಣ ಕೊಟ್ಟಿಲ್ಲ ಎಂದು ಹೇಳಿದ್ದಾರೆ. ಇದಕ್ಕೆ ಕಾರಣ ಏನು ? ಶ್ರೀಮಾನ್ ದೇವರಾಜ ಅರಸ್ ಅವರು ಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಜೊತೆ ಒಂದು ಒಪ್ಪಂದವಾಗಿತ್ತು. ಈ ಕೆಲಸಕ್ಕೋಸ್ಕರ ರಾಜ್ಯ ಸರ್ಕಾರದವರು ಮರದ ಹಲಗೆಗಳನ್ನು ಹಾಗೂ ತುಂಡುಗಳನ್ನು ಕೊಡಬೇಕೆಂದು ಒಪ್ಪಂದ ಆಗಿದೆ ನಾವು ಏಕೆ ಮರವನ್ನು ಫ್ರೀಯಾಗಿ ಕೊಡಬೇಕು, ಅವರು ನಮ್ಮನ್ನು ಫ್ರೀಯಾಗಿ ರೈಲಿನಲ್ಲಿ ಕರೆದುಕೊಂಡು ಹೋಗುತ್ತಾರೆಯೇ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದನ್ನು ನಾನು ಪತ್ರಿಕೆಗಳಲ್ಲಿ ಓದಿದೆ. ಈ ಬಗ್ಗೆ ಹಿಂಬೆ ಒಪ್ಪಂದ ಆಗಿದ್ದರೂ ಕೂಡಾ ಇವರು ಆಗುವುದಿಲ್ಲ ಎಂದರೆ ಆ ಕೆಲಸ ಅಲ್ಲಿಗೇ ನಿಲ್ಲುತ್ತದೆ. ಈ ಕೆಲಸ ನಿಲ್ಲಬೇಕೆಂದು ಇವರ ಆಸೆ ಇದ್ದಹಾಗೆ ಕಾಣುತ್ತದೆ. ಈ ಬಗ್ಗೆ ಒಪ್ಪಂದ ಆಗದಿದ್ದರೆ ಅದು ಬೇರೆ ವಿಷಯ. ಇವರು ಒಪ್ಪಂದ ಮುರಿದು ಮರ ಕೊಡದಿದ್ದರೆ ಕೆಲಸ ಆಗುವುದಿಲ್ಲ. ಆಗ ಇವರು ಕೇಂದ್ರದ ಮೇಲೆ ಮಲತಾಯಿ ಧೋರಣೆ ಎಂದು ತೋರಿಸುತ್ತಾರೆ. ಒಟ್ಟಿನಲ್ಲಿ ಬ್ರಾಡ್‌ಗೇಜ್ ಆಗಲು ಇವರಿಗೆ ಇಷ್ಟವಿಲ್ಲವೆಂದು ಕಾಣುತ್ತದೆ. ಹೇಗಾದರೂ ಆಗಲಿ ಈ ವಿಚಾರವನ್ನು ಮುಖ್ಯಮಂತ್ರಿಯವರಿಗೇ ಬಿಡುತ್ತೇನೆ.

ಇನ್ನು ವಿಜಯನಗರ ಉಕ್ಕಿನ ಕಾರ್ಖಾನೆ ಬಗ್ಗೆ ಪದೇ ಪದೇ ಹೇಳುತ್ತಿದ್ದೇವೆ. ಕೊನೆಯ ಪಕ್ಷ 7ನೇ ಯೋಜನೆಯಲ್ಲಾದರೂ ಇದು ಆಗಬೇಕೆಂದು ಹೇಳುತ್ತಾ ಬಂದಿದ್ದೇವೆ. ರಾಜ್ಯ ಸರ್ಕಾರ ವಿದ್ಯುತ್ ಕೊಟ್ಟರೆ 7ನೇ ಯೋಜನೆಯಲ್ಲಿ ಇದು ಆಗುತ್ತದೆಂದು ಕೇಂದ್ರದವರು ಹೇಳಿದ್ದಾರೆ, ಈ ಬಗ್ಗೆ ನಾನು ಹೆಚ್ಚು ಚರ್ಚೆಮಾಡಲು ಹೋಗುವುದಿಲ್ಲ. ಎಲ್ಲಕ್ಕೂ ಇವರು ಕೇಂದ್ರದವರು ಅನ್ಯಾಯ ಮಾಡಿದ್ದಾರೆಂದು ಹೇಳುತ್ತಾರೆ. ಆದರೆ ಇವರು 1977-78-79ರಲ್ಲಿ ಅಧಿಕಾರದಲ್ಲಿ ಇದ್ದರು. ಹಾಗೂ ರಾಮ

ಕೃಷ್ಣ ಹೆಗಡೆಯವರು ಆಗ ಜನತಾ ಪಕ್ಷದ ಜನರಲ್ ಸೆಕ್ರೆಟರಿಯಾಗಿದ್ದರು. ಅ ಸಂದರ್ಭದಲ್ಲಿ ನೀವು ಏನು ಮಾಡುತ್ತಿದ್ದಿರಿ ? ಆಗ ಮಂಜೂರು ಮಾಡತಕ್ಕ ಬುದ್ಧಿ ನಿಮಗೆ ಏಕೆ ಬರಲಿಲ್ಲ ? ಈಗ ನಾವಿಬ್ಬರೂ ಸೇರಿ ಕೇಂದ್ರಕ್ಕೆ ಒತ್ತಡ ತರೋಣ. ಮಂಜೂರು ಮಾಡಬೇಕೆಂದು ಹೇಳೋಣ. ಮಾನ್ಯ ಸಭಾಧ್ಯಕ್ಷಿಣಿಯವರೇ ಇವರು ಅನೇಕ ಆಪಾದನೆಗಳನ್ನು ಮಾಡಿದ್ದಾರೆ. ಇನ್ನು ಕಿರ್ಲೋಸ್ಕರ್ ಬಗ್ಗೆ ಮುಖ್ಯಮಂತ್ರಿಗಳು ಒಂದು ಹೇಳಿಕೆ ಕೊಟ್ಟಿದ್ದಾರೆ, ಹಾಗೂ ಇದರ ಬಗ್ಗೆ ಮಾನ್ಯ ವೀರೇಂದ್ರ ಪಾಟೀಲರೂ ಹೇಳಿಕೆ ಕೊಟ್ಟಿದ್ದಾರೆ. ಇದು ಕಮರ್ಷಿಯಲ್ ವೆಹಿಕಲ್ಸ್ ಬಗ್ಗೆ ಇರತಕ್ಕ ವಿಚಾರ. Application of utilisation for production of Commercial Vehicles ಅವರು ಆಂಧ್ರ ಪ್ರದೇಶದ ಮೇಡಕ್ ಜಿಲ್ಲೆಯಲ್ಲಿ ಮೊದಲು ಮಾಡಬೇಕೆಂದು ಕರೆದಿದ್ದರು. ಅದು 1985ರಲ್ಲಿ ರಿಜೆಕ್ಟ್ ಆಯಿತು. ರೀಕನ್ಸಿಡರೇಷನ್‌ಗೂ ಕೂಡಾ ಅವರು ಹಾಕಿಕೊಂಡಿದ್ದರು. ಕೊನೆಗೆ ಕರ್ನಾಟಕದಲ್ಲಿ ಯಾವ ಜಿಲ್ಲೆಯಲ್ಲಿ ಕೈಗಾರಿಕೆ ಇಲ್ಲ ಅಲ್ಲಿಗೆ ಇದನ್ನು ಕೊಡಬೇಕೆಂದು ಹೇಳಿದರು. ಆದರೆ ಕೆಪಾಸಿಟಿ ಕನ್ಸ್ಟ್ರೈಂಟ್ ವಿಚಾರ ಬಂದಾಗ ಈಗಾಗಲೇ ಈ ಯೂನಿಟ್ಸ್ ಹೆಚ್ಚು ಇದೆ ನಾಳೆ ಅನ್ಯಾಯ ಆಗಬಾರದು ಎನ್ನುವ ದೃಷ್ಟಿಯಿಂದ ಒಪ್ಪಿಗೆ ಕೊಡುವುದಕ್ಕೆ ಆಗುವುದಿಲ್ಲ, ಏಕೆಂದರೆ. ಈಗಾಗಲೇ ಕಮರ್ಶಿಯಲ್ ವೆಹಿಕಲ್ಸ್ ಸುಮಾರು ಶೇಕಡಾ 50 ಭಾಗ ಜಾಸ್ತಿ ಇವೆ, ಆದ್ದರಿಂದ ಈ ಬಗ್ಗೆ ಲೈಸೆನ್ಸ್ ಕೊಡುವುದನ್ನು ಕೈಬಿಟ್ಟಿದ್ದಾರೆ. ಇದನ್ನು ಮಾಡುವುದು ಉತ್ತಮ ಅಲ್ಲ ಎಂದು 2 ರೀತಿಯ ದ್ವಂದ್ವ ಅಭಿಪ್ರಾಯಗಳು ಬಂದುದರಿಂದ ಅದನ್ನು ಮೆಡಕ್‌ನಲ್ಲಿ ಮಾಡಿದರೂ ಕೊಡುವುದಕ್ಕಾಗುವುದಿಲ್ಲವೆಂದರು. ಇನ್ನು ವಾಯುದೂತ್ ಸರ್ವೀಸ್ ಬಗ್ಗೆ ಇವರು ಮಾತನಾಡಿದ್ದಾರೆ. ಇವತ್ತು ಹುಬ್ಬಳ್ಳಿ–ಧಾರವಾಡಕ್ಕೆ ಬೇಗ ಹೋಗುವುದಕ್ಕೆ ಆಗುವುದಿಲ್ಲ, ಗುಲ್ಬರ್ಗಕ್ಕೆ ಬೇಗ ಹೋಗುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತಾರೆ, ಈಗೇನೋ ಮೈಸೂರು ಮಾರ್ಗವಾಗಿ ತಿರುಪತಿಗೆ ವಾಯುದೂತ್ ಸರ್ವೀಸ್ ಇದೆ. ಇವತ್ತು ಮಿಕ್ಕ ಕಡೆ ವಾಯುದೂತ್ ಸರ್ವೀಸ್ ಇಲ್ಲದೇ ಇರುವುದಕ್ಕೆ ಕಾರಣ ಏನು ? ಇದಕ್ಕೆ ಕಾರಣ ಏರ್‌ಸ್ಟ್ರಿಪ್. Government of India, Civil Aviation Department, is prepared to introduce Vayudoot Service between Bangalore-Hubli-Goa. The Minister of Tourism & Civil Aviation has also desired that the State Government may exempt Vayudoot Service fram Sales Tax on fuel to make it viable. ಇವರು ಏರ್‌ಸ್ಟ್ರಿಪ್ ಅನುಕೂಲ ಮಾಡದೇ ಫ್ಯೂಯಲ್‌ಗೆ ಟ್ಯಾಕ್ಸ್ ಎಕ್ಸೆಂಪ್ಷನ್ ಮಾಡದೇ ಇರುವುದು ಅವರು ಅವನ್ನು ಓಡಾಡಿಸಲು ಆಗದೇ ಇರುವುದಕ್ಕೆ ಕಾರಣ ಆಗಿದೆ ಎಂಬುದನ್ನು ನಾನು ತಮ್ಮ ಗಮನಕ್ಕೆ ತರುತ್ತೇನೆ. ಟ್ಯಾಕ್ಸ್ ಎಕ್ಸೆಂಪ್ಷನ್ ಮಾಡದಿದ್ದರೆ ಕಾಸ್ಟ್ ಜಾಸ್ತಿಯಾಗಿ ಇದು ನಂತರ ಪ್ಯಾಸೆಂಜರ್ಸ್ ಮೇಲೆ ಬೀಳುತ್ತದೆ. ಇನ್ನು ಸಿಮೆಂಟ್ ಪ್ಲಾಂಟ್‌ಗಳ ಬಗ್ಗೆ ಕೇಂದ್ರದ್ದು ಮಲತಾಯಿ ಧೋರಣೆ ಎಂದು ಹೇಳುತ್ತಿದ್ದಾರೆ. ನಮ್ಮ ರಾಜ್ಯದಲ್ಲಿ ಸಿಮೆಂಟಿನ ಮಿನಿ ಹಾಗೂ ಲಾರ್ಜ್ ಸ್ಕೇಲ್ ಪ್ಲಾಂಟ್‌ಗಳು ಇವೆ. ಇವತ್ತು ನಮ್ಮ ಪ್ರಾಜೆಕ್ಟ್‌ಗಳಿಗೆ ಹೆಚ್ಚು ಸಿಮೆಂಟ್ ಬೇಕಾಗಿದೆ. ಹಾಗೂ ಇದರ ಬೆಲೆ ಕೂಡಾ ಹೆಚ್ಚು ಇದೆ. ಹಾಗೂ ನಾವು ವಿದ್ಯುತ್ ಬಗ್ಗೆಯೂ ಗಮನ ಕೊಡಬೇಕು. ಇವತ್ತು ಸಿಮೆಂಟ್ ತಯಾರು ಮಾಡಬೇಕಾದರೆ ಹೆಚ್ಚು ವಿದ್ಯುತ್ ಬೇಕಾಗುತ್ತದೆ. ಇವತ್ತಿನ ದಿವಸ ನಮ್ಮಲ್ಲಿ ಇರುವ ಪವರ್‌ಕಟ್‌ನ್ನು ಮೀರಿಸಿ ನಾವು ಯಾವರೀತಿ ಅದನ್ನು ಒದಗಿಸಬಹುದು ಎನ್ನುವುದನ್ನು ನೋಡಬೇಕಾಗಿದೆ. ಇವತ್ತಿನ ದಿವಸ 80ರಿಂದ 90 ಪರ್ಸೆಂಟ್ ಪವರ್ ಕಟ್ ಆಗುತ್ತಿರುವುದನ್ನು ನೋಡುತ್ತಿದ್ದೇವೆ. ಇವತ್ತು ದೀಪಕ್ಕೆ, ಸ್ನಾನಕ್ಕೆ, ಏತ ನೀರಾವರಿಗೆ ಬೇಕಾಗುವ ವಿದ್ಯುತ್‌ಗೇ ತೊಂದರೆ ಇದೆ. ಇದೆಲ್ಲಾ ಇದ್ದರೂ ಕೂಡಾ ಎಸಿಸಿ.ನವರು ಕರ್ನಾಟಕದ ಯಾವುದೇ ಪ್ರದೇಶದಲ್ಲಿ ಸಿಮೆಂಟ್ ತಯಾರಿಸುವ ಘಟಕ ಹಾಕಲು ರೆಡಿಯಾಗಿದ್ದಾರೆ. ಇವತ್ತು ಕರ್ನಾಟಕದಲ್ಲಿ ಇದನ್ನು ಎಲ್ಲಿ ಲೊಕೇಟ್ ಮಾಡಬೇಕು ಎನ್ನುವುದರ ಬಗ್ಗೆ ಡಿಸ್‌ಪ್ಯೂಟ್ ಬಂದಿದ್ದು ರಾಜ್ಯ ಸರ್ಕಾರ ಇದನ್ನು ಬಗೆಹರಿಸಬೇಕಾಗಿದೆ. ಇದನ್ನು ಗುಲ್ಬರ್ಗಾದಲ್ಲಿ ಮಾಡುವ ವಿಚಾರ ಬಂದಿದೆ. ಈ ಬಗ್ಗೆ ರಿಮೈಂಡರ್ ಬಂದಿದ್ದರೂ ಕೂಡಾ ರಾಜ್ಯ ಸರ್ಕಾರ ಇವತ್ತಿನವರೆಗೂ ಕಣ್ಣುಬಿಟ್ಟು ನೋಡಿಲ್ಲ. ಹಾಗೂ ಯಾವ ತೀರ್ಮಾನವನ್ನೂ ಮಾಡಿಲ್ಲ. ಈ ರೀತಿಯ ಅನೇಕ ಅಂಕಿಅಂಶಗಳು ನನ್ನಲ್ಲಿ ಇವೆ. ಲೆಟರ್ ಆಫ್ ಇಂಟೆಂಟ್ ಬಗ್ಗೆ, ಇಂಡಸ್ಟ್ರೀ ಬಗ್ಗೆ, ಇಂಡಸ್ಟ್ರೀ ಲೈಸೆನ್ಸ್ ವಿಚಾರವಾಗಿ ಕೇಂದ್ರ ಸರ್ಕಾರ ಮಲತಾಯಿ ಧೋರಣೆ ತೋರಿಸುತ್ತಿದೆ ಎಂದು ಹೇಳುತ್ತಾರೆ. ಇವರ ಸರ್ಕಾರ ಬಂದಮೇಲೆ number of letters of intent given ಎಂಬುದು ದೇಶದಲ್ಲಿ ಎಷ್ಟು ಹಾಗೂ ರಾಜ್ಯದಲ್ಲಿ ಎಷ್ಟು ಇದೆ ಎಂಬುದನ್ನು ಉದಾಹರಣೆಗೆ ಹೇಳುತ್ತೇನೆ. Time consuming factor again 1983ರಲ್ಲಿ ಲೆಟರ್ ಆಫ್ ಇಂಟೆಂಟ್ ಕೊಟ್ಟಿರತಕ್ಕದ್ದು ಆಲ್ ಇಂಡಿಯಾ ಲೆವೆಲ್‌ನಲ್ಲಿ 1955. ಇದರಲ್ಲಿ ಕರ್ನಾಟಕದ್ದು 74. ಪರ್ಸೆಂಟೇಜ್ ತೆಗೆದುಕೊಂಡರೆ ಇದು 8 ಪರ್ಸೆಂಟ್ ಬರುತ್ತದೆ. ಅದೇರೀತಿ

ಇಂಡಸ್ಟ್ರಿಯಲ್ ಲೈಸೆನ್ಸ್ ಆಲ್ ಇಂಡಿಯಾ 1075 ಇದ್ದರೆ ನಮಗೆ 63 ಕೊಟ್ಟಿದ್ದಾರೆ, ಅಂದರೆ 23 ಪರ್ಸೆಂಟ್ ಇದೆ. 1984ರಲ್ಲಿ ಲೆಟರ್ ಆಫ್ ಇಂಟೆಟ್ 1064 ಇದ್ದರೆ ಕರ್ನಾಟಕಕ್ಕೆ 63 ಕೊಟ್ಟಿದ್ದಾರೆ ಅಂದರೆ 5.9 ಪರ್ಸೆಂಟ್ ನಮಗೆ ಸಂದಾಯವಾಗಿದೆ, ಇದೇರೀತಿ ಇಂಡಸ್ಟ್ರಿಯಲ್ ಲೈಸೆನ್ಸ್ 1984ರಲ್ಲಿ 905 ಇದ್ದರೆ ಕರ್ನಾಟಕಕ್ಕೆ 9 ಕೊಟ್ಟಿದ್ದಾರೆ ಅಂದರೆ 5.4 ಪರ್ಸೆಂಟ್ ಇದೆ. ಟೋಟಲ್ ಪರ್ಸೆಂಟೇಜ್ ಆಫ್ ಷೇರ್ 1985ರಲ್ಲಿ ಲೆಟರ್ ಆಫ್ ಇಂಟೆಂಟ್ 729 ಇದ್ದರೆ ಕರ್ನಾಟಕಕ್ಕೆ 38 ಕೊಟ್ಟಿದ್ದಾರೆ, ಅಂದರೆ 5.2 ಪರ್ಸೆಂಟ್ ಆಯಿತು. ಇಂಡಸ್ಟ್ರಿಯಲ್ ಲೈಸೆನ್ಸ್ ಆಲ್ ಇಂಡಿಯ 459, ಇದರಲ್ಲಿ ನಮ್ಮ ಕರ್ನಾಟಕಕ್ಕೆ 29 ಕೊಟ್ಟಿದ್ದಾರೆ ಅಂದರೆ 6.1 ಪರ್ಸೆಂಟ್ ಆಯಿತು. ಮಾನ್ಯ ಅಧ್ಯಕ್ಷರೆ, ಇದೇರೀತಿ ಇನ್ನೂ ಬಹಳಷ್ಟು ಅಂಕಿಸಂಖ್ಯೆಗಳನ್ನು ನಾನು ಕೊಡಬಹುದು. ಟೆಲ್ಕೋ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಅನೇಕ ಹೇಳಿಕೆಗಳನ್ನು ಕೊಟ್ಟಿದ್ದಾರೆ, regarding setting up of vehicle manufacturing factory at Dharwar in North Canara area. ಈ ವಿಚಾರದಲ್ಲಿ ಟೆಲ್ಕೋದವರು ಅರ್ಜಿಯನ್ನು ಹಾಕಿದರೂ ಲೈಸೆನ್ಸ್ ಕೊಡಲಿಲ್ಲವೆಂದು ಹೇಳುತ್ತಿದ್ದಾರೆ. ಕಿರ್ಲೋಸ್ಕರ್ ರವರ ವಿಚಾರದಲ್ಲಿ ಏನು ಹೇಳಿದೆ ಅದೇ ರೀತಿಯಲ್ಲಿ ಟೆಲ್ಕೋದವರು ಕಮರ್ಷಿಯಲ್ ವೆಹಿಕಲ್ಸ್ ಬಗ್ಗ ಹಾಕಿದಾಗಲೂ ಹೇಳಿದೆ.

> "As against the total installed capacity of 1,81,000 commercial vehicles per annum, out of the approved capacity of 3 lakh commercial vehicles per annum, production of commercial vehicles in the last three years was of the order of 90,000 vehicles, that is about 50% of the installed capacity utilised. Telcos application for manufacturing of commercial vehicles in Karnataka was therefore rejected on capacity constraints."

ಮಾನ್ಯ ಮುಖ್ಯ ಮಂತ್ರಿಗಳು ಏನು ಹೇಳುತ್ತಾರೆ, ನಮಗೆ ಧಾರವಾಡದಲ್ಲಿ ಪ್ಲಾಂಟ್ ಬರುತ್ತಿತ್ತು, ಆದರೆ ಈಗ ಅದು ಬರದೆ ನಮಗೆ ಅನ್ಯಾಯವಾಯಿತು ಎಂದು. ಟೆಲ್ಕೋದವರು ಧಾರವಾಡಕ್ಕೆ ಅಪ್ಲಿಕೇಷನ್ ಕೊಟ್ಟಿರುವುದು ತಾ. 10-4-84ರಲ್ಲಿ. ಆದರೆ ಉತ್ತರ ಪ್ರದೇಶದಲ್ಲಿ ಪ್ಲಾಂಟ್ ಸ್ಥಾಪಿಸುವುದಕ್ಕೋಸ್ಕರ ಅರ್ಜಿಯನ್ನು ಹಾಕಿರುವುದು ತಾ. 12-9-83ರಲ್ಲಿ. ಧಾರವಾಡದ ಬಗ್ಗೆ ಇವರು ಅರ್ಜಿಯನ್ನು ಹಾಕಿದ್ದು ತಡವಾದುದರಿಂದ ಇದಕ್ಕೆ ಟೈಂ ಬಾರ್ ಆಗಿದೆಯೆಂದು ಅದನ್ನು ರಿಜೆಕ್ಟ್ ಮಾಡಿದ್ದಾರ. ನಮ್ಮ ಕರ್ನಾಟಕ ರಾಜ್ಯದಲ್ಲಿ ಕೇವಲ ಇವರೊಬ್ಬರದು ಮಾತ್ರ ರಿಜೆಕ್ಟ್ ಆಗಿಲ್ಲ, ಇಷ್ಟಾದರೂ ಕೂಡ ಕೇಂದ್ರ ಸರ್ಕಾರದವರು ಕರ್ನಾಟಕ ಸರ್ಕಾರದವರಿಗೆ ಒಂದು ಪತ್ರವನ್ನು ಬರೆದಿದ್ದಾರೆ, ಏಕೆಂದರೆ ಇವರು ಅರ್ಜಿಯನ್ನು ಹಾಕಿದ ಕೂಡಲೇ ಪವರ್‌ನ್ನು ಕೊಡುವುದಕ್ಕಾಗುವುದಿಲ್ಲ. ಅವರಿಗೆ ನೀರು, ಜಾಗ, ಇನ್ನೂ ಮುಂತಾದುವನ್ನೆಲ್ಲಾ ಕೊಡಬೇಕಾಗುತ್ತದೆ. ಹಾಗೆ ಒದಗಿಸಿಕೊಡದೇ ಹೋದರೆ ಯಾವುದೇ ಕಾರ್ಖಾನೆಯೂ ಪ್ರಾರಂಭವಾಗುವುದಕ್ಕಾಗುವುದಿಲ್ಲ. ಆದರೂ ಕೂಡ ಈ ಟೆಲ್ಕೋದವರ ವಿಚಾರದಲ್ಲಿ ಕರ್ನಾಟಕ ಸರ್ಕಾರದ ಒತ್ತಡ ಇರುವುದರಿಂದ ಇದನ್ನು ನಾವು ಮಾಡುತ್ತೇವೆಂದು ಕೇಂದ್ರ ಸರ್ಕಾರದವರು ಹೇಳುತ್ತಿದ್ದಾರೆ.

ಇನ್ನು ಕುದುರೆಮುಖ ಐರನ್ ಓರ್ ಪ್ರಾಜೆಕ್ಟ್ ಬಗ್ಗೆ ತಮಗೂ ಕೂಡ ಗೊತ್ತಿರಬಹುದು. ಈ ಪ್ರಾಜೆಕ್ಟನ್ನು ಇರಾನ್‌ನವರಿಗೋಸ್ಕರವೇ ಮಾಡಿದ್ದು ಎಂದು ಕೆಲವರು ಹೇಳುತ್ತಿದ್ದರು. ನಮ್ಮ ಸರ್ಕಾರಕ್ಕೂ ಮತ್ತು ಇರಾನ್ ಸರ್ಕಾರಕ್ಕೂ ಒಪ್ಪಂದವಾಗಿ ಸರ್ಕಾರ ಇರುವವರೆಗೂ ಅವರು ಈ ಐರನ್ ಓರನ್ನು ತೆಗೆದುಕೊಳ್ಳುತ್ತಿದ್ದರು. ಷಾ ಸರ್ಕಾರ ಹೋಗಿ ಖೊಮೇನಿ ಸರ್ಕಾರ ಬಂದಮೇಲೆ ಈ ಓರನ್ನು ನಾವು ಪರ್ಚೇಸ್ ಮಾಡುವುದಿಲ್ಲವೆಂದು ಹೇಳಿದರು. ಆಗ ನಾವು ಬೇರೆ ಮಾರ್ಕೆಟನ್ನು ಹುಡುಕಬೇಕಾಯಿತು. ನಂತರ ಇದರ ಬಗ್ಗೆ ಏನು ವ್ಯವಸ್ಥೆ ಮಾಡಬೇಕೆಂದು ಕೇಂದ್ರ ಸರ್ಕಾರದವರು ಯೋಚನೆ ಮಾಡಿದ್ದಾರೆ. ಈಗ ಅದು ಪ್ರೋಸೆಸ್ ಆಗುತ್ತಿದೆ.

ಇನ್ನು ಮಂಡ್ಯ ನ್ಯಾಷನಲ್ ಪೇಪರ್ ಮಿಲ್ಸ್, ವಿಐಎಸ್ಎಲ್. ಇವು ಸಿಕ್ ಮಿಲ್‌ಗಳು. ಇಲ್ಲಿ ಬಹಳಷ್ಟು ಲಾಸ್ ಆಗುತ್ತಿದೆ. ನಮಗೆ ಎಷ್ಟೇ ತೊಂದರೆಯಾದರೂ ಕೂಡ ಈ ಕಾರ್ಖಾನೆಗಳಿಗೆ ಏನಾದರೂ ಮಾಡಿ ಹಣವನ್ನೊದಗಿಸಿ ಚೆನ್ನಾಗಿ ನಡೆಯುವಂತೆ ಮಾಡಬೇಕೆಂದು ಕೇಂದ್ರದವರು ಪ್ರಯತ್ನ ಮಾಡುತ್ತಿದ್ದಾರೆ. ಇದರ ಬಗ್ಗೆ ತಮಗೆ ನಾನು ಅಂಕಿಅಂಶಗಳನ್ನು ಬೇಕಾದರೆ ಕೊಡುತ್ತೇನೆ. ಇದೇ ರೀತಿ ಭಾರತ್ ಗೋಲ್ಡ್ ಮೈನ್ಸ್, ಕೋಲಾರ, ಇದರಲ್ಲಿ ಸಿಕ್ಕತಕ್ಕ ಗೋಲ್ಡ್ ಮುಗಿಯುತ್ತಾ ಬಂತು ಎಂದು ವರದಿಗಳು ಬಂದುವು. ಇತ್ತೀಚೆಗೆ ಕೇಂದ್ರ ಸರ್ಕಾರದ ಸಚಿವರಾದ ಮಾನ್ಯ ಸಾಠೆಯವರು ಬಂದಿ

ದ್ದಾಗ ಆ ಪಕ್ಕದ ಜಮೀನಿನಲ್ಲಿ ಸರ್ವೆ ಕಾರ್ಯ ಕೈಗೊಂಡು ಅಲ್ಲಿ ಮೈನ್ಸ್ ಇದೆಯೆಂದು ತಿಳಿದುಬಂದ ಮೇಲೆ ಮತ್ತೆ ಇದನ್ನು ವಿತಕ್ಕೆ ಮೇಲಕ್ಕೆ ಎತ್ತಬಾರದೆಂದು ತಮ್ಮ ಗಮನವನ್ನು ಹರಿಸಿದ್ದಾರೆ.

ಮಾನ್ಯ ಸಭಾಪತಿಯವರೆ, ಈ ಸಂದರ್ಭದಲ್ಲಿ ನಾನು ಒಂದೇ ಒಂದು ಮಾತನ್ನು ಹೇಳಬಯಸುತ್ತೇನೆ. ಕೇಂದ್ರ ಸರ್ಕಾರದ ಮೇಲೆ ಇವರು ಯಾವ ಯಾವ ಆಪಾದನೆಗಳನ್ನು ಮಾಡಿದ್ದಾರೆ ಅವುಗಳೆಲ್ಲಕ್ಕೂ ಸಂಪೂರ್ಣವಾದ ಉತ್ತರವನ್ನು ಕೊಡಲು ನಾನು ಪ್ರಯತ್ನ ಮಾಡಿದ್ದೇನೆ. I am not defending the Government of India here. ಇದು ಡಿಫೆಂಡ್ ಮಾಡಿಕೊಳ್ಳುವ ವಿಚಾರವಲ್ಲ.

(ಮಾನ್ಯ ಬಿ. ಜಿ. ಬಣಕಾರ'ರವರು ಅಧ್ಯಕ್ಷ ಸ್ಥಾನವನ್ನಲಂಕರಿಸಿದರು)

ಮಾನ್ಯ ಅಧ್ಯಕ್ಷರೆ, ನಾನು ವಾಸ್ತವಾಂಶವನ್ನು ಹೇಳುತ್ತಿದ್ದೇನೆ. ಮಾನ್ಯ ಮುಖ್ಯ ಮಂತ್ರಿಗಳು ಕೇಂದ್ರ ಸರ್ಕಾರದ ಮೇಲೆ ಏನು ಆಪಾದನೆಗಳನ್ನು ಮಾಡಿದ್ದಾರೆ ಅದು ಸರಿಯಲ್ಲ. ನಾನು ಕೊಟ್ಟಿರತಕ್ಕ ಅಂಕಿಅಂಶಗಳನ್ನು ತಾವು ಗಮನಿಸಿದರೆ, ಕೇಂದ್ರ ಸರ್ಕಾರ ನಮ್ಮ ರಾಜ್ಯ ಸರ್ಕಾರಕ್ಕೆ ಯಾವ ಮಲತಾಯಿ ಧೋರಣೆಯನ್ನೂ ಮಾಡಿಲ್ಲ. ಬೇರೆ ರಾಜ್ಯಗಳಿಗಿಂತಲೂ ಹೆಚ್ಚಿನ ಸ್ಥಾನಮಾನಗಳನ್ನು, ಸೌಲಭ್ಯಗಳನ್ನು ನಮ್ಮ ರಾಜ್ಯಕ್ಕೆ ಕೊಡುವ ವಿಚಾರದಲ್ಲಿ ಕೇಂದ್ರ ಸರ್ಕಾರವು ಹಿಂದೆ ಬಿದ್ದಿಲ್ಲ ಎನ್ನುವ ಮಾತನ್ನು ಹೇಳಬಯಸುತ್ತೇನೆ. ಒಂದುವೇಳೆ ಹಾಗೇನಾದರೂ ನಮ್ಮ ರಾಜ್ಯಕ್ಕೆ ಅವರು ಅನ್ಯಾಯವನ್ನು ಮಾಡಿದ್ದರೆ ನಿಮಗಿಂತಲೂ ನಾವು ಮುಂದೆಹೋಗಿ ನಮ್ಮ ರಾಜ್ಯದ ಹಿತವನ್ನು ಕಾಪಾಡಲು ಹೋರಾಟ ಮಾಡಲು ಸಿದ್ಧವಾಗಿದ್ದೇವೆಂದು ಹೇಳಬಯಸುತ್ತೇನೆ.

ಮಾನ್ಯ ಸಭಾಧ್ಯಕ್ಷರೆ, ಇಲ್ಲಿ ನಾನು ಮತ್ತೊಂದು ಮಾತನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಚುನಾವಣೆ ಸಂದರ್ಭದಲ್ಲಿ ನಾವು ಒಂದು ವಿಷಯವನ್ನು ಹೇಳಿದ್ದೇವೆ ; ಏನೆಂದರೆ, ಯಾವುದೇ ಸರ್ಕಾರ ಇಲ್ಲಿ ಬಂದರೂ ಕೂಡ ನಮ್ಮ ರಾಜ್ಯದ ಹಿತವನ್ನು ಕಾಪಾಡುವ ದಿಸೆಯಲ್ಲಿ ನಮ್ಮ ಸಂಪೂರ್ಣ ಬೆಂಬಲವನ್ನು ಕೊಡುತ್ತೇವೆ ಎಂದು ಆದರೆ ಈಗ ಕೇಂದ್ರ ಸರ್ಕಾರದವರು ಕೊಡತಕ್ಕ ಸೌಲಭ್ಯಗಳು ಏನಿವೆ ಅವನ್ನೆಲ್ಲಾ ಸಂಪೂರ್ಣವಾಗಿ ಸದುಪಯೋಗಪಡಿಸಿಕೊಳ್ಳತಕ್ಕ ವಿಚಾರದಲ್ಲಿ ನಮ್ಮ ರಾಜ್ಯ ಸರ್ಕಾರದವರ ಸಂಪೂರ್ಣ ವೈಫಲ್ಯವನ್ನು ನಾವು ಇವತ್ತು ಕಾಣುತ್ತಿದ್ದೇವೆ. ರಾಜ್ಯದ ರೈತರಿಗೆ ಇವರು ಯಾವುದೇ ಸೌಲಭ್ಯವನ್ನೂ ಕೊಟ್ಟಿಲ್ಲ. ನರಗುಂದ, ನವಲಗುಂದದಲ್ಲಿ ರೈತರ ಚಳುವಳಿ ನಡೆದಾಗ ತಾವು ಏನು ಮಾಡಿದ್ದೀರಿ ಎಂಬುದನ್ನು ಒಮ್ಮೆ ನೆನಪುಮಾಡಿಕೊಳ್ಳಿ. ಹಸಿರು ಪೇಟ, ಹಸಿರು ಟವೆಲ್‌ನ್ನು......

ಶ್ರೀ ಕೆ. ಬಿ. ಮಲ್ಲಪ್ಪ.—ಆ ಸಂದರ್ಭದಲ್ಲಿ ತಾವು ರೈತರ ಪ್ರತಿನಿಧಿಯಾಗಿದ್ದಿರಿ. ಹುತಾತ್ಮ ರೈತರ ಜ್ಯೋತಿ ಹೊರಟಾಗ ತಾವೂ ಅದರಲ್ಲಿದ್ದಿರಿ ... .

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸದಸ್ಯರಾದ ಮಲ್ಲಪ್ಪನವರು ವಿಷಯವನ್ನು ಸರಿಯಾಗಿ ತಿಳಿದುಕೊಳ್ಳದೆ ಮಾತನಾಡುವುದು ಸರಿಯಲ್ಲ. ನಾವು ಸಹ ರೈತರ ಸಂಘದ ಕೆಲವು ಬೇಡಿಕೆಗಳಿಗೆ ಬೆಂಬಲವನ್ನು ಕೊಟ್ಟಿದ್ದೇವೆ. ಬೇರೆ ಬೇರೆ ಸಂಬಂಧಗಳಲ್ಲಿ ಅವರುಗಳ ಬೇಡಿಕೆಯನ್ನು ನಾವು ಒಪ್ಪಿಕೊಂಡಿದ್ದೇವೆ ; ನೀವು ಸಹ ಒಪ್ಪಿಕೊಂಡಿರುತ್ತೀರಿ. ಒಳ್ಳೆಯದಿರುವುದಕ್ಕೆ ನಮ್ಮ ಬೆಂಬಲ ಯಾವಾಗಲೂ ಇರುತ್ತದೆ. ಆದ್ದರಿಂದ ರೈತರಿಗೆ ಯಾವುದೇ ಒಂದು ಸೌಲಭ್ಯವನ್ನು ಕೊಡದಿರತಕ್ಕಂಥ ಬಜೆಟ್ ಇದಾಗಿದೆ. ಈವತ್ತು ನಾವು ವಿಚಾರ ಮಾಡುವುದಾದರೆ, ಆಗ್ರಿಕಲ್ಚರ್ ಇನ್‌ಕಮ್ ಟ್ಯಾಕ್ಸ್ ಎಂದು ತಂದಿದ್ದೀರಿ. ಇದನ್ನು ನಾವು ಹಿಂದೆ ತೆಗೆದುಹಾಕಿದ್ದೆವು. ಪ್ಲಾಂಟೇಷನ್ ಮೇಲೆ ಮೊದಲು ಇರಲಿಲ್ಲ ಈಗ ನೀವು ಜಾಸ್ತಿ ಮಾಡಿದ್ದೀರಿ. ಆಗ್ರಿಕಲ್ಚರ್ ಇನ್‌ಕಮ್‌ಟ್ಯಾಕ್ಸ್ ಎಂದು ಜಾಸ್ತಿ ಹಾಕಿದ್ದೀರಿ. ಈವತ್ತು ದೊಡ್ಡ ದೊಡ್ಡ ಪ್ಲಾಂಟೇಷನ್‌ರವರುಗಳನ್ನು ಮಾನ್ಯ ಜೀವಿಜಯರವರ ಸಮಿತಿಯ ವರದಿ ಬಂದಮೇಲೆ ಕಾರ್ಪೊರೇಟ್ ಮತ್ತು ನಾನ್ ಕಾರ್ಪೊರೇಟ ಎಂದು ಎರಡು ವಿಧವಾಗಿ ಮಾಡಿದ್ದೀರಿ. ನಾನ್ ಕಾರ್ಪೊರೇಟ್ 14 ಸಾವಿರ ರೂಪಾಯಿಗಳು ಮತ್ತು ಕಾರ್ಪೊರೇಟ್ 20 ಸಾವಿರ ರೂಪಾಯಿಗಳವರೆಗೆ ಎಕ್ಸೆಮ್‌ಷನ್ ಮಾಡಿದ್ದೀರಿ. ಪ್ಲಾಂಟೇಷನ್ ಬಗ್ಗೆ ಮಾತನಾಡುವಾಗ ಒಂದೇ ಒಂದು ಮಾತನು ಹೇಳಬಯಸುತ್ತೇನೆ. ಸಣ್ಣಪುಟ್ಟ ಪ್ಲಾಂಟೇಷನ್‌ರವರಿಗೆ ಅಂದರೆ 10–15–20 ಎಕರೆ ಇರತಕ್ಕಂಥವರಿಗೆ ಎಕ್ಸೆಮ್‌ಷನ್ ಕೊಟ್ಟಿದ್ದರೆ ನಾನು ಅದನ್ನು ಸ್ವಾಗತ ಮಾಡುತ್ತಿದ್ದೆ. ಆದರೆ ನೀವು ದೊಡ್ಡ ದೊಡ್ಡ ಪ್ಲಾಂಟೇಷನ್‌ರವರಿಗೆ ಎಕ್ಸೆಮ್‌ಷನ್ ಕೊಟ್ಟಿದ್ದೀರಿ. ಕೊಡಗು, ಚಿಕ್ಕಮಗಳೂರು, ಹಾಸನ ಜಿಲ್ಲೆಗಳಲ್ಲಿ ಬರತಕ್ಕಂಥ ದೊಡ್ಡ ದೊಡ್ಡ ಕಂಪನಿಗಳವರು, ತಮಿಳುನಾಡು, ಕೇರಳ ಮುಂತಾದ ಹೊರನಾಡುಗಳಿಂದ ಬಂದಿರತಕ್ಕಂಥ ದೊಡ್ಡ ದೊಡ್ಡ ಕಂಪನಿಗಳವರಿಗೆ ಎಕ್ಸೆಮ್‌ಷನ್ ಕೊಟ್ಟಿದ್ದೀರಿ. ದೊಡ್ಡ ದೊಡ್ಡ ಕಂಪನಿಗಳವರು ಎಕ್ಸೆಮ್‌ಷನ್ ತೆಗೆದುಕೊಂಡಿರತಕ್ಕಂಥದ್ದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಇದು ಒಂದು ಪ್ರಭಾವ ಇಲ್ಲದೆ ಮಾಡಿದ ವಿಚಾರವೇ ಎನ್ನುವುದನ್ನು ಈ ಸಭೆಯ ಗಮನಕ್ಕೆ ತರಬಯಸುತ್ತೇನೆ.

ಅದೇರೀತಿಯಲ್ಲಿ ನೀವು ಬಜ್ಜೆಟ್‌ನಲ್ಲಿ ಎಕ್ಸ್‌ಮ್‌ಪ್ಷನ್ ಕೊಟ್ಟಿರತಕ್ಕಂಥದ್ದು ಯಾವುದಕ್ಕೆ ಎಂಬುದನ್ನು ಹೇಳಬಯಸುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ನನ್ನದೊಂದು ಪಾಯಿಂಟ್ ಆಫ್ ಆರ್ಡರ್ ಅದು ಏನೆಂದರೆ ನಾಲ್ಕು ಗಂಟೆಗೆ ಕುದುರೆ ಮೋತಿ ಪ್ರಕರಣವನ್ನು ಚರ್ಚೆಗೆ ತೆಗೆದುಕೊಳ್ಳುವುದು ಇತ್ತು. ಆದಕಾರಣ ಮಾನ್ಯ ವಿರೋಧಪಕ್ಷದ ನಾಯಕರು ಯಾವಾಗ ತಮ್ಮ ಭಾಷಣವನ್ನು ಮುಗಿಸುತ್ತಾರೋ

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ ಈಗ ಕುದುರೆಮೋತಿ ಪ್ರಕರಣವನ್ನು ಚರ್ಚೆಗೆ ತೆಗೆದುಕೊಳ್ಳಬೇಕಾಗಿರುತ್ತದೆ. ಆದ್ದರಿಂದ ತಾವು ತಮ್ಮ ಭಾಷಣವನ್ನು ನಾಳೆಯದಿವಸ ಮುಂದುವರಿಸಬಹುದು.

ನಿಯಮ 68ರ ಮೇರೆಗೆ ಚರ್ಚೆ

ವಿಷಯ.—ರಾಯಚೂರು ಜಿಲ್ಲೆಯ ಯಲ್ಬುರ್ಗದ ಕುದುರೆಮೋತಿ ಪ್ರಕರಣ.

ಅಧ್ಯಕ್ಷರು.—ನಿಯಮ 68ರ ಮೇಲಿನ ಚರ್ಚೆ.

ಶ್ರೀಮತಿ ಲೀಲಾವತಿ ಆರ್. ಪ್ರಸಾದ್ (ಅಥಣಿ).—ಸನ್ಮಾನ್ಯ ಅಧ್ಯಕ್ಷರೇ, ಸುಮಾರು ಒಂದೂವರೆ ತಿಂಗಳ ಹಿಂದೆ ಕರ್ನಾಟಕ ರಾಜ್ಯದ ರಾಯಚೂರು ಜಿಲ್ಲೆ ಯಲಬುರ್ಗಾ ತಾಲ್ಲೂಕು ಕುದುರೆ ಮೋತಿಯಲ್ಲಿ ನಡೆದಂಥ ಪ್ರಕರಣ ನಿಜವಾಗಿಯೂ ಕೂಡ ಮಹಿಳೆಯರಿಗೆ ಒಂದುರೀತಿಯಾದ ದಿಗ್‌ಭ್ರಾಂತಿಯನ್ನುಂಟುಮಾಡಿದೆ. ಉತ್ತರ ಕರ್ನಾಟಕದಲ್ಲಿ ಮೋತಿ ಎಂದರೆ ಮುಖ ಎಂದು ಅರ್ಥ. ಈ ಒಂದು ಪ್ರಕರಣದಿಂದ ಮಹಿಳೆಯರಿಗೆ ಮುಖ ಎತ್ತದಂತಾಗಿರುತ್ತದೆ. ಈವತ್ತಿಗೂ ಕಲಿಯುಗದಲ್ಲಿ ಇಂಥ ದುಶ್ಶಾಸನರು ಅಲ್ಲಿ ಇಲ್ಲಿ ಇದ್ದಾರೆಂದು ಈ ಒಂದು ಪ್ರಕರಣದಿಂದ ಕಂಡುಬರುತ್ತಿರತಕ್ಕಂಥದ್ದು ಬಹಳ ಶೋಚನೀಯವಾದ ಪರಿಸ್ಥಿತಿಯಾಗಿರುತ್ತದೆ. ಈಗಾಗಲೇ ಈ ವಿಷಯದ ಬಗ್ಗೆ ಮೇಲೆ ಮನೆಯಲ್ಲಿ ಸಾಕಷ್ಟು ಚರ್ಚೆಯಾಗಿ ನಮ್ಮ ಗೃಹಸಚಿವರಾದ ಶ್ರೀಮಾನ್ ರಾಚಯ್ಯನವರು ಇದರ ಬಗ್ಗೆ ಪ್ರತ್ಯಕ್ಷವಾಗಿ ನೋಡಿಕೊಂಡು ಬರುವುದಕ್ಕೆ ಎರಡೂ ಸದನದ ಸದಸ್ಯರನ್ನೊಳಗೊಂಡಂತೆ ಒಂದು ಸಮಿತಿಯನ್ನು ಆಯ್ಕೆಮಾಡಿ ಸ್ಥಳಕ್ಕೆ ಹೋಗಿ ನೋಡಿಕೊಂಡು ಬರುವುದಕ್ಕೆ ಏರ್ಪಾಡು ಮಾಡುತ್ತೇನೆಂದು ಹೇಳಿದ್ದಾರೆ. ಬಹುಶಃ ಈ ಪ್ರಕರಣದಲ್ಲಿ ಈಗಾಗಲೇ ನಮ್ಮ ಸರ್ಕಾರ ಕೆಲವು ಕಾರ್ಯಕ್ರಮಗಳನ್ನು ತೆಗೆದುಕೊಂಡಿರುವುದರಿಂದ ನಾನು ಇದರ ಬಗ್ಗೆ ಹೆಚ್ಚಿಗೆ ಹೇಳುವುದಕ್ಕೆ ಬಯಸುವುದಿಲ್ಲ. ನಾನು ಮಹಿಳೆಗಾಗಿ ಹೆಚ್ಚಿಗೆ ಹೇಳಿದರೂ ಕೂಡ ಮನಸ್ಸಿಗೆ ಬಹಳ ನೋವುಂಟಾಗುತ್ತದೆ. ಆದ್ದರಿಂದ ಇದರಲ್ಲಿ ಯಾರು ತಪ್ಪು ಮಾಡಿದ್ದಾರೋ ಅವರಿಗೆ ರಾಜಕೀಯ ಹಿನ್ನೆಲೆಯಿರಲಿ, ಮಠಾಧಿಪತಿಗಳ ಬೆಂಬಲ ಇರಲಿ, ಊರಿನ ಪ್ರಮುಖರ ಬೆಂಬಲ ಇರಲಿ—ಯಾವುದೇ ಇದ್ದರೂ ತಪ್ಪಿತಸ್ಥರಿಗೆ ಇದು ಖಂಡನೀಯ, ಅವರಿಗೆ ಕಠಿಣವಾದ ಶಿಕ್ಷೆ ಆಗಲೇಬೇಕು. ಕೇವಲ ಬಿಸಿ ಇರುವಾಗ ಚರ್ಚೆಮಾಡಿ, ಒಂದು ಸಮಿತಿಯನ್ನು ಮಾಡಿ ರಿಪೋರ್ಟ್ ಮಂಡನೆ ಮಾಡಿ ಅಲ್ಲಿಗೆ ಮುಕ್ತಾಯ ಮಾಡುವಂತಾಗಬಾರದು. ಏತಕ್ಕೆಂದರೆ, ಇದೇರೀತಿಯಲ್ಲಿ ಈ ಸದನದಲ್ಲಿ ಅನೇಕ ಪ್ರಕರಣಗಳು ನಡೆದುಹೋಗಿರುತ್ತವೆ. ಹಿಂದೆ ಬೆಂಗಳೂರಿನಲ್ಲಿ ವೀನಸ್ ಸರ್ಕಸ್ ದುರಂತ ನಡೆದಾಗಲೂ ಕೂಡ ಈ ಸದನದಲ್ಲಿ ಚರ್ಚೆಯಾಗಿ, ಅದಕ್ಕೆ ಒಂದು ಸಮಿತಿಯನ್ನು ಮಾಡಿ, ಅದು ಒಂದು ತೀರ್ಮಾನವನ್ನು ಕೊಟ್ಟಮೇಲೆ ಅದು ಏನಾಯಿತೋ ಗೊತ್ತಾಗಲಿಲ್ಲ. ಅದೇರೀತಿಯಲ್ಲಿ ಬಿಸಿಯಲ್ಲಿ ಚರ್ಚೆಯಾಗಿ ಮತ್ತೆ ಮರೆಯುವಂತಾಗುವುದು ಬೇಡ. ಕರ್ನಾಟಕದಲ್ಲಿ ಸುಭದ್ರವಾದ ಸರ್ಕಾರವಿದ್ದು ಈ ಸರ್ಕಾರ ಮಹಿಳೆಯರ ಪರವಾಗಿ ಇರುತ್ತದೆ. ಈ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಮಹಿಳೆಯರು ಸಾಕಷ್ಟು ನಿರ್ಭೀತಿಯಾಗಿ ಓಡಾಡಲು ಅವಕಾಶವನ್ನು ಕಲ್ಪಿಸಿಕೊಟ್ಟಿರತಕ್ಕಂಥ ಪರಿಸ್ಥಿತಿಯಲ್ಲಿ ಇಂಥ ಒಂದು ಅತ್ಯಾಚಾರ, ಅನ್ಯಾಯ ನಡೆದಿರತಕ್ಕಂಥಾದ್ದು ಬಹಳ ದುಃಖಕರವಾದ ಸಂಗತಿಯಾಗಿದೆ. ಈಗಾಗಲೇ ಪೋಲೀಸ್ ತನಿಖೆ ನಡೆದಿರುತ್ತದೆ. ಇದು ಒಂದು ಗಂಭೀರವಾದ ಪ್ರಕರಣವಾಗಿರುವುದರಿಂದ ಇದರ ಬಗ್ಗೆ ನ್ಯಾಯಾಂಗದ ತನಿಖೆಯೇ ಆಗಬೇಕಾಗಿರುತ್ತದೆಂದು ಹೇಳತಕ್ಕಂಥ ಸಂದರ್ಭದಲ್ಲಿ ಮಹಿಳೆಯವರು ಈ ವಿಷಯದಲ್ಲಿ ಬಹಳವಾಗಿ ಎದುರುನೋಡುತ್ತಿರುತ್ತಾರೆ. ಇದರ ಬಗ್ಗೆ ಯಾವರೀತಿ ತೀರ್ಮಾನವನ್ನು ತೆಗೆದುಕೊಳ್ಳುತ್ತಾರೆ, ಇದಕ್ಕೆ ಕಾರಣರಾದಂಥವರಿಗೆ ಯಾವ ರೀತಿ ಶಿಕ್ಷೆಯನ್ನು ಕೊಡುತ್ತಾರೆಂಬುದನ್ನು ಎದುರುನೋಡುತ್ತಿರುತ್ತಾರೆ. ಈ ಹಿನ್ನೆಲೆಯಲ್ಲಿ, ಈ ಸಭೆಯಲ್ಲಿ ತಮ್ಮ ಮುಖಾಂತರ ನಮ್ಮ ಸರ್ಕಾರಕ್ಕೆ ಬಿನ್ನವಿಸಿಕೊಳ್ಳುವುದೇನೆಂದರೆ, ಇದನ್ನು ಅಷ್ಟು ಹಗುರವಾದ ಪ್ರಕರಣವೆಂದು ಪರಿಗಣಿಸದೆ, ಕೂಲಂಕುಷವಾಗಿ ಚರ್ಚೆಗೆ ತೆಗೆದುಕೊಂಡು, ಇದನ್ನು ತನಿಖೆಗೆ ಒಳಪಡಿಸಿ ಯಾರು ತಪ್ಪಿತಸ್ಥರಿದ್ದಾರೋ ಅವರಿಗೆ ಉಗ್ರವಾದ ಶಿಕ್ಷೆಯನ್ನು ಕೊಡುವುದರ ಮೂಲಕ ಕರ್ನಾಟಕದ ಮಹಿಳೆಯರಮೇಲೆ ಇನ್ನೊಂದೂ ಇಂಥ ಭೀಕರ ಅತ್ಯಾಚಾರಗಳಿಗೆ ಅವಕಾಶವಾಗುವುದಿಲ್ಲವೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.